
ಕಲ್ಯಾಣ ಕಿರಣ

ಡಿಸೆಂಬರ್ 2003

ಬೆಲೆ : ರೂ. 8-00





ಫ್ಲಾರಿಡಾದ ಆರ್ಲೆಂಡೋದಲ್ಲಿರುವ ಎಪ್‌ಕಾಟ್ ಗೋಳ

ಓಂ ಶ್ರೀ ಗುರುಬಸವಲಿಂಗಾಯ ನಮಃ
866666

ಓಂಕಾರ ಸ್ವರೂಪಿಯಾದ ಲಿಂಗದೇವನಿಗೂ, ಲಿಂಗದೇವನ ಪ್ರತಿನಿಧಿಯಾದ
ಗುರು ಬಸವಣ್ಣನವರಿಗೂ ನಮನಗಳು

8	6	6	6	6	6
ಅಷ್ಟಾವರಣ	ಷಡಾಚಾರ	ಷಟಸ್ಥಲ	ಷಟ್‌ಸೂತ್ರ,	ಷಟ್‌ಶೀಲ	ಷಟ್‌ಕ್ರಿಯೆ

ಬಸವ ಧರ್ಮದ ಕಿರಣವಾಗಲು ಬಾ

ಬಾ ಭಕ್ತ ಶರಣಾಗು ಹೊಂದು ಬಸವನ ಒಲುಮೆ
ಈ ಬಸವ ಮಹಾಮನೆಯು ದಿವ್ಯ ಸ್ಫೂರ್ತಿಯ ಚಿಲುಮೆ || ಪ ||
ಕೂಡಲ ಸಂಗಮನ ದಿವ್ಯ ಸನ್ನಿಧಿಯೊಳು
ಮಂತ್ರಧ್ಯಾನವ ಗೈದು ಹರಿಯುತಿಹಳೀ ಕೃಷ್ಣೆ
ಗುರು ಬಸವನ ಚರಣ ಭಕ್ತಿಯಿಂ ತೊಳೆಯುತ
ಮಲಪ್ರಭೆಯು ಸಾಗಿಹಳು ಓಂಕಾರ ಶ್ರುತಿ ಹಿಡಿದು || 1 ||
ಅಂಗವೆನೆ ಜೀವಾತ್ಮ ಲಿಂಗವೆನೆ ಪರಮಾತ್ಮ
ಲಿಂಗಾಂಗ ಸಮರಸವೆ ಜೀವನದ ಗುರಿಯು
ಬಸವ ಗೀತೆಯ ಸಾರ ಇದುವೆ ಆಗಿಹುದು
ಲಿಂಗದೇವನ ಎಡೆಗೆ ಕರೆದೊಯ್ಯುತಿಹುದು || 2 ||
ಕಲ್ಯಾಣ ಪ್ರಣತೆಯಲಿ ಭಕ್ತಿ ತೈಲವ ಉಂಡು
ಬಸವ ಜ್ಯೋತಿಯು ಅಂದು ಜನಮನವ ಬೆಳಗಿತು
ಸಂಗಮದ ಹಣತೆಯಲಿ ತ್ಯಾಗ ತೈಲವನೆರೆದು
ಬಸವ ಜ್ಯೋತಿಯ ಬೆಳಕ ಜಗಕ್ಕೆಲ್ಲ ಪಸರಿಸುವಾ. || 3 ||
ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು || 4 ||

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಮಡಿವಾಳ ಮಾಚಯ್ಯನವರ ಕಾಲಜ್ಞಾನ

ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನ ನೆರೆವರಯ್ಯ
ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು
ಆನಂದ ಕಡೆಯಾಟ ಜರಿಯಲು ಬೇಡ, ಶಿವನ ಡಂಗುರವೆಂದು ಕರವೆತ್ತಿ ಕೂಗಿ ||

ಕಲ್ಯಾಣ ಕಿರಣ

ಸಂಪುಟ 34 ಬಸವ ಶಕೆ 870 ಆಜೀವ ಸದಸ್ಯತ್ವ 500 ರೂ.

ಸಂಚಿಕೆ 11 ಡಿಸೆಂಬರ್ 2003 ವಾರ್ಷಿಕ ಚಂದಾ 50/- ರೂ.

ಕಿರಣಗನ್ನಡಿ

KALYANA KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 3325335/3322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಬಸವ ಬೀಡಿನಿಂದ ಅಮೆರಿಕಾ ನಾಡಿಗೆ

ಪ್ರವಾಸ ಕಥನ - ಭಾಗ 5

- ಮಾತಾಜಿ

ಮರುದಿನ ಜಯಶೀಲಾ ರಜೆ ಪಡೆದು, ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯ ನೋಡಲು ಕರೆದೊಯ್ದರು. 1787 ರಲ್ಲಿ ಆರಂಭವಾದ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯ ಬಹುಖ್ಯಾತವಾದುದು. 49 ಅಂತಸ್ತುಗಳ ಸುಮಾರು 520 ಅಡಿ ಎತ್ತರದ 200 ಅಡಿ ಅಗಲದ ಮುಖ್ಯ ಕಟ್ಟಡವಿದೆ. ಲೈಬ್ರರಿ, ಮ್ಯುಸಿಯಮ್ ಪ್ರತ್ಯೇಕವಾಗಿವೆ. ಇದರಲ್ಲಿ Cathedral of Learning (ವಿದ್ಯಾ ದೇಗುಲ) ಎಂಬ ಬೃಹತ್ತಾದ ಹಾಲ್ ಇದೆ. ಒಳಭಾಗ ಚರ್ಚಿನಂತೆ ಇದೆ. ಸುತ್ತಲೂ ತರಗತಿಗಳಿವೆ. Nationality class Rooms ಎಂಬ ವಿಶೇಷ ಭಾಗಗಳನ್ನು ನೋಡಲೆಂದೇ ನಾವು ಹೋದುದು. ಇಲ್ಲಿ ಆಫ್ರಿಕಾದಿಂದ ಹಿಡಿದು ಯುಗೋಸ್ಲಾವಿಯಾವರೆಗಿನ 26 ರಾಷ್ಟ್ರಗಳ ಕೆಲವೊಂದು ಶತಮಾನಗಳ ಪರಿಸರವನ್ನು ನಿರ್ಮಿಸಲಾಗಿದೆ. ಆಯಾ ದೇಶಗಳಿಗೆ ಸಂಬಂಧಿಸಿದ ಭಾಷೆ-ತತ್ತ್ವಜ್ಞಾನದ ತರಗತಿಗಳನ್ನು ಅಲ್ಲೇ ನಡೆಸಲಾಗುವುದು. ಇಂಡಿಯಾದ ಸಂಸ್ಕೃತಿಗೆ ಸಂಬಂಧಿಸಿ 4 ರಿಂದ 9 ನೆಯ ಶತಮಾನದವರೆಗಿನ ನಳಂದ ವಿಶ್ವವಿದ್ಯಾಲಯ ಮತ್ತು ಬೌದ್ಧ ಸಂಸ್ಕೃತಿಯನ್ನು ಬಿಂಬಿಸಲಾಗಿದೆ. ಒಂದೂವರೆ ಲಕ್ಷ ಡಾಲರ್ ಸಂಗ್ರಹಿಸಿಕೊಟ್ಟರೆ ಅಂಥ ಒಂದು ಕೋಣೆಯನ್ನು ಆ ಸಂಸ್ಕೃತಿಯ ಪ್ರದರ್ಶನಕ್ಕೆ ವಿಶ್ವವಿದ್ಯಾಲಯ ಕೊಡುವುದಂತೆ. ಒಳಗೆ ಪ್ಲಾಸ್ಟರ್ ಆಫ್ ಪ್ಯಾರಿಸ್‌ದಲ್ಲಿ ಬುದ್ಧನ ವಿವಿಧ ಭಂಗಿಯ ಚಿತ್ರಗಳಿದ್ದವು. ಭಾರತೀಯ ಸಂಸ್ಕೃತಿ ಎಂದು ಕೇವಲ ಬೌದ್ಧ ಸಂಸ್ಕೃತಿಯೊಂದನ್ನೇ ಬಿಂಬಿಸಿದ್ದು, ಇಡೀ ಭಾರತೀಯ ಸಂಸ್ಕೃತಿಯ ಪ್ರಾತಿನಿಧಿಕ ಸುಂದರ ಕುರುಹು ನಟರಾಜನ ನೃತ್ಯಭಂಗಿಯ ಮೂರ್ತಿ ಅಲ್ಲಿ ಕಾಣಬರದುದು ತುಸು ನಿರಾಶೆ ತಂದು, ನೀರಸ ಎನ್ನಿಸಿತು. ವಿವಿಧ ಕೋಣೆಗಳಲ್ಲಿ ಅಲ್ಲಿಯ ಶಿಲಾಕೆತ್ತನೆ, ಕಟ್ಟಿಗೆ ಕೆತ್ತನೆ, ಗಾಜಿನ ಮೇಲೆ ಮಾಡಿದ ಪೇಂಟಿಂಗ್, ಆಯಾದೇಶದ ವಿಶೇಷ ತಯಾರಿಕೆಯ ವಸ್ತು ಪ್ರದರ್ಶನ ಇರುತ್ತದೆ.

ಕೆಲವು ತರಗತಿಗಳಲ್ಲಿ ಬೋಧನೆ ನಡೆಯುತ್ತಿತ್ತು. ವಿದ್ಯಾರ್ಥಿಗಳಿಗೆ ಅಲ್ಲಲ್ಲೇ ಕುರ್ಚಿ-ಟೇಬಲ್ ಸೌಕರ್ಯವಿದ್ದು ಅವರು ತರಗತಿಗಳಿಲ್ಲದ ವೇಳೆಯಲ್ಲಿ ಸ್ವಾಧ್ಯಾಯ ಮಾಡಿಕೊಳ್ಳಲು ಅವಕಾಶವಿತ್ತು. ಇಂಗ್ಲೇಂಡ್-ಅಮೆರಿಕಾಗಳಲ್ಲಿ ಮುಕ್ತ ಸಮಾಜ, ಸ್ವೇಚ್ಛಾ ಜೀವನವಿದೇ ಎಂದೇ ಎಲ್ಲರ ತಿಳುವಳಿಕೆ. ಆದರೆ ವಿಶ್ವವಿದ್ಯಾಲಯದ ಪರಿಸರದಲ್ಲಿ ರಾಜಕೀಯ, ಗೂಂಡಾಗಿರಿ, ಹುಡುಗಿಯರ ಹಿಂದೆ ಸುತ್ತುವುದು, ಚುಡಾಯಿಸುವುದು ಮುಂತಾದ ಕೊಳಕು ಕಾಣಬರುವುದಿಲ್ಲ. ಬರ್ಕ್‌ಲೀ ವಿಶ್ವವಿದ್ಯಾಲಯ ನೋಡಲು ಸ್ಯಾನ್‌ಹೊಸೆಯಲ್ಲಿದ್ದಾಗ ಶರಣ. ಉಮೇಶ್ ವೈದ್ಯಮಠ ಕರೆದೊಯ್ದಿದ್ದರು. ಆಗ ಅಲ್ಲಿ ಒಂದು ಫೋಟೋ ಇತ್ತು. ಮೊದಲು ವಿಶ್ವವಿದ್ಯಾಲಯಗಳಲ್ಲಿ ಯಾವುದೇ ಚಳುವಳಿ, ಪ್ರತಿಭಟನೆಗೆ ಅವಕಾಶವಿರಲಿಲ್ಲವಂತೆ. ಓರ್ವ ವ್ಯಕ್ತಿ ಇದು ಅಭಿಪ್ರಾಯ ಸ್ವಾತಂತ್ರ್ಯದ ದಮನ ಎಂದು ಬಹಿರಂಗ ಸಭೆ ನಡೆಸಿದನಂತೆ. ಮುಂದೆ ಅಭಿಪ್ರಾಯ ಸ್ವಾತಂತ್ರ್ಯ ಅಭಿವ್ಯಕ್ತಿಗೆ ಅವಕಾಶ ಅಧಿಕೃತವಾಗಿ ಸಿಕ್ಕಿತಂತೆ. ಯು.ಎಸ್.ಎ. ಯಲ್ಲಿ ಅಮೆರಿಕಾ ಇರಾಕ್ ಮೇಲೆ ಯುದ್ಧ ಘೋಷಿಸಿದಾಗ, ಬರ್ಕ್‌ಲೇ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಸರ್ಕಾರದ ನೀತಿಯ ವಿರುದ್ಧ ಪ್ರತಿಭಟನೆ

ವ್ಯಕ್ತವಾದುದು ವಿಶೇಷವಂತೆ. ನನಗೂ ಅಲ್ಪಸ್ವಲ್ಪ ನೆನಪಿದೆ ಎಂ.ಎ. ಯಲ್ಲಿ 'ಪಾಶ್ಚಿಮಾತ್ಯ ತತ್ತ್ವಜ್ಞಾನ' ಓದುವಾಗ ಅನೇಕ ತತ್ತ್ವಜ್ಞಾನಿಗಳು ಬರ್ಕ್‌ಲೇ ವಿಶ್ವವಿದ್ಯಾಲಯದವರೇ ಆಗಿದ್ದುದು ಗಮನಾರ್ಹ. ಸಾಮಾನ್ಯವಾಗಿ ಉಡಾಳರು ಸ್ಕೂಲ್ ಲೆವೆಲ್ (12 ನೇ ತರಗತಿಯವರೆಗೆ, ನಮ್ಮಲ್ಲಿ ಪಿ.ಯು.ಸಿ) ಮುಗಿಸುವುದರಲ್ಲೇ ಉದುರಿ ಹೋಗುತ್ತಾರೆ. ಹೀಗಾಗಿ ಗ್ರಾಜುಯೇಷ್ಣ ಮುಗಿಸುವುದು, ಮುಂದೆ ಸಾಗುವುದು ಇಲ್ಲಿ ಜವಾಬ್ದಾರಿಯುತರಾದವರಿಂದಲೇ ಸಾಧ್ಯ.

ಫ್ರೆಸ್ನೋದ ಡಾ|| ನಾಗಭೂಷಣ್ ಹೇಳುತ್ತಿದ್ದರು. ಅವರ ಮಗಳು ಈಗ 12 ನೇ ತರಗತಿ ಪ್ರವೇಶಿಸಿದ್ದಾಳೆ. ಅದು ಮುಗಿಸುವುದರಲ್ಲಿ ಪಠ್ಯ ಕ್ರಮದೊಡನೆ ಇನ್ನೂ ಹೆಚ್ಚಿನ ಸಾಧನೆ ಮಾಡಿರಬೇಕಂತೆ. ಮೆಡಿಕಲ್, ಇಂಜಿನಿಯರಿಂಗ್ ಕೋರ್ಸ್‌ಗೆ ಪ್ರವೇಶ ಪಡೆಯಬೇಕಾದರೆ ಸಾಮಾಜಿಕ ಸೇವೆ, ಆಟಗಳು-ಮುಂತಾದ ಅನೇಕ ದಾಖಲೆ ಪಡೆದಿರಬೇಕು. ವಾರದಲ್ಲಿ ಎರಡು ದಿನ ಒಂದು 'ಚೈಲ್ಡ್ ಕೇರ್' ಆಸ್ಪತ್ರೆಗೆ ಹೋಗಿ ಸ್ವಯಂ ಸೇವಕಳಾಗಿ ಕೆಲಸ ಮಾಡುತ್ತಿದ್ದಾಳೆ. ಅಂದರೆ ಬರೀ ಪುಸ್ತಕ ಜ್ಞಾನವಷ್ಟೇ ಸಾಲದು ಎಂಬುದು ಇವರ ಸಿದ್ಧಾಂತ. ಹೀಗಾಗಿ ನಮ್ಮಲ್ಲಿ ಎಂ.ಬಿ.ಬಿ.ಎಸ್. ಮುಗಿಸಿದವರು ಇಲ್ಲಿಗೆ ಬಂದ ಮೇಲೆ ಪ್ರವೇಶ ಪರೀಕ್ಷೆ ಮುಗಿಸಬೇಕು. ಸಾಂಪ್ರದಾಯಿಕ ಭಾಷೆಯಲ್ಲಿ ಹೇಳುವುದಾದರೆ ಶೈಕ್ಷಣಿಕವಾಗಿ ವಿದ್ಯಾರ್ಥಿಗಳನ್ನು 'ಅರೆಯುತ್ತಾರೆ'. ಈ ತರಬೇತಿಯಿಂದಾಗಿಯೋ ಏನೋ ಈ ಜನ ಯಾವುದೇ ಸಂಶೋಧನೆ ಕೈಗೆ ಎತ್ತಿಕೊಂಡರೂ ಸಹ ಆಳಕ್ಕಿಳಿಯುತ್ತಾರೆ; ಆಯಾ ದೇಶಗಳ ಭಾಷೆ ಕಲಿಯುತ್ತಾರೆ.

ವಿಶ್ವವಿದ್ಯಾಲಯ ಸಂದರ್ಶನದ ನಂತರ ಪಕ್ಷಿಧಾಮಕ್ಕೆ ಹೋದೆವು. ಪಿಟ್ಸ್‌ಬರ್ಗ್ ನಗರದ ಅಲಿಗೇನಿ ಪಶ್ಚಿಮ ಪ್ರದೇಶದಲ್ಲಿ National Aviary ಎಂಬ ಪಕ್ಷಿಧಾಮವಿದೆ. ಅದರ ಸುತ್ತಲೂ ವಿಶಾಲವಾದ ಪಾರ್ಕ್ ಇದೆ. ಊಟದ ವೇಳೆಯಾದ್ದರಿಂದ ಮನೆಯಲ್ಲಿ ಪಾಕಗೊಳಿಸಿಕೊಂಡು ಜಯಶೀಲಾ ತಂದಿದ್ದ ಉಪ್ಪಿಟ್ಟನ್ನು ತಿಂದು ಪಕ್ಷಿಧಾಮವನ್ನು ಪ್ರವೇಶಿಸಿದೆವು. ತಲೆ ಬಾಗಿಲಲ್ಲಿ ಡೈನೋಸಾರ (ಪೆಡಂಭೂತ)ದ ಒಂದು ಮಾದರಿ ಸ್ವಾಗತಿಸುತ್ತದೆ. ಒಳಗೆ ವಿವಿಧ ಬಣ್ಣಗಳ ಬಗೆಬಗೆಯ ಪಕ್ಷಿಗಳು ಕಿಚುಗುಡುತ್ತವೆ. ಭಾರತದ ಗಿಳಿಗಳು, ಅಮೆರಿಕಾ ಕಾಡಿನ ಎಷ್ಟೋ ಪಕ್ಷಿಗಳು, ಬಗೆಬಗೆಯ ಅಲಂಕಾರದ ಜಲಪಕ್ಷಿಗಳು ಕಣ್ಣು ಸೆಳೆಯುತ್ತವೆ. ಮಾತನಾಡುವ ಪಕ್ಷಿಗಳು ಹಲೋ ಎನ್ನುತ್ತವೆ. ಕೆಲಸಗಾರರು ಕಾಳು ತಿನ್ನಿಸುತ್ತ ಬೇರೆ ಬೇರೆ ಚಟುವಟಿಕೆ ಮಾಡಿಸಿದಳು. ಸುಮಾರು ಎರಡುಲಕ್ಷ ಚದುರಡಿಯ ವಿಸ್ತಾರದಲ್ಲಿ ಕೃತಕವಾದ ನೀರಿನ ಝುರಿಗಳುಂಟು, ವೃಕ್ಷಗಳುಂಟು. ಹವಾನಿಯಂತ್ರಿತ ಗಾಜಿನ ಅರಮನೆಯಲ್ಲಿ ಬಂಧಿತವಾಗಿರುವ ಈ ಸುಂದರ ಪಕ್ಷಿಗಳು ಜೀವ ತಳೆದ ಹೂವುಗಳಂತೆ ಅದ್ಭುತ ವರ್ಣ ಸಂಯೋಜನೆಯೊಂದಿಗೆ ಪ್ರಕೃತಿಯ ಕುಂಚದಿಂದ ಸೃಷ್ಟಿಕರ್ತನೆಂಬ ಕಲಾವಿದನ ಅದ್ಭುತ ಕಲಾ ಕೌಶಲ್ಯವನ್ನು ಮೆರೆಯುತ್ತವೆ. ಅದಕ್ಕೇ ಸರ್ವಜ್ಞ ಹೀಗೆ ಹಾಡಿದ್ದಾನಲ್ಲವೆ?

ಚಿತ್ರವನು ನವಿಲಿನೊಳು ವಿಚಿತ್ರವನು ಗಗನದೊಳು
ಪತ್ರೆ ಪುಷ್ಪಗಳ ವಿವಿಧ ವರ್ಣಗಳಿಂದ। ಚಿತ್ರಿಸಿದವರಾರೋ ಸರ್ವಜ್ಞ ?||
ಇಂಗಿನೊಳು ನಾತವನು ತೆಂಗಿನೊಳಗೆಳನೀರ
ಭೃಂಗ ಕೋಗಿಲೆಯ ಕಂಠದೊಳು ಗಾಯನವ
ತುಂಬಿದವರಾರೋ ಸರ್ವಜ್ಞ ?||

ಹೀಗೆ ರಾಷ್ಟ್ರೀಯ ಪಕ್ಷಿಧಾಮ (National Aviary) ನೋಡಿಕೊಂಡು ಮನೆಯತ್ತ ಮರಳಿದೆವು.

ಬೆಂಗಳೂರಿನ ಶರಣೆ. ನಿರ್ಮಲಾ ಮತ್ತು ಶರಣ. ಬಿ. ಜಯದೇವ್ ಅವರ ಮಗ ಧ್ರುವ ಕುಮಾರ ಮಿಚಿಗನ್ ರಾಜ್ಯದ ಡೆಟ್ರಾಯಿಟ್‌ದಲ್ಲಿ ಆಟೋಮೊಬೈಲ್ ಇಂಜಿನಿಯರಿಂಗ್‌ದಲ್ಲಿ ಮಾಸ್ಟರ್ ಡಿಗ್ರಿ ಮಾಡುತ್ತಿದ್ದು ಬೆಂಗಳೂರಿಗೆ ಹೋಗಿ ಕೆಲವೊಂದು ಸಾಮಾನು ತೆಗೆದುಕೊಂಡು ಬಂದಿದ್ದರು. ದರ್ಶನ ಪಡೆದು, ಸಾಮಾನು ಕೊಟ್ಟಂತೆ ಆಗುತ್ತದೆ ಎಂದು ತನ್ನ ಮಿತ್ರ ವಸಂತ್ ಎಂಬುವವರನ್ನು ಕರೆದುಕೊಂಡು ಬಂದಿದ್ದರು. ಡಾ|| ಚನ್ನರಸಪ್ಪ-ಗೌರಮ್ಮ ದಂಪತಿಗಳು ಆತಿಥ್ಯದಲ್ಲಿ ಬಹಳ ಮುಂದು. ಆಗಮಿಸಿದ ಅತಿಥಿಗಳನ್ನು ಆದರದಿಂದ ಬರಮಾಡಿಕೊಂಡು ಉಪಚರಿಸಿದ್ದಲ್ಲದೆ ಡೌನ್ ಟೌನ್ (ಮಧ್ಯ ನಗರ) ಮತ್ತು ಮೌಂಟ್ ವಾಷಿಂಗ್‌ಟನ್ ನೋಡಲು ಕರೆದೊಯ್ದರು. ಈಗಾಗಲೇ ಶರಣೆ. ಜಯಶೀಲ ಮತ್ತು ಶರಣ. ಡಾ|| ವಾಮದೇವ ಮೂರ್ತಿಯವರು ವಿದ್ಯುತ್ ದೀಪಗಳ ಬೆಳಕಿನಲ್ಲಿ ನಗರವು ಹೇಗೆ ಕಾಣುತ್ತದೆಂಬುದನ್ನು ತೋರಿಸಲು ಕರೆದೊಯ್ದುದನ್ನು ವಿವರಿಸಿದ್ದೇನೆ.

ಈಗ ಸೂರ್ಯಾಸ್ತವಾಗುತ್ತಿತ್ತು. ಸೂರ್ಯನ ಹೊಂಗಿರಣಗಳು ಅತ್ಯಂತ ಎತ್ತರವಾಗಿ ತಲೆ ಎತ್ತಿದ್ದ ಕಟ್ಟಡಗಳನ್ನು ಚುಂಬಿಸುತ್ತ ಬಂಗಾರದ ಮುಸುಕನ್ನು ಹೊದ್ದಿಸುತ್ತಿದ್ದವು. ಗಾಜುಗಳಿಂದ ತುಂಬಿದ ಕಟ್ಟಡಗಳ ಕಿಟಕಿ ಗಾಜಿನಲ್ಲಿ ಸಹಸ್ರಾರು ಸೂರ್ಯರು ಹೊಳೆಯುತ್ತಿದ್ದರು. ಎರಡು ನದಿಗಳು ಸೇರಿ ಒಹಾಯೋ ಆಗಿ ಮುಂದೆ ವಿಸ್ತಾರಗೊಂಡು ಹರಿಯುತ್ತಿತ್ತು. ನದಿಗಳ ತೆರೆಗಳ ಮೇಲೆ ಸಹ ರವಿಕಿರಣಗಳು ಹೊಳೆಯುತ್ತಿದ್ದವು. ನದಿಯ ದಂಡೆಗುಂಟ ಪ್ರಸಿದ್ಧ ಪಂಚತಾರಾ ಹೋಟೆಲ್‌ಗಳಾದ ಹಿಲ್ಟನ್, ಹಾಲಿಡೆ ಇನ್ ಇತ್ಯಾದಿ ರಾರಾಜಿಸುತ್ತಿದ್ದವು. ಎರಡು ನದಿ ಕೂಡುವಲ್ಲಿ ಗೋಲ್ಡನ್ ಟ್ರಯಾಂಗಲ್ ಎಂದು ಹೆಸರನ್ನಿಟ್ಟು ಅಲ್ಲೊಂದು ನೀರಿನ ಬುಗ್ಗೆ ಮಾಡಲಾಗಿತ್ತು. ಮೌಂಟ್ ವಾಷಿಂಗಟನ್ ಬಹಳ ಎತ್ತರದ ಬೆಟ್ಟ. ಅಲ್ಲಿ ವಾಸಿಸುವವರು ಮತ್ತು ಪ್ರವಾಸಿ ಸಂದರ್ಶಕರು ಅಲ್ಲಿಂದ ನದಿ ದಂಡೆಗೆ ಹೋಗಲು ಮತ್ತು ಕೆಳಗಿನಿಂದ ಮೇಲೇರಲು ಟ್ರಾಲಿಗಳನ್ನು ಓಡಿಸುತ್ತಿದ್ದರು. ಧ್ರುವ ಅವರು ವೆಂಕಟೇಶ್ವರ ದೇವಾಲಯವನ್ನು ಸಂದರ್ಶಿಸಿ ಬಂದರು.

ಭಾನುವಾರ ದಿ. 23-8-2003 ರಂದು ಥಿಯಾಸಫಿ ಸೊಸೈಟಿ ವತಿಯಿಂದ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದ ಪೋಸ್ಟರ್ ಹಾಲ್ ಎಂಬ ಬೃಹತ್ ಕಟ್ಟಡದ ಆಡಿಟೋರಿಯಮ್‌ದಲ್ಲಿ ಪುನರ್ಜನ್ಮ ಸಿದ್ಧಾಂತ ಕುರಿತು ಉಪನ್ಯಾಸ ಮಾಡಿದೆ. ಈ ಬಗ್ಗೆ, ಹಿಂದಿನ ವಾರ ನಡೆದ ಕಾರ್ಯಕ್ರಮಗಳಲ್ಲಿ ತಿಳಿಸಿದ್ದರಿಂದ ಆರೇಳು ಭಾರತೀಯ ಕುಟುಂಬಗಳವರು ಬಂದಿದ್ದರು. ಬಾಕಿ ಎಲ್ಲರೂ ಅಮೆರಿಕನ್ನರೆ. ಸುಂದರವಾದ ವಿಶಾಲವಾದ ಹಾಲ್. ವಿಶೇಷವಾದ ಬೆಳಕು ಮತ್ತು ಧ್ವನಿ ವರ್ಧಕದ ವ್ಯವಸ್ಥೆ ಇತ್ತು. ಥಿಯಾಸಫಿ ಸೊಸೈಟಿಯ ಅಧ್ಯಕ್ಷರಾದ ಆಂಡ್ರ್ಯೂ ನೆಸ್ಕಿ ಅವರು ಸಭಾಧ್ಯಕ್ಷತೆ ವಹಿಸಿದ್ದರು. ಅವತಾರ ಸಿದ್ಧಾಂತ ಮತ್ತು ಪುನರ್ಜನ್ಮ ಸಿದ್ಧಾಂತಗಳ ಮಧ್ಯೆ ಪಾಶ್ಚಿಮಾತ್ಯರು ಗೊಂದಲ ಹೊಂದಿದ್ದು ಅವತಾರ ಸಿದ್ಧಾಂತ ವಿಶೇಷಾತ್ಮರ ಹುಟ್ಟಿನ ಬಗ್ಗೆ ವಿವರಿಸಿದರೆ ಪುನರ್ಜನ್ಮ ಸಿದ್ಧಾಂತ ಸಾಮಾನ್ಯ ಆತ್ಮಗಳ ಪುನರಾವರ್ತನೆಯ ಬಗ್ಗೆ ಹೇಳುತ್ತದೆಂಬುದನ್ನು ವಿವರಿಸಿದೆ. ಹೇಗೆ ಇದು ಆತ್ಮದ ಪರಿಕಲ್ಪನೆ ಮೇಲೆ ಆಧಾರಿತವಾಗಿದೆ ಎಂಬುದನ್ನು ವಿಶ್ಲೇಷಿಸಿ ಚಾರ್ಲ್ಸ್

ಡಾರ್ವಿನ್ನನ ನೈಸರ್ಗಿಕ ವಿಕಾಸವು ಏಕಕೋಶ ಜೀವಿ ಅಮೀಬಾದಿಂದ ಬಹುಕೋಶ ಜೀವಿ ಮಾನವನವರೆಗೆ ವಿವರಿಸಿದಂತೆ ಕರ್ಮಸಿದ್ಧಾಂತವು ಮಾನವನಿಂದ ದೈವೀ ಮಾನವನವರೆಗೆ ಅಧ್ಯಾತ್ಮಿಕ ವಿಕಾಸ ಕುರಿತು ಹೇಳುವುದೆಂಬುದನ್ನು ವಿಮರ್ಶಿಸಿ, ಇದು ಕೇವಲ ಕಲ್ಪನೆಯಲ್ಲ, ಒಂದು ವಾಸ್ತವಿಕ ಸತ್ಯ ಎಂದು ಸಾಧಾರಪೂರ್ವಕವಾಗಿ ವಿವರಿಸಿದೆ. ಬಹಳ ಪ್ರಭಾವಿತರಾಗಿ ಸಂತೋಷಪಟ್ಟುದಲ್ಲದೆ ಸುಮಾರು ಮುಕ್ಕಾಲು ಗಂಟೆ ಕಾಲ ಪ್ರಶ್ನೆ ಕೇಳಿ ಸಂದೇಹಗಳನ್ನು ಪರಿಹರಿಸಿಕೊಂಡರು. ಭಾರತೀಯ ಧರ್ಮ, ತತ್ತ್ವ, ಸಾಧನೆ ಬಗ್ಗೆ ಪಾಶ್ಚಿಮಾತ್ಯರು ಕೇವಲ ಕುತೂಹಲ ಮಾತ್ರವಲ್ಲದೆ ತುಂಬು ಗೌರವ ಹೊಂದಿದ್ದಾರೆ. ಸಂಸ್ಥೆಯ ಚೇರ್ಮನ್ನರಾಗಿರುವ ಡಾ|| ಚನ್ನರಸಪ್ಪನವರು ಧನ್ಯವಾದ ಸಮರ್ಪಿಸಿದರು.

ಪಿಟ್ಸ್‌ಬರ್ಗ್‌ದಲ್ಲಿ ಇನ್ನೊಂದು ಬೃಹತ್ ದೇವಸ್ಥಾನ - ಹಿಂದು ಜೈನ್ ಟೆಂಪಲ್ ಎಂಬುದಿದೆ. ವೆಂಕಟೇಶ್ವರ ದೇವಾಲಯದ ಆಡಳಿತ ಮಂಡಳಿಯವರಲ್ಲಿ ದಕ್ಷಿಣ ಭಾರತದವರೇ ಹೆಚ್ಚಾಗಿದ್ದು ಅವರು ವೆಂಕಟೇಶ್ವರನನ್ನು ಬಿಟ್ಟು ಬೇರೆ ಮೂರ್ತಿ ಇಡುವುದಿಲ್ಲ ಎಂದುದಕ್ಕೆ, ಉತ್ತರ ಭಾರತೀಯರು ಸೇರಿ ಪ್ರತ್ಯೇಕ ದೇವಸ್ಥಾನ ಕಟ್ಟಿಕೊಂಡು ಅಲ್ಲಿ ಶಿವಲಿಂಗವನ್ನು ಸ್ಥಾಪನೆ ಮಾಡಿದ್ದಾರೆ. ಜೊತೆಗೆ ರಾಮ, ಕೃಷ್ಣ ಮತ್ತು ಜೈನ ತೀರ್ಥಂಕರರಲ್ಲೊಬ್ಬರಾದ ಪಾರ್ಶ್ವನಾಥರ ವಿಗ್ರಹವನ್ನು ಸ್ಥಾಪಿಸಿದ್ದಾರೆ. ವೆಂಕಟೇಶ್ವರ ದೇವಾಲಯದ ಶಿಲ್ಪಶೈಲಿ ದಕ್ಷಿಣ ಭಾರತದಾಗಿದ್ದರೆ, ಹಿಂದೂ-ಜೈನ ದೇವಾಲಯದ್ದು ಉತ್ತರ ಭಾರತದ ಶೈಲಿಯದಾಗಿದೆ. ಗೌರಮ್ಮ ಚನ್ನರಸಪ್ಪನವರು ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದರು. ಅವರ ಮಗ ಶರಣ. ಸತೀಶ್ ಮತ್ತು ಸೊಸೆ ಡಾ|| ಅನುಪಮ ಅವರ ಆಹ್ವಾನದ ಮೇರೆಗೆ ಅವರ ಮನೆಗೆ ಹೋಗಿಬಂದೆವು. ಅವರ ಮಗಳು ಶರಣೆ. ಶೋಭಾ ಮತ್ತು ಶರಣ. ಡಾ|| ವಿಶ್ವನಾಥ ಖಜೂರಿ ಅವರ ಆಹ್ವಾನದ ಮೇರೆಗೆ ಅವರ ಮನೆಗೆ ಹೋಗಿ, ಬಸವ ಪೂಜೆ ಮಾಡಿ, ಆಶೀರ್ವದಿಸಿ ಬಂದೆವು. ಡಾ|| ವಿಶ್ವನಾಥ ಗುಲಬರ್ಗಾದ ಖಜೂರಿಯವರು. ನಾವು ಬಸವ ಕಲ್ಯಾಣದಲ್ಲಿ ಮಠ ಮಾಡಿ, ಬಸವ ಧರ್ಮಪೀಠದಿಂದ ಹಲವಾರು ಅಭಿವೃದ್ಧಿ ಯೋಜನೆ ಹಾಕಿರುವುದಕ್ಕೆ ಬಹಳ ಸಂತೋಷಪಟ್ಟರು.

ವೆಂಕಟೇಶ್ವರ ಟೆಂಪಲ್‌ದಲ್ಲಿ ನನ್ನ ಉಪನ್ಯಾಸ ಕೇಳಿ ಪ್ರಭಾವಿತರಾದ ಶ್ರೀಮತಿ ಲಿಂಡಾ ಬೆರಾರ್ಡಿ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದ ಆಡಿಟೋರಿಯಮ್‌ದಲ್ಲಿ ನಡೆದ ಉಪನ್ಯಾಸಕ್ಕೆ ಸಹ ಬಂದು ಸಂತೋಷಪಟ್ಟು "ನಿಮ್ಮಂತಹವರ ಮಾರ್ಗದರ್ಶನ ನಮಗೆ ಬೇಕು. ಒಂದು ಸೆಂಟರ್ ತೆಗೆಯಿರಿ" ಎಂದು ಹೇಳಿದುದಲ್ಲದೆ ನಮ್ಮ ಆಶೀರ್ವಾದ, ಮಂತ್ರೋಪದೇಶ ಬೇಕಾಗಿರುವುದಾಗಿ ಕೇಳಿಕೊಂಡಳು. ಒಂದು ಸಿ.ಡಿ. ತೆಗೆದುಕೊಂಡಿರುವುದಾಗಿಯೂ ಭಾಷೆ ಅರ್ಥವಾಗದೆ ಇದ್ದರೂ ಇಂಪಾದ ಸಂಗೀತ ತುಂಬಾ ಸಂತೋಷ ಕೊಟ್ಟಿತೆಂದಳಲ್ಲದೆ, ನನ್ನ ಧ್ವನಿಯಲ್ಲಿರುವ ಸಿ.ಡಿ. ಬೇಕೆಂದಳು. ಆಗ ಪ್ರಣವ-ಪಂಚಾಕ್ಷರಿ ಎಂಬ ಸಿ.ಡಿ. ಕೊಟ್ಟೆವು. ಆಕೆಯ ತಲೆಯ ಮೇಲೆ ಕೈಯಿಟ್ಟು ಮಂತ್ರೋಪದೇಶ ಮಾಡಿದೆನು. ಎಷ್ಟೋ ಹೊತ್ತು ಧ್ಯಾನಾಸಕ್ತಳಾಗಿ ತನ್ಮಯಳಾಗಿ ಕುಳಿತಳಲ್ಲದೆ ಸ್ವಲ್ಪ ಹೊತ್ತಿನ ನಂತರ ಕಣ್ತೆರೆದು, "ನನ್ನಲ್ಲಿ ವಿಶೇಷ ಸ್ಪಂದನ (Vibration) ಉಂಟಾಯಿತು" ಎಂದಳು.

"ನಿಮ್ಮ ಧ್ವನಿ ತುಂಬಾ ಇಂಪಾಗಿದೆ ಮತ್ತು ಪ್ರಭಾವ ಶಾಲಿಯಾಗಿದೆ. ಕೇಳಿದಷ್ಟೂ ಕೇಳಬೇಕು ಎನ್ನಿಸುತ್ತದೆ" ಎಂದು ಹಾಡಲು ವಿನಂತಿಸಿದಳು. 'ಶರಣ ಜನ ಪೂಜಿತ ಶ್ರೀ ಲಿಂಗದೇವ' ಹಾಡಿದೆ. 'ಚಕೋರಂಗೆ ಚಂದ್ರಮನ', 'ವಚನದಲ್ಲಿ ನಾಮಾಮೃತ' ಇವುಗಳ ಇಂಗ್ಲೀಷ್ ಭಾಷಾಂತರ ಹಾಡಿದೆ.

ಹಿಂದಿನ ದಿನ ಥಿಯಾಸಫಿ ಸೊಸೈಟಿ ಕಾರ್ಯಕ್ರಮದಲ್ಲಿ 'ಹೇ ಪರಮಾತ್ಮ'ದ ಇಂಗ್ಲೀಷ್ ಭಾಷಾಂತರ ಹಾಡಿದ್ದೆ.

'ಇನ್ನು ನಿಮ್ಮನ್ನು ಎಂದು ನೋಡುವುದು ? ಕೇವಲ ಮೂರು ಭೇಟಿಯಲ್ಲೇ ಗೌರವಪೂರ್ಣ ಆತ್ಮೀಯತೆ ಬೆಳೆದಿದೆ. ನೀವು ಹೋಗುತ್ತೀರೆಂದರೆ ಏನೋ ಕಳೆದುಕೊಂಡಂತೆ ಆಗುತ್ತಿದೆ. ಬೇಕಾದಷ್ಟು ಜನ ಪುರುಷ ಸ್ವಾಮಿಗಳು ಬಂದಿದ್ದಾರೆ, ಬರುತ್ತಾರೆ. ಅವರೆಲ್ಲರ ಭಾಷಣಕ್ಕೆ ಹೋಗುತ್ತೇನೆ. ಆದರೆ ನೀವು ತಾಯಿ. ಮಕ್ಕಳ ಮನಸ್ಸನ್ನು ತಾಯಿಯಂತೆ ಬೇರೆ ಯಾರೂ ಅರ್ಥ ಮಾಡಿಕೊಳ್ಳಲಾರರು' ಎಂದು ಭಾವಪೂರ್ಣವಾಗಿ ಹೇಳಿದಳು. ಗೌರಮ್ಮನವರು ಹಣ್ಣು-ಟೀ ಕೊಟ್ಟು ಉಪಚರಿಸಿ ಕಳಿಸಿದರು. ದಿ. 23 ರಂದು ಫ್ಲಾರಿಡಾ ರಾಜ್ಯಕ್ಕೆ ನನ್ನ ಪ್ರಯಾಣ ನಿಶ್ಚಿತವಾಗಿತ್ತು. ಗೌರಮ್ಮ ಮತ್ತು ಚನ್ನರಸಪ್ಪನವರು ವಿಮಾನ ನಿಲ್ದಾಣಕ್ಕೆ ಬೀಳ್ಕೊಡಲು ಬಂದರು. ಪಿಟ್ಸ್‌ಬರ್ಗ್‌ನ ವಿಮಾನ ನಿಲ್ದಾಣವೂ ಬಹಳ ವಿಶಾಲ. ಬಹಳಷ್ಟು ನಡೆಯ ಬೇಕು. ಪೂಜಾ ಟ್ರಂಕ್ ತೆರೆಸಿ ಪರೀಕ್ಷಿಸಿದರು. ರುದ್ರಾಕ್ಷಿ ಮಾಲೆ, ಬೆಳ್ಳಿಯ ಕರ್ಪೂರದ ಡಬ್ಬಿ, ಊದಿನ ಕಡ್ಡಿ ಪೊಟ್ಟಣ ಎಲ್ಲಾ ಅವರಿಗೆ ವಿಚಿತ್ರವೆ ! ಈಗಂತೂ ಸೆಪ್ಟೆಂಬರ್ 11 ಎಂದರೆ ಅಮೆರಿಕನ್ನರು, ಅಧ್ಯಕ್ಷ ಬುಷ್‌ರಿಂದ ಸಾಮಾನ್ಯರವರೆಗೆ ಬೆಚ್ಚಿ ಬೀಳುತ್ತಾರೆ. ಅವರ ನೆರಳೇ ಅವರಿಗೆ ಭಯವನ್ನು ಉಂಟು ಮಾಡುತ್ತದೆ. ನಾನು ಸೆಪ್ಟೆಂಬರ್ 11 ರಂದೇ ಷಿಕಾಗೋದಿಂದ ಪಿಟ್ಸ್‌ಬರ್ಗ್‌ಗೆ ಹೊರಟಿದ್ದು. ಹಿಂದಿನ ದಿನ ದಟ್ಟವಾಗಿ ಸುದ್ದಿ ಎದ್ದಿತು. ಅವತ್ತು ಬಹಳ ಫ್ಲೈಟ್ ರದ್ದಾಗುತ್ತಿವೆ ಎಂದು. ನಮ್ಮ ಫ್ಲೈಟ್ ಹೊರಟಿತಾದರೂ ಭದ್ರತಾ ತಪಾಸಣೆ ಬಹಳವಾಗಿ ಇತ್ತು.

ಫ್ಲಾರಿಡಾ ರಾಜ್ಯಕ್ಕೆ

ಒಂದು ನಿಮಿಷವೂ ವ್ಯತ್ಯಾಸವಾಗದೆ ಮಧ್ಯಾಹ್ನ 1-20ಕ್ಕೆ ಯುನೈಟೆಡ್ ಸ್ಟೇಟ್ಸ್ ಏರ್‌ವೇಸ್‌ನ - US 499 ಪ್ಲೇನ್ ಹೊರಟು ಫ್ಲಾರಿಡಾ ರಾಜ್ಯದ ಆರ್‌ಲ್ಯಾಂಡೋ ವಿಮಾನ ನಿಲ್ದಾಣಕ್ಕೆ 3-20 ಕ್ಕೆ ತಲುಪಿತು. ಅಮೆರಿಕಾದ ಅತ್ಯಂತ ಸುಂದರವಾದ ರಾಜ್ಯಗಳಲ್ಲಿ ಫ್ಲಾರಿಡಾ ಕೂಡ ಒಂದು. ವಿಸ್ತಾರವಾದ ಸಮುದ್ರ ತೀರ ಹೊಂದಿರುವ ಫ್ಲಾರಿಡಾ ಬಯಲು ಸೀಮೆ. ಹವಾಮಾನವೂ ಚೆನ್ನಾಯ್‌ದಂತೆ. ಸಮುದ್ರದಂಡೆಗೆ ಸಮೀಪವಿರುವುದರಿಂದ ಸಮೃದ್ಧವಾಗಿ ಮಳೆಯಾಗುವುದು. ವಿಮಾನ ನಿಲ್ದಾಣದಲ್ಲಿ ಇಳಿದು, ಒಳಗೇ ಓಡಾಡುವ ಟ್ರೇನ್ ಹಿಡಿದು, ಬ್ಯಾಗೇಜ್ ಕ್ಲೇಮ್ ಬಳಿಗೆ ಬರುವಷ್ಟರಲ್ಲಿ ಶರಣ. ಸೋಮಶೇಖರ ಪಾಳೇಗಾರರ ಪತ್ನಿ ಶರಣೆ. ಗೀತಾ ಬಂದಿದ್ದರು. ಬೆಂಗಳೂರಿನ ಕೆ.ಆರ್.ಪುರಂದ ಶರಣೆ. ಮಂಗಳಮ್ಮ ಅವರ ಮಗ ಶರಣ.ಜಯದೇವ ಅವರೂ ಸ್ವಾಗತಿಸಲು ಬಂದಿದ್ದರು. ಅವರು ಆರ್‌ಲ್ಯಾಂಡೋದಲ್ಲಿರುವ ತಮ್ಮ ಮನೆಗೆ ಕರೆದೊಯ್ದರು. ದಣಿವಾರಿಸಿಕೊಂಡು, ಬ್ರಾಡೆನ್‌ಟನ್ ಕಡೆಗೆ ನಡೆದೆವು. ಫ್ಲಾರಿಡಾ ವಿ.ಎಸ್.ಎನ್.ಎ ಅಧ್ಯಕ್ಷರಾದ ಶರಣ. ಡಾ|| ಸೋಮಶೇಖರ ಪಾಳೇಗಾರ್ ಇರವುದು ಇದೇ ಬ್ರಾಡೆನ್‌ಟನ್‌ದಲ್ಲಿ. ಆರ್‌ಲ್ಯಾಂಡೋದಿಂದ ಎರಡು ತಾಸು ಡ್ರೈವ್ ಮಾಡಿಕೊಂಡು ಶರಣೆ. ಗೀತಾ ಅವರು ತಮ್ಮ ಮನೆಗೆ ಕರೆತಂದು, ಆರತಿ ಮಾಡಿ ಬರಮಾಡಿಕೊಂಡರು.

ಎಕ್ಸ್‌ಪ್ರೆಸ್ ಹೈವೇದಿಂದ ಸ್ವಲ್ಪವೇ ಒಳಗಿರುವ ಡಾ|| ಪಾಳೇಗಾರ್ ಅವರ ಮನೆ ತುಂಬಾ ಸುಂದರವಾದ ಪರಿಸರದಲ್ಲಿದೆ; ಋಷ್ಯಾಶ್ರಮದ ನೆನಪು ತರುವಂತಿರುವ ಮನೆ ರಸ್ತೆಯಿಂದ ಕೊಂಚ

ಒಳಗಿದೆ. ಮನೆಯ ಮುಂದೆ ಒಂದು ಸುಂದರವಾದ ಕೊಳವಿದೆ. ಮನೆಯ ಹಿಂದೆ ಐದು ಎಕರೆಯಷ್ಟು ವಿಶಾಲವಾದ ಹುಲ್ಲುಗಾವಲಿನಿಂದ ಕೂಡಿದ ವನ ಸಂಪತ್ತಿದೆ. ರಾತ್ರಿ ನಾವು ಬಂದು ಮನೆ ತಲ್ಪಿದಾಗ ಆಗಲೇ ಒಂಭತ್ತು ಗಂಟೆ. ಹೊರಗಿನ ದೃಶ್ಯ ಸ್ಪಷ್ಟಗೊಂಡಿರಲಿಲ್ಲ. ಬೆಳಿಗ್ಗೆ ಕಿಟಕಿಯಿಂದ ನೋಡಿದಾಗ ರೋಮಾಂಚನವಾಯಿತು. ಮನೆಯ ಮುಂದಿನ ಕೊಳದ ಮೇಲೆ ಸೂರ್ಯಕಿರಣಗಳು ಬಿದ್ದು, ಸಣ್ಣ ತೆರೆಗಳು ಫಳಫಳ ಹೊಳೆಯುತ್ತಿದ್ದವು. ಬಿಳಿಯ ಬಣ್ಣದ ಸುಂದರ ಕೊಕ್ಕರೆಗಳು ಕೊಳದಲ್ಲಿ ಕೆಲವು ವಿಹರಿಸುತ್ತಿದ್ದವು, ಮತ್ತೆ ಕೆಲವು ಹಸಿರು ಹುಲ್ಲಿನ ಮೇಲೆ ಓಡಾಡುತ್ತಿದ್ದವು. ತಾಳೆ, ಈಚಲು ಗಿಡಗಳು, ಸೂಜಿ ಪರಣಿ (ಪೈನಸ್) ಮುಂತಾದ ಹಲವಾರು ವೃಕ್ಷಗಳು ಮನೋಹರವಾಗಿ ಕಾಣುತ್ತಿದ್ದವು. ಭೂಮಿಯ ಮೇಲೆ ಹಸಿರು ರತ್ನಗಂಬಳಿ ಹಾಸಿದಂತೆ ಎಲ್ಲಿ ನೋಡಿದರೂ ಹುಲ್ಲಿನ ಹಾಸು. ಮನೆಯ ಹಿಂದೆ ಒಂದು ಈಜು ಕೊಳ. ಅದರ ದಂಡೆಯ ಮೇಲೆ ಡಾಕ್ಟರ್ ಅವರೇ ಸ್ವಂತ ಕೈಯಿಂದ ಕಟ್ಟಿದ ಎರಡು ಕಲ್ಲಿನ ಗೋಡೆಗಳ ನಡುವೆ ಗಾಜಿನ ಆಸರೆಯಲ್ಲಿ ಸುರಿಯುವ ಜಲಧಾರೆ. ನನಗೆ ನೀರಿನ ಧಾರೆ ಉಂಟು ಮಾಡುವ ಜುಳು ಜುಳು ಶಬ್ದ ಬಲು ಇಷ್ಟ. ಅದನ್ನೇ ಆಲಿಸುತ್ತ ಕುಳಿತುಕೊಳ್ಳುವಾಗ ಇದಕ್ಕೆ ದನಿ ಸೇರಿಸುವಂತೆ ಮಳೆಯೂ ಶುರುವಾಯಿತು. ಈ ಸ್ಥಳದಿಂದ ಸಮುದ್ರತೀರ ಸುಮಾರು ಇಪ್ಪತ್ತೆರಡು ಮೈಲಿ. ಹೀಗಾಗಿ ಮಳೆಯು ಮುಂಬೈಯಂತೆ, ಯಾವಾಗ ಬೇಕಾದರೂ ಬೀಳುವುದುಂಟಂತೆ. ಮರುದಿನ ಸಂಜೆ ಸಮುದ್ರ ತೀರ ನೋಡಲು ಗೀತಾ ಕರೆದೊಯ್ದರು. ಮುಂದೆ ವಿಶಾಲವಾದ ನಾರ್ತ್ ಅಟ್ಲಾಂಟಿಕ್ ಸಮುದ್ರ. ಅದರ ವಿಶಾಲವಾದ ಶುಭ್ರ ದಂಡೆಯನ್ನು ತುಂಬಿರುವ ಸಕ್ಕರೆಯಷ್ಟು ಬಿಳಿಯದಾದ ಮರಳು. ಅದು ಬೂರಾ ಸಕ್ಕರೆಯಂತೆ ನುಣುಪು. ಜನರು ಎಲ್ಲೆಂದರಲ್ಲಿ ಕಸ ಎಸೆಯದಿರುವುದರಿಂದ ಎಲ್ಲೆಡೆ ಸ್ವಚ್ಛತೆ ಎದ್ದುಕಾಣುವುದು. ಸಮುದ್ರದ ಉಪ್ಪು ನೀರಿನಲ್ಲಿ ಈಜಿದವರು ಹೊರ ಬಂದು ಸ್ನಾನ ಮಾಡಲು ಸಿಹಿ ನೀರಿನ ನಲ್ಲಿಗಳು, ಸ್ನಾನ ಗೃಹಗಳು. ಸಮುದ್ರದ ಒಳಗಿನವರೆಗೆ ಒಂದು ಕಟ್ಟಿಗೆಯ ಸೇತುವೆ. ಅದರ ಮೇಲೆ ಕೆಲಕಾಲ ಪ್ರಕೃತಿ ಸಿರಿಯನ್ನು ಆಸ್ವಾದಿಸುತ್ತ ನಿಂತೆವು. ಅದೇ ಆಗ ನೇಸರನು ಮುಳುಗಿದ್ದು ಮುಂದೆ ವಿಶಾಲವಾದ ಸಮುದ್ರ ಹರಡಿತ್ತು. ಶುಭ್ರ ಬಿಳಿಯ ಮರಳ ದಂಡೆ ಬಹು ಸುಂದರವಾಗಿ ಕಾಣುತ್ತಿತ್ತು. ಕತ್ತಲು ಇಳಿಯುತ್ತಿದ್ದಂತೆ ದಂಡೆಯ ಮೇಲೆ ತಂಗಾಳಿ ಸವಿಯುತ್ತಿದ್ದವರು ಒಬ್ಬೊಬ್ಬರೇ ಹೊರಡಲು ತೊಡಗಿದರು. ನಾವೂ ಮನೆಯತ್ತ ಸಾಗಿದೆವು.

ಕಾರ್ಯಕ್ರಮಗಳು

ಶುಕ್ರವಾರ ದಿ. 26-9-2003 ರಂದು ಸಂಜೆ ಡಾ|| ಸೋಮಶೇಖರ ಪಾಳೇಗಾರ್, ಅವರ ವಿಶಾಲವಾದ ಮನೆಯ ಪಡಸಾಲೆಯಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಿ ಅವರ ಬಂಧುಗಳನ್ನು ಮಿತ್ರರನ್ನು ಆಹ್ವಾನಿಸಿದರು. ಪ್ರಭಾವಶಾಲಿ ಹಿರಿಯ ವೈದ್ಯರು ಮತ್ತು ಇಂಜನಿಯರರು ಕುಟುಂಬ ಸಹಿತವಾಗಿ ಆಗಮಿಸಿದ್ದರು. ಆಂಧ್ರ, ತಮಿಳು ನಾಡು, ಉತ್ತರ ಭಾರತದವರೇ ಅಲ್ಲದೆ ಕೆಲವರು ಆಫ್ರಿಕನ್ನರು ಇದ್ದರು. ಡಾ|| ಮಾಲೇರಿ ಶಶಿಧರ್, ಡಾ|| ಎಲ್. ರೆಡ್ಡಿ, ಡಾ|| ಯಲ್ಲಪ್ಪ ನಡಿಮಿಂಟಿ ಇವರು ಆಂಧ್ರ ಮೂಲದವರಾದರೆ ಡಾ|| ವೈದ್ಯನಾಥನ್ ತಮಿಳು ನಾಡಿನವರು. ಪ್ರಾರ್ಥನೆ-ಭಜನೆಯಲ್ಲಿ ಅವರು ಒಕ್ಕೊರಲಿನಿಂದ ಧ್ವನಿ ಕೊಟ್ಟರಲ್ಲದೆ ಕಾರ್ಯಕ್ರಮದ ನಂತರ ಬಹಳ ವಿಷಯಗಳ ಬಗ್ಗೆ ಚರ್ಚಿಸಿದರು. ರುದ್ರಾಕ್ಷಿ ಜಪಮಾಲೆಗಳನ್ನು ಆಶೀರ್ವಾದ ಸಹಿತವಾಗಿ

ಪಡೆದುಕೊಂಡು ಜಪ-ಧ್ಯಾನದ ಬಗ್ಗೆ ಹೇಳಿಕೊಂಡರು. ಇಷ್ಟಲಿಂಗಾರ್ಚನೆ ತೋರಿಸಿ ದೇವರ ಸ್ವರೂಪ ಹೇಳಿ, ನಿರಾಕಾರ ದೇವರನ್ನು ಇಷ್ಟಲಿಂಗ ರೂಪದಲ್ಲಿ ಹೇಗೆ ಮತ್ತು ಏಕೆ ಪೂಜಿಸಬೇಕು ಎಂಬುದನ್ನು ಹೇಳಿದಾಗ ಎಲ್ಲರೂ ಆನಂದ ತುಂದಿಲರಾದರು. ಆಫ್ರಿಕನ್ ಮಹಿಳೆಯಂತೂ ಮೊದಲಬಾರಿಗೆ ಹೊಸ ತತ್ತ್ವವನ್ನು ಅರಿತಂತೆ ಸಂಭ್ರಾಂತಗೊಂಡಿದ್ದಳು. ಇವರ ಮೇಲೆ ಅದೆಷ್ಟು ಪ್ರಭಾವವಾಗಿತ್ತೆಂದರೆ ದಿ. 28 ರಂದು ಬ್ರಾಡೆಂಟನ್‌ನಿಂದ ಸುಮಾರು 80 ಮೈಲಿ ದೂರದಲ್ಲಿರುವ ಟೌಂಪಾ ಎಂಬಲ್ಲಿನ ಹಿಂದೂ ದೇವಾಲಯದಲ್ಲಿ ಉಪನ್ಯಾಸವಿದೆ ಎಂದಾಗ ಅಲ್ಲಿಗೆ ಸಹ ವೈದ್ಯರ ಸಮೂಹ ಬಂದಿತ್ತು. ಬಸವ ತತ್ತ್ವವು ಎಂಥವರನ್ನು ಹೇಗೆ ಆಕರ್ಷಿಸುತ್ತದಲ್ಲ ಎಂದು ನನಗೆ ಅಂತರಂಗದಲ್ಲಿ ಹೆಮ್ಮೆ ತುಂಬಿತುಳುಕುತ್ತಿತ್ತು.

ದಿ. 27 ರಂದು ಜಾಕ್‌ಸನ್‌ವಿಲ್ಲೆ ಎಂಬ ಸ್ಥಳದಲ್ಲಿ ಕಾರ್ಯಕ್ರಮ. ಡಾ|| ಲತಾ ಮತ್ತು ಡಾ|| ಶಿವಶಂಕರ್ ಮನೆಯ ವಿಸ್ತಾರವಾದ ಹಾಲ್‌ದಲ್ಲಿ ಫ್ಲಾರಿಡಾ ರಾಜ್ಯದ ವಿ.ಎಸ್.ಎನ್.ಎ ಯ ಸುಮಾರು ಇಪ್ಪತ್ತೈದು ಕುಟುಂಬಗಳವರು ಸೇರಿದ್ದರು. ಮೊದಲು ಪ್ರವಚನ ನಂತರ ಪ್ರಶ್ನೋತ್ತರ. ದಿ. 28 ರಂದು ಟಾಂಪಾದ ಹಿಂದೂ ದೇವಾಲಯದಲ್ಲಿ ಪ್ರವಚನ. ಅದಕ್ಕೂ ಮೊದಲು ಬೆಂಗಳೂರಿನ ಡಾ|| ವಸುಂಧರಾ ಅವರಿಂದ ನೃತ್ಯ ಪ್ರದರ್ಶನವಿತ್ತು. ಹಿಂದು ಟೆಂಪಲ್ ಅಧ್ಯಕ್ಷೆ ಡಾ|| ರೇಣುಕಾ ರಾಮಪ್ಪ ಸ್ವಾಗತಿಸಿದರು. ಬೆಂಗಳೂರಿನ ಶ್ರೀ ಕೇಶವ ಕುಮಾರ್ ಅವರ ಸೋದರಿ ಶ್ರೀಮತಿ ಶೈಲಜಾ ಪೆದ್ದಮಠಮ್ ಕಾಣಿಕೆ ಸಲ್ಲಿಸಿದರು. ಡಾ|| ಸೋಮಶೇಖರ್ ಅವರ ನರ್ಸಿಂಗ್ ಹೋಂಗೆ ಆಹ್ವಾನಿಸಿ ಅಲ್ಲಿದ್ದ ಸಿಬ್ಬಂದಿ ಮತ್ತು ಕೆಲವು ರೋಗಿಗಳಿಗೆ ಉಪನ್ಯಾಸ ಮಾಡಿಸಿದರು. ಮೂಲತಃ ದಾವಣಗೆರೆಯವರಾದ ಡಾ|| ಸೋಮಶೇಖರ್ ಪಾಳೇಗಾರ್ ಬಹಳ ಯಶಸ್ವಿ ವೈದ್ಯರಾಗಿ ನೆಲೆಗೊಂಡಿದ್ದಾರೆ. ಆರ್ಥಿಕ ಶ್ರೀಮಂತಿಕೆಯೊಡನೆ ಹೃದಯ ಶ್ರೀಮಂತಿಕೆಯೂ ನೆಲೆಗೊಂಡಿದೆ; ಮನೆಯಷ್ಟೇ ಮನವು ವಿಶಾಲವಾಗಿದೆ. ವೈದ್ಯರ ಚಿಕಿತ್ಸೆಯೊಡನೆ ನೆರವಾಗುವ ಇತರ ಅಂಶಗಳೆಂದರೆ ಆಹಾರ ಶುದ್ಧಿ ಮತ್ತು ಮನಸ್ಸಿನ ಸ್ಥಿಮಿತತೆ ಎಂಬುದನ್ನು ವಿವರಿಸಿದೆ. ಅಲ್ಲಿಯ ಕೌಟುಂಬಿಕ ರಚನೆಯೂ ಹೇಗೆ ಮನಸ್ಸಿನ ಉದ್ವಿಗ್ನತೆಗೆ ಕಾರಣ ಎಂಬುದನ್ನು ವಿವರಿಸಿದೆ. ನನ್ನ ವಿವರಣೆ ಕೇಳಿ ವ್ಯವಸ್ಥಾಪಕಳಾಗಿದ್ದ ಮಾರಿಯಾಗೆ ತುಂಬಾ ಸಂತೋಷವಾಯಿತು. "ನಿಜ, ತಾರುಣ್ಯದಲ್ಲಿ ಸ್ವೇಚ್ಛಾ ಜೀವನ ನಡೆಸಿ ನಂತರ ಮಕ್ಕಳು ಪಶ್ಚಾತ್ತಾಪ ಪಡುತ್ತಾರೆ. ನೀವೇನಾದರೂ ಧ್ಯಾನ ಕೇಂದ್ರ ತೆರೆದರೆ ಬಹಳ ಜನರಿಗೆ ಪ್ರಯೋಜನವಾಗುತ್ತದೆ" ಎಂದಳು. ಮೈಕ್ ಎನ್ನುವ ಓರ್ವ ಶ್ರೀಮಂತ ವ್ಯಕ್ತಿ, ಬೆನ್ನು ನೋವಿಗೆ ಚಿಕಿತ್ಸೆ ಪಡೆಯುವವರು ಹೇಳಿದರು, "ಇಲ್ಲಿ ಬದುಕು ಯಾಂತ್ರಿಕ. ತಾಯಿ-ತಂದೆ-ಮಕ್ಕಳು ಎನ್ನುವ ವ್ಯಾಮೋಹವೇ ಇರದು" ಎಂದರು. ನಾನು ಆತನನ್ನು ನೋಡಿ ಶ್ರೀಮತಿ ಗೀತಾ ಪಾಳೇಗಾರ್ ಅವರನ್ನು ಕೇಳಿದೆ "ಈತ ಭಾರತೀಯ ಅಥವಾ ಪಾಕಿಸ್ಥಾನಿ ಇರಬೇಕಲ್ಲವೆ?" ಏಕೆಂದರೆ ಆತನ ಮೈಬಣ್ಣ ಭಾರತೀಯರಂತೆ ಕಂದುವರ್ಣದ್ದಿತ್ತು. ಆಗ ಗೀತಾ ಹೇಳಿದರು "ಇಲ್ಲ ಆತ ಶುದ್ಧ ಅಮೆರಿಕನ್, ಆದರೆ ಟ್ಯಾನಿಂಗ್ ಮಾಡಿಸಿಕೊಂಡಿದ್ದಾರೆ. ಅಮೆರಿಕನ್ನರಿಗೆ ಭಾರತೀಯರ ಚರ್ಮದ ಬಣ್ಣ ಎಂದರೆ ಬಲು ಇಷ್ಟ". ನಾನು ಚಕ್ಕಸಬೆರಗಾದೆ. ಕಾರಿನಲ್ಲಿ ಬರುವಾಗ ಒಂದು ಅಂಗಡಿ ಮುಂದೆ ಬೋರ್ಡ್ 'Tanning shop' ಎಂದು ನೋಡಿದ್ದೆ. ಆಗ ಕುತೂಹಲ ಗರಿಗೆದರಿತ್ತು. Tanning ಎಂದರೆ ಚರ್ಮ

ಹದ ಮಾಡುವುದು ಎಂದು ತಿಳಿದಿತ್ತು ಗೀತಾ ವಿವರಿಸಿದರು. ಅಮೆರಿಕನ್ನರ ಚರ್ಮ ಬಹಳ ಬಿಳಿ ಆದರ ಮೇಲೆ ಚುಕ್ಕೆ ಚುಕ್ಕೆ ಮೂಡುತ್ತವೆ. ಭಾರತೀಯರ ಕಂದು ಚರ್ಮವು ಪ್ರಕೃತಿಯ ವೈಪರೀತ್ಯ ಸಹಿಸಿಕೊಳ್ಳಬಹುದು. ಅದಕ್ಕಾಗಿ ಚರ್ಮವನ್ನು ಲೈಟಿನ ಕಿರಣಗಳಿಗೆ ಒಡ್ಡಿ ಕಂದು ಬಣ್ಣ ಮಾಡಿಕೊಳ್ಳುತ್ತಾರೆ ಎಂದರು. ನಮ್ಮ ಜನ ನೋಡಿದರೆ ತಮ್ಮ ಕಂದು ಬಣ್ಣಕ್ಕೆ ತಿರಸ್ಕಾರ ಹೊಂದುತ್ತಾರೆ; ಕೀಳರಿಮೆ ಬೆಳೆಸಿಕೊಳ್ಳುತ್ತಾರೆ. 'ಅವರ ಮುಖಗಳು ಮೇಕಪ್ ಇಲ್ಲದಿದ್ದರೆ ನೋಡಲಾಗುವುದಿಲ್ಲ' ಎಂದು ಶ್ರೀಮತಿ ಗೀತಾ ಹೇಳಿದರು. ಸುಪ್ರಸಿದ್ಧ ಬರ್ಕ್ಲೆ ವಿಶ್ವವಿದ್ಯಾಲಯದ ಆವರಣ ತೋರಿಸಲು ಶರಣ. ಉಮೇಶ್ ವೈದ್ಯಮಠ ಅವರು ಸ್ಯಾನ್ ಹೊಸೆದಲ್ಲಿ ಕರೆದೊಯ್ದಿದ್ದರು. ಪಾರ್ಕಿಂಗ್ ಸ್ಥಳದಿಂದ ಕಾರು ತರಲು ಅವರ ಹೋಗಿದ್ದಾಗ ನಾನು ಸಮೀಪದ ಒಂದು ಕಲ್ಲು ಬೆಂಚಿನ ಮೇಲೆ ಕಾಯುತ್ತ ಕುಳಿತಿದ್ದೆ. ಆಗ ಓರ್ವ ಅಮೆರಿಕನ್ ಮಹಿಳೆ ಹಾದು ಹೋಗುತ್ತಲಿದ್ದವಳು ಬಂದು ಮುಗುಳ್ನಕ್ಕು, "You look, very pretty" ಎಂದಳು. "Thank you" ಎಂದೆನಾದರೂ ನನಗೆ ಬಲು ನಗು ಬಂದಿತು. ನನ್ನಮೈ ಬಣ್ಣ ಬಿಳಿಯದ್ದಾಗದೆ ಕಂದು ಬಣ್ಣದ್ದು. ಇದರಲ್ಲಿ ಚಂದವೇನು ಬಂತು? ಎಂದು ಅಂದುಕೊಂಡೆ. ಆದರೆ ಶ್ರೀಮತಿ ಗೀತಾ ವಿವರಣೆ ನೀಡಿದ ಮೇಲೆ ಬಿಳಿಯ ಜನ ಕಂದುಬಣ್ಣ ಇಷ್ಟಪಡುವಂತೆ ತೋರುತ್ತದೆ ಎಂದುಕೊಂಡೆ. ಬೆಲ್ಜಿಯಂದಿಂದ ಬಂದಿದ್ದ ಜೇನ್ ಲೆಷರ್ಟ್ (ಆಶ್ಚರ್ಯಚರ್ಯ) ಕೂಡಲ ಸಂಗಮದಲ್ಲಿದ್ದ ಮೂರ್ತಿಗಳನ್ನು ನೋಡಿ ಹೇಳಿದರು, "ದಕ್ಷಿಣ ಭಾರತದವರದ್ದು ಕಂದು (brown) ಬಣ್ಣ, ಅದೇಕೆ ಎಲ್ಲ ಮೂರ್ತಿಗಳಿಗೂ ಬಿಳಿಯ ಅಥವಾ ಗುಲಾಬಿ ಮೈಬಣ್ಣ ಕೊಟ್ಟಿದ್ದೀರಿ ?" ಎಂದು ಕೇಳಿದರು. ನಮ್ಮ ಶರಣರು ಚೆಂದವಾಗಿ ಕಾಣಲಿ ಎಂದು ನಮ್ಮ ಅಭಿಪ್ರಾಯ. ಆದರೆ ಬಿಳಿಯ ಬಣ್ಣದ ಚರ್ಮ ನೋಡಿ ಬೇಸತ್ತ ಐರೋಪ್ಯರಿಗೆ ಕಂದುಬಣ್ಣವೇ ಇಷ್ಟವಂತೆ !! ಎಕ್ಸ್‌ರೇ, ಬೋನ್ ಸ್ಕ್ಯಾನಿಂಗ್ ಮಾಡುತ್ತಿದ್ದ ಓರ್ವ ತರುಣಿ ಸಹ ಟ್ಯಾನಿಂಗ್ ಮಾಡಿಸಿಕೊಳ್ಳುತ್ತಿರುವುದಾಗಿ ಶ್ರೀಮತಿ ಗೀತಾ ಹೇಳಿದರು. ಆ ತರುಣಿಗೆ ನನ್ನ ಬ್ಲಡ್ ಟೆಸ್ಟ್, ಬೋನ್ ಸ್ಕ್ಯಾನಿಂಗ್ ಮಾಡುವುದಕ್ಕಿಂತ ನಾನು ಮುಡಿ ಹೇಗೆ ಕಟ್ಟಿದ್ದೇನೆ, ಹೂವು ಹೇಗೆ ಪೋಣಿಸಲಾಗಿದೆ ಎಂಬುದರ ಕಡೆಗೆ ಆಸಕ್ತಿ. Very pretty ಎನ್ನುತ್ತಲೇ ತನ್ನ ಕಾಯಕ ಪೂರೈಸಿದಳು. ಮನುಷ್ಯ ಸ್ವಭಾವ ಎಷ್ಟು ವಿಚಿತ್ರವಲ್ಲವೇ ? ಇರುವುದರ ಬಗ್ಗೆ ಅತೃಪ್ತಿ; ಇಲ್ಲದ್ದರ ಬಗ್ಗೆ ಅಪೇಕ್ಷೆ!

ಅಮೆರಿಕನ್ನರ ಧೋರಣೆ ವಿಚಿತ್ರ. ಭಯಂಕರ ವಿಲಕ್ಷಣ ಸಂಶೋಧಕರು. ಒಂದು ದಿನ ಒಂದು ಅತಿ ಚಿಕ್ಕ ನಾಯಿಯನ್ನು ನೋಡಿದೆ. ನಾನು ತಿಳಿದುಕೊಂಡೆ ಅದು ಮರಿ ಎಂದು. ಆಗ ನನ್ನ ಜೊತೆ ವಾಕ್ ಮಾಡುತ್ತಿದ್ದ ಡಾ|| ಭಾರತಿ ಹೇಳಿದರು, 'ನಾಯಿಯನ್ನು (ಅದೇ ತರಹ ಅನೇಕ ಪ್ರಾಣಿಗಳನ್ನು) ಚಿಕ್ಕವಿದ್ದಾಗ ಒಂದು ಜಾಡಿ (Jar)ಯಲ್ಲಿ ಹಾಕಿ, ಅಲ್ಲೇ ಆಹಾರ ನೀಡಿ ಬೆಳೆಸುವರು ಅವು ಎಷ್ಟೇ ವಯಸ್ಸಾದರೂ ಬೋನ್ಸಾಯಿಕ್ ಸಸ್ಯಗಳಂತೆ ಕುಬ್ಜವಾಗಿಯೇ ಇರುವವು. ಕೇಳಿ ಸೋಜಿಗ ಎನ್ನಿಸಿತು. ಬ್ರಿಟನ್ನಿನಲ್ಲಿ ಮಾಂಸಾಹಾರ ಮಾಡಿಸಿದರೆ ಹಸುಗಳು ಬಹಳ ಹಾಲು ಕರೆಯಬಹುದೆಂದು ಒತ್ತಾಯದಿಂದ ಮಾಂಸದ ಕೇಕ್ ತಿನ್ನಿಸಿದರಂತೆ ಸಸ್ಯಾಹಾರಿ ಹಸುಗಳಿಗೆ ಒತ್ತಾಯಪೂರ್ವಕವಾಗಿ ಮಾಂಸ ತಿನ್ನಿಸಿದ್ದರಿಂದ ಹಸುಗಳಿಗೆ ವಿಲಕ್ಷಣ ಹುಚ್ಚು ರೋಗ ಬಂದಾಗ ನಿರ್ದಯವಾಗಿ ಗುಂಡಿಟ್ಟು ಕೊಂದರಂತೆ.

ನಾಯಿ ಬೆಕ್ಕುಗಳಿಗೆ ರಾಜೋಪಚಾರ

ಅಲ್ಲಿಯ ಜನ ಗಂಡ-ಹೆಂಡತಿ-ಮಕ್ಕಳನ್ನು ಪ್ರೀತಿಸುವುದಕ್ಕಿಂತಲೂ, ಹೆಚ್ಚಾಗಿ ನಾಯಿ ಬೆಕ್ಕುಗಳನ್ನು ಪ್ರೀತಿಸುತ್ತಾರೆ. ಪ್ರತಿ ಮನೆಗೂ ಕಾರುಗಳಿರುವಂತೆ ನಾಯಿಗಳು ಇರುತ್ತವೆ. ಅಮೆರಿಕಾದಲ್ಲಿ ಕಾಲು ಇಲ್ಲದಿದ್ದರೂ ಸುಖವಾಗಿ ಬದುಕಬಹುದು. ಅಂಗವಿಕಲರಿಗೆ ವಿಶೇಷ ಅನುಕೂಲತೆಗಳಿವೆ. ಆದರೆ ಕಾರು ಇಲ್ಲದಿದ್ದರೆ ಬದುಕುವುದು ಸಾಧ್ಯವಿಲ್ಲ. ತಲೆಗೆ ಒಂದು ಕಾರು. ಕೆಲವೊಮ್ಮೆ ಮನೆಯಲ್ಲಿ ಇರುವವರ ಸಂಖ್ಯೆಗಿಂತಲೂ ಕಾರುಗಳು ಜಾಸ್ತಿ ಇರುತ್ತವೆ. ನಾನು ತಮಾಷೆಗೆ ಹೇಳುತ್ತಿದ್ದೆ, "ಇಲ್ಲಿ ಜನಗಣತಿ ಮಾಡುವಾಗ ಕಾರಿನ ಗಣತಿ ಮಾಡಿದರೆ ಸಾಕು" ಎಂದು. ಅದೇ ರೀತಿ ನಾಯಿಗಳು ಸಹ ಮನೆಗೆ ಎರಡು-ಮೂರು. ಅವುಗಳಿಗೂ ಬಗೆಬಗೆಯಾಗಿ ಹೇರ್ ಕಟ್ಟಿಂಗ್ ಮಾಡಿಸಲಾಗುತ್ತದೆ. ಅವುಗಳಿಗೆ ವಿಶೇಷವಾದ ಪೆಟ್ ಬ್ಯೂಟಿ ಸಲೂನ್, ಸ್ನಾನದ ಗೃಹಗಳು, ಕ್ಯಾಂಟೀನ್‌ಗಳು, ಸ್ನಾನ ಮಾಡಿಸಲು ವಿಶೇಷ ಬಾಕ್ಸ್, ಅಲ್ಲಿ ಷವರ್‌ಗಳು, ಡ್ರೈಯರ್‌ಗಳು. ಊರಿಗೆ ಹೋಗುವಾಗ ಕಾರಿನಲ್ಲೇ ಕರೆದುಕೊಂಡು ಹೋಗುವರು. ವಿಮಾನದಲ್ಲಿ ಹೋಗುವಾಗ ಕರೆದೊಯ್ಯಲು ಅವಕಾಶ ಇರದು. ಆಗ ಚೈಲ್ಡ್ ಕೇರ್ ಸೆಂಟರ್ ತರಹ ಪೆಟ್‌ಕೇರ್ ಸೆಂಟರ್ ಇರುತ್ತವೆ. ಅಲ್ಲಿ ಬಿಟ್ಟು ಹೋಗುತ್ತಾರೆ. ಪೆಟ್ ಪ್ರಾಣಿಗಳಲ್ಲಿ ನಾಯಿ, ಬೆಕ್ಕುಗಳಲ್ಲದೆ ಗೂಬೆ, ಉಡ, ಮುಂಗುಸಿ ಎಲ್ಲ ಕಾಣಬರುತ್ತವೆ.

ಡಿಸ್ನಿ ವರ್ಲ್ಡ್

ಶ್ರೀಮತಿ ಗೀತಾ ಪಾಳೇಗಾರ್ ಒಂದು ದಿವಸ ಡಿಸ್ನಿ ವರ್ಲ್ಡ್‌ಗೆ ಹೋಗಿ ಬರೋಣ ಎಂದರು. ಕ್ಯಾಲಿಫೋರ್ನಿಯಾ ರಾಜ್ಯದ ಲಾಸ್ ಏಂಜಲೀಸ್‌ದಲ್ಲಿ ಡಿಸ್ನಿಲ್ಯಾಂಡ್ ಇದೆ. ಅದು ಪಶ್ಚಿಮ ಕರಾವಳಿ, ಅದಕ್ಕಾಗಿ ಪೂರ್ವ ಕರಾವಳಿಯಲ್ಲಿ ಡಿಸ್ನಿಲ್ಯಾಂಡ್ ಮಾಡಿದ್ದಾರೆ. ಫ್ಲಾರಿಡಾ ರಾಜ್ಯದ ಆರ್‌ಲ್ಯಾಂಡೋ ಎಂಬ ಪ್ರದೇಶದ ವಿವಿಧ ಕಡೆಗಳಲ್ಲಿ ಡಿಸ್ನಿ ವರ್ಲ್ಡ್ ಹಬ್ಬಿದೆ. ಒಂದೊಂದು ನೋಡಲು ಒಂದು ದಿನ ಬೇಕಾಗುವುದು. ಎಲ್ಲವುಗಳಲ್ಲಿ ಮುಖ್ಯವಾದುದು Epcot ಎಂದು . ಶ್ರೀಮತಿ ಗೀತಾ ಕಾರಿನಲ್ಲಿ ಕರೆದೊಯ್ದರು. ಸುಮಾರು 250 ಎಕರೆಯಲ್ಲಿ ಈ ಎಪ್‌ಕಾಟ್ ಹರಡಿಕೊಂಡಿದೆ. ಭೂಚರ ಪ್ರಾಣಿ, ಸಮುದ್ರ ಜೀವಿಗಳು, ಸಸ್ತನಿಗಳು, ಅರಣ್ಯ ವಿಭಾಗ, ಶಕ್ತಿ ಕೇಂದ್ರ, ವಿಜ್ಞಾನ-ತಂತ್ರಜ್ಞಾನ ವಿಭಾಗ, ಭವಿಷ್ಯದಲ್ಲಿ ಬದುಕು, Imagination-ಕಲ್ಪನೆ ಇತ್ಯಾದಿ ವಿಭಾಗಗಳಿವೆ.

ಅಮೆರಿಕನ್ನರು ವಿಪರೀತ ಸಾಹಸಿಗಳು ಮತ್ತು ವ್ಯಾಪಾರ ಚಾಣಾಕ್ಷತೆಯುಳ್ಳವರು ! ಏನೂ ಇಲ್ಲದಲ್ಲೂ ಒಂದು ವಸ್ತುವನ್ನು ಸೃಷ್ಟಿ ಮಾಡಿ ಜನರನ್ನು ಆಕರ್ಷಿಸಿ ಆದಾಯ ಬರುವಂತೆ ಮಾಡಿಕೊಳ್ಳುತ್ತಾರೆ. Epcot ಒಂದು ದೊಡ್ಡ ಗೋಳ. ಅದರಲ್ಲಿ ಹೊಕ್ಕರೆ ವಿಶೇಷವಾದ ಥಿಯೇಟರ್. ದೊಡ್ಡದಾದ ಬೃಹತ್ ಅಳತೆಯ ಮೂರು ಸ್ಕ್ರೀನ್. ಮಾನವ ಸಮಾಜ ವಿಕಾಸಗೊಂಡ ಬಗೆ, ಮೊದಲು ಕಾಡುಮನುಷ್ಯ ಹೇಗೆ ಬದುಕುತ್ತಿದ್ದ; ನಂತರ ಬೆಂಕಿಯನ್ನು ಕಂಡು ಹಿಡಿದ; ನಾಗರಿಕತೆ ಕಾಲಿಟ್ಟಿತು, ಹೀಗೆ ಹೇಳುತ್ತಾ ಹೋಗಿ ಔದ್ಯೋಗಿಕ ಕ್ರಾಂತಿ (Industrial Revolution) ಹೇಳಿ ಮುಂದೆ ವಿಜ್ಞಾನದ ಪರಿಣಾಮ ಕುರಿತು ಹೇಳುವರು. ಗೋಳದ ಒಳಗೇ ಕೃತಕ ಕಾಡು, ಕೃತಕ ಪ್ರಾಣಿಗಳ ಗರ್ಜನೆಗೆ ಕುರ್ಚಿಗಳು ಚಲಿಸುತ್ತವೆ. ಟ್ರೇನ್ ನಿಧಾನಗತಿಯಲ್ಲಿ ಕತ್ತಲೆಯ ಗವಿಯಲ್ಲಿ ಸಾಗುತ್ತದೆ. ಎರಡೂ ಬದಿಗಳಲ್ಲಿ ನೋಡುವಂತಹ ದೃಶ್ಯಗಳನ್ನು ರೂಪಿಸಿರುತ್ತಾರೆ.

ಅತೀವ ಕುತೂಹಲಕಾರಿಯಾದ ಮೈ ಝುಲ್ಲೆನಿಸುವ ವಿಭಾಗಗಳೆಂದರೆ ಅಂತರಿಕ್ಷಯಾನ ಮತ್ತು ಕಲ್ಪನಾ ವಿಭಾಗ. ಅಂತರಿಕ್ಷಯಾನ ವಿಭಾಗಕ್ಕೆ ಹೋದಾಗ ಇಬ್ಬಿಬ್ಬರಂತೆ ಕುರ್ಚಿಯಲ್ಲಿ ಕೂರಿಸುತ್ತಾರೆ. 'ಹೆದರಬೇಡಿ, ಚೀರಿಕೊಳ್ಳಬೇಡಿ' ಎಂದೆಲ್ಲ ಮೊದಲೇ ಹೇಳಿ ಜನರನ್ನು ಧೃತಿಗೆಡಿಸುತ್ತಾರೆ. ಬಾಗಿಲು ಮುಚ್ಚುತ್ತದೆ. ನಮ್ಮ ಅಂತರಿಕ್ಷಯಾನ ಶುರುವಾಗುತ್ತದೆ. ಸ್ವತಃ ನಾವೇ ಅಂತರಿಕ್ಷದಲ್ಲಿ ಏರುತ್ತಿದ್ದೇವೇನೋ ಎಂಬಂತೆ ಮೇಲೆ ಮೇಲೆ ಆಕಾಶದಲ್ಲಿ ಸಾಗುತ್ತೇವೆ. ಕುರ್ಚಿಯು ವಿಪರೀತ ನಡುಗುತ್ತದೆ. ಚಂದ್ರನನ್ನು ದಾಟಿ ಮಂಗಳ ಗ್ರಹಕ್ಕೆ ಹೋಗಿ ಇಳಿಯುತ್ತೇವೆ. ಅಲ್ಲಿ ಬೆಟ್ಟಗುಡ್ಡ, ಕೊರಕಲು, ಕಣಿವೆ, ನೀರು ಎಲ್ಲ ನೋಡುತ್ತೇವೆ. ಈ ಯಾನ ಮುಗಿಸಿ ದೀಪಗಳು ಹತ್ತುವಷ್ಟರಲ್ಲಿ ಅಂತರಿಕ್ಷಯಾನದಿಂದ ಮೈ ಬೆವೆತು, ಹೊಟ್ಟೆ ತೊಳಸುತ್ತಿರುತ್ತದೆ. ಅಂತೂ ಅದ್ಭುತವಾದ ಅನುಭವ ಆಗಿರುತ್ತದೆ.

Future ಎಂಬ ವಿಭಾಗ. ಎಲೆಕ್ಟ್ರಾನಿಕ್ ಬಾತ್‌ರೂಂ. ಅದರೊಳಗೆ ಪ್ರವೇಶಿಸುತ್ತಲೇ ಎದುರಿಗೆ ಒಂದು ದೊಡ್ಡ ತೆರೆ; ಅದರ ಮೇಲೆ ನಮ್ಮ ಶರೀರದ ಉಷ್ಣತೆ, ರಕ್ತದೊತ್ತಡ, ಹೃದಯದ ಬಡಿತ ಎಲ್ಲ ಮೂಡುತ್ತದೆ. ಒಂದು ಹೊಸಾ ತಳ್ಳು ಕುರ್ಚಿ (Wheel chair)ಕಂಡು ಹಿಡಿದಿದ್ದಾರೆ. ಅದನ್ನು ಯಾರೂ ದೂಡಬೇಕಾಗಿಲ್ಲ ತಾವೇ ನಡೆಸಬಹುದು. ಇದೇನು ಮಹಾ ಎನ್ನುವಿರೇನೋ! ಇದು ಸ್ವಯಂಚಾಲಿತ. ಇದರಲ್ಲಿ ಹೊಸತನ ಏನೆಂದರೆ ಈಗಿರುವ ತಳ್ಳು ಕುರ್ಚಿಗಳು ಸಾದಾ ನೆಲದಲ್ಲಿ ಸಾಗುತ್ತವೆ. ಹೊಸ ಆವಿಷ್ಕಾರದ ಕುರ್ಚಿ ಮೆಟ್ಟಿಲನ್ನು ಇಳಿಯಬಲ್ಲುದಂತೆ! ಒಂದು ಬಟನ್ ಒತ್ತಿದರೆ ಕುರ್ಚಿ ಮೇಲೇರುತ್ತೆ, ಕುಳಿತವರ ಸಹಿತವಾಗಿ. ಇನ್ನೊಂದು ಬಟನ್ ಒತ್ತಿದರೆ ಅದು ಮುಂದಿನ ಮೆಟ್ಟಿಲಿಗೆ ಇಳಿಯುತ್ತದೆ.

ಮತ್ತೊಂದು ಮೈ ಬೆವರಿಳಿಸುವ ವಿಭಾಗ Imagination ಒಂದು ಥಿಯೇಟರ್‌ದೊಳಗೆ ಪ್ರವೇಶಿಸುತ್ತೇವೆ. ಎದುರಿಗೆ ಬೃಹತ್ತಾದ ಸ್ಕ್ರೀನ್. ವರ್ಷದ ವ್ಯಕ್ತಿಯ ಅದ್ಭುತ ವೈಜ್ಞಾನಿಕ ಸಾಧನೆಗಾಗಿ ಪ್ರಶಸ್ತಿ. ಆತನ ಸಂಶೋಧನೆ ಏನೆಂದರೆ ಯಾವುದೇ ಪ್ರಾಣಿಯನ್ನು ಡ್ಯೂಪ್ಲಿಕೇಟ್ ಮಾಡಬಲ್ಲಂಥದು. ಸಣ್ಣದನ್ನು ದೊಡ್ಡದು ಮಾಡುವುದು, ದೊಡ್ಡದನ್ನು ಸಣ್ಣದು ಮಾಡುವುದು. ತನ್ನ ಮಗನನ್ನೇ ಕಿರುಬೆರಳು ಗಾತ್ರಕ್ಕೆ ಇಳಿಸುತ್ತಾನೆ. ಇಲಿಗಳನ್ನು ವೃದ್ಧಿಸುತ್ತಾನೆ. ಅವು ಥಿಯೇಟರ್ ತುಂಬ ಬಂದು ಕಾಲಿನ ಮೇಲೆ ಹರಿದಾಡುತ್ತವೆ. ಒಂದು ನಾಯಿ ಸ್ಕ್ರೀನ್ ತುಂಬಾ ಬೆಳೆದು ಪರದೆಯ ಹೊರಕ್ಕೆ ಮುಖಚಾಚಿ ಸೀನಿದರೆ ಎಲ್ಲರ ಮೇಲೂ ಅದರ ಉಗುಳು ಸಿಡಿಯುತ್ತದೆ. ಬೆಕ್ಕು ದೊಡ್ಡದಾಗಿ ಪ್ರೇಕ್ಷಕರ ಮುಖದ ಬಳಿ ಬಂದು ಗುರ್ ಎಂದರೆ ಚೀರಿಕೊಳ್ಳುವಂತಾಗುತ್ತದೆ, ಒಂದು ಹಾವು ಹೆಬ್ಬಾವಾಗಿ ಬೆಳೆದು ತನ್ನ ಮುಖ ಚಾಚಿ ಎಲ್ಲರನ್ನು ನುಂಗಲು ಹತ್ತಿರ ಬಂದು ಬಾಯಿ ತೆರೆಯುತ್ತದೆ.

ಇವೆಲ್ಲ ಕಾಲ್ಪನಿಕ, ಆದರೆ ಅದ್ಭುತ ತಂತ್ರಜ್ಞಾನ ಬಳಸಿ ಸೃಷ್ಟಿಸಿದ್ದಾರೆ. ಈ ಅನುಭವ ಎಂದೆಂದೂ ನೆನಪಿನಲ್ಲಿ ಉಳಿಯುವಂಥದು. ಇಂದು ಕಾಲ್ಪನಿಕವಾಗಿರಬಹುದು; ಆದರೆ ಈಗಾಗಲೇ ಕ್ಲೋನಿಂಗ್ - ಪ್ರತಿ ಸೃಷ್ಟಿ ಮಾಡುತ್ತ ವಿಜ್ಞಾನಿಗಳು ಅಸಾಧ್ಯವನ್ನು ಸಾಧ್ಯ ಮಾಡುತ್ತಿಲ್ಲವೆ ? ವಿಜ್ಞಾನದ ಸದುಪಯೋಗ- ದುರುಪಯೋಗ ಎರಡೂ ಆಗುತ್ತಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಅಪ್ರತಿಮ ಮಾನವ ಉಪಯೋಗಿ ಕೆಲಸಗಳಾಗಿವೆ. ಮಾನವನ ವಿಕೃತ ಬುದ್ಧಿ ಏನೇನು ಭಯಂಕರ ಆವಿಷ್ಕಾರಗಳನ್ನು ಮಾಡುವುದೋ ಬಲ್ಲವರಾರು ?

ರಾತ್ರಿ ಒಂಭತ್ತು ಗಂಟೆಗೆ ಫೈರ್ ವರ್ಕ್ಸ್. Epcot ಆವರಣವು ಒಂದು ಸರೋವರದ ತೀರದಲ್ಲಿದೆ. ಸರೋವರದ ಆ ದಂಡೆಗೆ ಅಂತರ ರಾಷ್ಟ್ರೀಯ ಹೋಟೆಲ್‌ಗಳಿವೆ. ಸಂಜೆಯಾಗುತ್ತಲೇ ದೀಪಗಳು ಜಗಜಗಿಸುತ್ತವೆ. ಸರೋವರದ ಎರಡೂ ದಂಡೆಗೆ ಸಾಲಾಗಿ ಸ್ತಂಭಗಳನ್ನು ಮಾಡಿ ಮೇಲೆ ಗ್ಯಾಸ್‌ದಿಂದ ಉರಿಯುವ ದೀಪಗಳನ್ನು ಇಟ್ಟಿದ್ದಾರೆ. ಸರಿಯಾಗಿ ರಾತ್ರಿ 9-00 ಕ್ಕೆ ಎಲ್ಲ ದೀಪಗಳು ಹೊತ್ತುತ್ತವೆ. ಆಗ ಪಟಾಕಿ ಸಿಡಿಸುವಿಕೆ ಪ್ರಾರಂಭವಾಗುತ್ತದೆ. ಜೊತೆಗೆ ಸಂಗೀತ ಬೇರೆ. ಸಂಗೀತ ಕಾರಂಜಿಗಳು ಮುದಗೊಳಿಸುತ್ತವೆ. ವಿವಿಧ ಚಿತ್ತಾರಗಳನ್ನು ಪಟಾಕಿಗಳು ಆಗಸದಲ್ಲಿ ಬಿಡಿಸುತ್ತವೆ. ಒಂದು ದೊಡ್ಡ ಹೂವು, ಮುಚ್ಚಿದ ಮೊಗ್ಗಿನಂತಿರುತ್ತದೆ. ಅದು ಬಿಚ್ಚಿಕೊಂಡಾಗ ದಳಗಳೆಲ್ಲ ಕೆಳಗೆ ಬಾಗಿ ಮಧ್ಯೆ ಪೃಥ್ವಿಯ ಗೋಳ ಎದ್ದು ತಿರುಗುತ್ತದೆ. ಒಂದೊಂದು ಹಾಡಿಗೆ ಒಂದೊಂದು ಬಣ್ಣ. ರಾತ್ರಿಯ ದಟ್ಟ ಕತ್ತಲೆಯ ಹಿನ್ನೆಲೆಯಲ್ಲಿ ಪೃಥ್ವಿಯ ಗೋಳವು ವಿವಿಧ ವರ್ಣಗಳನ್ನು ತಾಳುತ್ತ ತಿರುಗುವುದು ನಯನ ಮನೋಹರ. ನಂತರ ವಿವಿಧ ಖಂಡಗಳು ಕಾಣತೊಡಗಿದವು. ಭಾರತವು ಬಂದಾಗ ಒಮ್ಮೆ ಭರತ ನಾಟ್ಯ ಕಂಡರೆ ಮತ್ತೊಮ್ಮೆ ಜನಪದ ನೃತ್ಯ ಮೂಡಿತು. ಮತ್ತೊಮ್ಮೆ ಆನೆಗಳ ಹಿಂಡು, ನವಿಲಿನ ನರ್ತನ. ಆಯಾ ದೇಶಗಳ ಸಾಂಸ್ಕೃತಿಕ ಚಿತ್ರಗಳು ಮೂಡುತ್ತಿದ್ದವು. ಅಂಥ ದೊಡ್ಡ ಪ್ರದರ್ಶನದಲ್ಲಿ ಭಾರತದ ಸಂಸ್ಕೃತಿಯನ್ನು ಬಿಂಬಿಸಿದಾಗ ನಮಗೆ ಹೆಮ್ಮೆ ಎನಿಸುತ್ತಿತ್ತು. ಸುಮಾರು ಅರ್ಧಗಂಟೆಯ ಕಾಲ ವಿವಿಧ ಚಿತ್ತಾರಗಳನ್ನು ಆಗಸದಲ್ಲಿ ಮೂಡಿಸುತ್ತ ಪಟಾಕಿಗಳು ಸಿಡಿಯುತ್ತ, ಸರೋವರದ ನೀರಿನಲ್ಲಿ ಕಿಡಿಗಳು ಬೀಳುವಂತೆ ತೋರುತ್ತಿತ್ತು. ಫೈರ್ ವರ್ಕ್ಸ್-ಎಪ್‌ಕಾಟ್‌ನ ವಿಶೇಷ ಆಕರ್ಷಣೆ. ಬೆಳಗಿನಿಂದ ಸಂಜೆಯ ತನಕ ಎಲ್ಲವನ್ನು ತಿರುಗಾಡಿ ನೋಡಿ ರಾತ್ರಿ 9-00 ಗಂಟೆಯಿಂದ ಅರ್ಧಗಂಟೆ ನಡೆಯುವ ಪಟಾಕಿ ಪ್ರದರ್ಶನ ನೋಡಿ ಜನರು ವಾಪಸ್ಸಾಗುವರು. ಜಗತ್ತಿನ ವಿವಿಧ ಭಾಗಗಳಿಂದ ಬಂದ ಪ್ರವಾಸಿಕರು ಸರೋವರದ ದಂಡೆಯ ಮೇಲೆ ನಿಂತು ನೋಡಿ, ಆನಂದಿಸುವರು. ಅಂಗವಿಕಲರು, ವೃದ್ಧರಿಗೆ ವಿಶೇಷ ವ್ಯವಸ್ಥೆ ಇರುತ್ತದೆ. ಪ್ರದರ್ಶನಾನಂತರ ಕಾರ್ ಪಾರ್ಕಿಂಗ್‌ವರೆಗೆ ಒಂದು ಟ್ರೇನ್ ಓಡಿಸುವರು. ಅದರಲ್ಲಿ ಬಂದು ಕಾರನ್ನೇರಿ ಪಯಣಿಸಿ ಮನೆ ಮುಟ್ಟುವಾಗ ರಾತ್ರಿ 12-00 ಗಂಟೆ. ಪ್ರದರ್ಶನ ಮುಗಿಯುತ್ತಲೇ ಎಲ್ಲ ಜನರೂ ಕಾರುಗಳನ್ನು ಏರುವುದರಿಂದ ಟ್ರಾಫಿಕ್ ಜಾಮ್ ಆಗಿ, ನಿಧಾನವಾಗಿ ಮೈಲುಗಟ್ಟಳೆ ವಾಹನಗಳು ಮುಂದೆ ಸರಿಯಬೇಕಾಗುತ್ತದೆ.

ಇಂಥದೊಂದು ವಿಶೇಷ ಸ್ಥಳವನ್ನು ತೋರಿಸಿದ್ದಕ್ಕಾಗಿ ಗೀತಾ ಪಾಳೇಗಾರರಿಗೆ ಧನ್ಯವಾದ ಹೇಳಿದೆನು.

..........ಮುಂದುವರಿಯುವುದು

ಶರಣ ಮೇಳ - ವಿಶೇಷ ಸೂಚನೆ

ಶರಣ ಮೇಳ ಕಾರ್ಯಕ್ರಮದಲ್ಲಿ ಸೇರುವ ಲಕ್ಷಾಂತರ ಶರಣ - ಶರಣೆಯರಿಗೆ ಪ್ರಸಾದ ವ್ಯವಸ್ಥೆಗಾಗಿ ಶರಣ ಬಂಧುಗಳು ಉದಾರವಾಗಿ ತಟ್ಟೆ-ಲೋಟಗಳನ್ನು ಹಾಗೂ ದಾಸೋಹದ ಪ್ರಸಾದ ವ್ಯವಸ್ಥೆಗಾಗಿ ದೊಡ್ಡ ಕೊಳಗಗಳು, ಸ್ಟೀಲ್ ಬಕೆಟ್‌ಗಳು, ಸೌಟುಗಳು ಹಾಗೂ ಇತ್ಯಾದಿ ಕೊಡುಗೆಗಳನ್ನು ಎಷ್ಟು ಸಾಧ್ಯವೋ ಅಷ್ಟನ್ನು ನೀಡುವುದರ ಮೂಲಕ ಸಹಕರಿಸಲು ಕೋರಲಾಗಿದೆ.

☹ ಸಮಸ್ಯೆ? - ಸಮಾಧಾನ !☺

- ಮಾತಾಜಿ

- ಕೆ. ಅಮರೇಗೌಡ, ಕೊಪ್ಪಳ

? ನಮ್ಮ ಕಾಲೇಜಿನಲ್ಲಿ ಒಂದು ಸ್ಪರ್ಧೆ ಏರ್ಪಡಿಸಿದ್ದರು. ಸಮಾಜ ಸುಧಾರಕರಾದ ಮಹಾತ್ಮಾಜಿ, ಅಂಬೇಡ್ಕರ್ ಮುಂತಾದವರ ಬಗ್ಗೆ ಅನೇಕರು ಮಾತನಾಡಿದರು. ನಾನು ಬಸವಣ್ಣನವರ ಸಮಾಜ ಸುಧಾರಣೆ ಬಗ್ಗೆ ಮಾತನಾಡಿದೆ. ಸಭಿಕರು ಮೆಚ್ಚಿಕೊಂಡರು. ತೀರ್ಪುಗಾರರು ಸಹ ಮೆಚ್ಚಿ ನನಗೇ ಪ್ರಥಮ ಬಹುಮಾನ ಎಂಬಂತೆ ಪ್ರತಿಕ್ರಿಯೆ ತೋರಿದರು. ಮಠಾಧೀಶರ ಭಕ್ತರಾದ ಓರ್ವ ಉಪನ್ಯಾಸಕರು, ಬಸವಣ್ಣನವರ ವಚನಗಳನ್ನು ಉಲ್ಲೇಖಿಸುವಾಗ ನಾನು ಬಳಸಿದ ಲಿಂಗದೇವ ಅಂಕಿತದ ಬಗ್ಗೆ ಆಕ್ಷೇಪಣೆ ವ್ಯಕ್ತಮಾಡಿ, ವಿರೋಧಿಸಿ ನನಗೆ ಪ್ರಥಮ ಬಹುಮಾನ ಸಿಗದಂತೆ ಮಾಡಿದರು. ಇದರಿಂದ ನನಗೆ ನಿರಾಶೆ ಏನೂ ಆಗಲಿಲ್ಲ. ಇದಕ್ಕೆ ತಮ್ಮ ಪ್ರತಿಕ್ರಿಯೆ ಏನು?

★ ಒಂದು ಸತ್ಯವನ್ನು ಪ್ರತಿಷ್ಠಾಪನೆ ಮಾಡುವುದು ಅಷ್ಟು ಸುಲಭವಾದ ಕೆಲಸವಲ್ಲ. ಹಾಗೆಂದು ನಾವು ಹಿಂಜರಿಯಬಾರದು. ಬಹುಮಾನ ಸಿಕ್ಕರೆಷ್ಟು ಬಿಟ್ಟರೆಷ್ಟು, ನಮ್ಮ ಅಂತರಾತ್ಮ ಅನುಮೋದಿಸಿದ್ದನ್ನು ಹೇಳುವುದೇ ಧೀಮಂತಿಕೆಯ ಲಕ್ಷಣ. ಒಮ್ಮೆ 5 ವರ್ಷದ ಒಂದು ಮಗು ಬಸವ ಜಯಂತಿಯಲ್ಲಿ ಸಂಪ್ರದಾಯವಾದಿಗಳು ಏರ್ಪಡಿಸಿದ್ದ ವಚನ ಸ್ಪರ್ಧೆಯಲ್ಲಿ 'ಲಿಂಗದೇವ' ವಚನಾಂಕಿತ ಹೇಳುವುದಾದರೆ ಅವಕಾಶ ಕೊಡುವುದಿಲ್ಲ ಎಂದರೆ, ನನಗೆ ಬೇಕಾಗೇ ಇಲ್ಲ ಎಂದು ಹೋಗಿ ಕುಳಿತಳಂತೆ. ಆಗ ಜನರು ಆಕ್ಷೇಪಿಸಿ ''ಅಷ್ಟು ಸಣ್ಣ ಮಗುವಿನ ಜೊತೆ ಏಕೆ ಭಿನ್ನಾಭಿಪ್ರಾಯಾ'' ಎಂದಾಗ ಸ್ಪರ್ಧೆಯ ಆಯೋಜಕರು ಅವಕಾಶ ಕೊಟ್ಟರಂತೆ. ಆ ಮಗು ಲಿಂಗದೇವ ವಚನಾಂಕಿತದೊಡನೆ ಹೇಳಿ, ಬಹುಮಾನ ಗಿಟ್ಟಿಸಿದಳಂತೆ ! ಅದನ್ನೇ ಧರ್ಮಪಿತರು ಹೇಳಿರುವುದು. 'ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ' ಎಂದು. ನಿರಾಕಾರ ನಿರ್ಗುಣನಾದ ಲಿಂಗದೇವ ನಮ್ಮ ದೇವ; ಸ್ಥಾವರಲಿಂಗ ನಮಗೆ ಪರದೈವ !! ನಿನ್ನ ನಿಲುವು ಸರಿ.

- ಸೋಮಶೇಖರಯ್ಯ, ಯಳನಾಡು

? ನಾವು ಸಿದ್ಧರಾಮೇಶ್ವರರ ಸಂಪ್ರದಾಯದವರು. ಡಾ|| ಚಿದಾನಂದ ಮೂರ್ತಿಯವರ ಒಂದು ಪ್ರಕಟಣೆ ವಿಜಯ ಕರ್ನಾಟಕದಲ್ಲಿ ಬಂದಿತು (ದಿ. 25-6-2003). 'ವೀರಶೈವ-ಲಿಂಗಾಯತ ಧರ್ಮಕ್ಕೆ ಯಾರೂ ಸ್ಥಾಪಕರಿಲ್ಲ. ಇದರ ಸ್ಥಾಪಕರು ರೇಣುಕಾಚಾರ್ಯರು ಅಲ್ಲ, ಬಸವಣ್ಣನವರೂ ಅಲ್ಲ. ಇದರ ಮೂಲ ಗೊತ್ತಿಲ್ಲ' ಎಂದು. ಆಗ ನಮಗೆ ಕೆಲವರಿಗೆ ಕಳವಳವಾಯಿತು. ಹಲವಾರು ಜನ ಮಕ್ಕಳು ಆಟವಾಡುತ್ತಿರುತ್ತಾರೆ. ನಿಮ್ಮಪ್ಪನ ಹೆಸರೇನು? ಎಂದು ಒಬ್ಬರಿಗೊಬ್ಬರು ಕೇಳುತ್ತಾರೆ. ಅವರವರ ತಂದೆಯ ಹೆಸರನ್ನು ಹೇಳುತ್ತಾರೆ. ಆಗ ಒಂದು ಹುಡುಗ ತನ್ನ ತಂದೆಯ ಹೆಸರು ಹೇಳದೆ ನಾಚಿ ನಿಲ್ಲುತ್ತಾನೆ. ಆಗ ಉಳಿದ ಗೆಳೆಯರೆಲ್ಲ ಒಬ್ಬ ತಂದೆಗೆ ಹುಟ್ಟಿದವನಲ್ಲ ಎಂದು ಅಪಹಾಸ್ಯ ಮಾಡುತ್ತಾರೆ. ಅದೇ ರೀತಿ ಬೌದ್ಧರು ತಮ್ಮ ಧರ್ಮಸ್ಥಾಪಕ ಬುದ್ಧನೆಂದು, ಕ್ರೈಸ್ತರು ಏಸುಕ್ರಿಸ್ತನೆಂದು, ಸಿಖ್ಖರು ಗುರುನಾನಕ್ ಎಂದು ಹೇಳುತ್ತಾರೆ. ಆಗ ನಾವು ಏನೂ ಹೇಳದೆ ನಿಂತರೆ, ಗೊತ್ತಿಲ್ಲ ಎಂದರೆ

ಅದು ಅವಮಾನಕರವಲ್ಲವೆ ? ಹೀಗೆಂದು ನಾನು ಒಮ್ಮೆ ಹಲವಾರು ಮಠಾಧೀಶರು ಸೇರಿದಾಗ ಕೇಳಿದೆ. ಅವರು ಚೆಪ್ಪಾಗಿ ನಿಂತು ಉತ್ತರಿಸಲಿಲ್ಲ. ಕೊನೆಗೆ ಕುಪ್ಪೂರು ತಮ್ಮಡಿಹಳ್ಳಿ ಮಠಾಧ್ಯಕ್ಷರಾದ ಪೂಜ್ಯ ಶ್ರೀ ಮಲ್ಲಿಕಾರ್ಜುನ ದೇಶೀಕೇಂದ್ರ ಸ್ವಾಮಿಗಳು, 'ಈ ಧರ್ಮಕ್ಕೆ ನಾವೇ ಗುರುಗಳು' ಎಂದರು. ನನಗೆ ಒಪ್ಪಿಗೆಯಾಗದೆ ಕಡೆಗೆ ದಿ. 24-3-2003 ರಂದು ಸಿದ್ಧಗಂಗೆಯ ಪೂಜ್ಯರಿಗೇ ಪತ್ರ ಬರೆದೆ. ಅವರು ದಿ. 10-4-2003 ರಂದು ಉತ್ತರ ಬರೆದರಾದರೂ ಸ್ಪಷ್ಟ ಉತ್ತರ ಕೊಡಲಿಲ್ಲ. ಆ ಪತ್ರದ ಜೆರಾಕ್ಸ್ ಪ್ರತಿ ಕಳಿಸಿದ್ದೇನೆ. ಹೀಗಾಗಿ ಈ ಲಿಂಗಾಯತ ಧರ್ಮದ ಮೂಲ ಗುರು ಯಾರು ಎಂಬ ಸಂದೇಹ ನನ್ನನ್ನು ಕಾಡುತ್ತಿದೆ. ದಯವಿಟ್ಟು ನೀವಾದರೂ ಪರಿಹರಿಸುವಿರಾ ?

★ ನೀವು ಕೊಂಕಣ ಸುತ್ತಿ ಮೈಲಾರಕ್ಕೆ ಬಂದಂತೆ ಎಷ್ಟು ಕಷ್ಟಪಟ್ಟಿದ್ದೀರಿ! ''ಬಳ್ಳಿಗುರುಡರು ಸೇರಿ ಹಳ್ಳವನ್ನು ಬಿದ್ದಂತೆ'' ಎಂಬ ಸರ್ವಜ್ಞ ವಾಣಿ ಲಿಂಗಾಯತ ಮಠಾಧೀಶರಿಗೆ, ಸಮಾಜಕ್ಕೆ ಅನ್ವಯವಾದಂತೆ ಇನ್ನಾರಿಗೂ ಆಗದು. ಒಂದು ಮಗುವಿನ ತಂದೆ ಯಾರು ಎಂಬ ಸತ್ಯ ತಾಯಿಗೆ ಗೊತ್ತಿದ್ದಂತೆ ಇನ್ನಾರಿಗೂ ಗೊತ್ತಿರದು. ನೀವು ಅಜ್ಜ-ಅಜ್ಜಿ, ದೊಡ್ಡಪ್ಪ-ಚಿಕ್ಕಪ್ಪ ಎಲ್ಲರನ್ನು ಕೇಳಿದರೂ ಅವರಾರಿಗೂ ಸತ್ಯ ಗೊತ್ತಿರದು. ಹಾಗೆ ವಚನ ಸಾಹಿತ್ಯ ಎನ್ನುವ ತಾಯಿಯನ್ನು ಕೇಳಿರಿ - ಲಿಂಗಾಯತ ಧರ್ಮದ ಶಿಶುವಿನ ಜನ್ಮಕ್ಕೆ ಕಾರಣರು ಯಾರು ಎಂದು. ಆ ತಾಯಿ ಸ್ಪಷ್ಟವಾಗಿ ಹೇಳುತ್ತಾಳೆ, ಬಸವಣ್ಣನವರೇ ಈ ಧರ್ಮದ ತಂದೆ ಎಂದು !

ಮೊದಲು ಸಿದ್ಧರಾಮೇಶ್ವರರನ್ನು ಕೇಳೋಣ :

ಕರುಣೆ ಬಸವಾ, ಕಾಲಹರ ಬಸವಾ, ಕರ್ಮಹರ ಬಸವಾ,
ನಿರ್ಮಳ ಬಸವಾ, ಶಿವಜ್ಞಾನಿ ಬಸವಾ,
ನಿಮ್ಮ ಧರ್ಮವಯ್ಯಾ - ಈ ಭಕ್ತಿಯ ಪಥವು.
ಕರುಣೆ ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ (ಬಸವ ದರ್ಶನ - 953)

ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರನ್ನು ಕೇಳೋಣ :

ಆದಿಯಲ್ಲಿ ನೀನೆ ಗುರುವಾದ ಕಾರಣ, ನಿನ್ನಿಂದ ಹುಟ್ಟಿತು ಲಿಂಗ.
ಆದಿಯಲ್ಲಿ ನೀನೆ ಲಿಂಗವಾದ ಕಾರಣ, ನಿನ್ನಿಂದ ಹುಟ್ಟಿತ್ತು ಜಂಗಮ.
ಆದಿಯಲ್ಲಿ ನೀನೆ ಜಂಗಮವಾದ ಕಾರಣ, ನಿನ್ನಿಂದ ಹುಟ್ಟಿತ್ತು ಪ್ರಸಾದ.
ಆದಿಯಲ್ಲಿ ನೀನೆ ಪ್ರಸಾದಿಯಾದ ಕಾರಣ, ನಿನ್ನಿಂದ ಹುಟ್ಟಿತ್ತು ಪಾದೋದಕ.
ಇಂತೀ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಸ್ವರೂಪ
ನೀನೆಯಾದ ಕಾರಣ, ಜಂಗಮ ಪ್ರಾಣಿಯಾಗಿ ಸದಾಚಾರಿಯಾದೆ.
ಅದು ಕಾರಣ, ನೀನೆ ಸರ್ವಾಚಾರ ಸಂಪನ್ನನಾಗಿ
ಪೂರ್ವಾಚಾರಿ ನೀನೆಯಾದ ಕಾರಣ, ಗುಹೇಶ್ವರಲಿಂಗದಲ್ಲಿ ಚಂದಯ್ಯಂಗೆ
ಲಿಂಗದ ನಿಜವ ತಿಳುಹಾ ಸಂಗನಬಸವಣ್ಣಾ! (ಬಸವ ದರ್ಶನ - 937)

ವೀರ ಗಣಾಚಾರಿ ಮಡಿವಾಳ ಮಾಚಿದೇವರನ್ನು ಕೇಳೋಣ :

ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ
ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು
ಒತ್ತಿ ಹಿಂಡಿದಡೆ ಭಕ್ತಿಯೆಂಬ ರಸವಯ್ಯಾ,
ಆಯತ ಬಸವಣ್ಣನಿಂದ, ಸ್ವಾಯತ ಬಸವಣ್ಣನಿಂದ.
ಸನ್ನಿಹಿತವು ಬಸವಣ್ಣನಿಂದ.
ಗುರು ಬಸವಣ್ಣನಿಂದ, ಲಿಂಗ ಬಸವಣ್ಣನಿಂದ,
ಜಂಗಮ ಬಸವಣ್ಣನಿಂದ,
ಪಾದೋದಕ ಬಸವಣ್ಣನಿಂದ, ಪ್ರಸಾದ ಬಸವಣ್ಣನಿಂದ,
ಅತ್ತ ಬಲ್ಲಡೆ ನೀವು ಹೇಳಿರೆ. ಇತ್ತ ಬಲ್ಲಡೆ ನೀವು ಕೇಳಿರೆ.
ಬಸವಾ ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವನ ಭಕ್ತಿ
ಶೂನ್ಯ ಕಾಣಾ, ಕಲಿದೇವರದೇವ (ಬಸವ ದರ್ಶನ 275)

ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಪತ್ರ

ಶ್ರೀ ಸೋಮಶೇಖರಯ್ಯ ಇವರಿಗೆ ಆಶಿಷಃ

ನಿಮ್ಮ ಪತ್ರವು ಮುಟ್ಟಿ ಅರಿಕೆಯಾಯಿತು. ವೀರಶೈವ ಅಥವಾ ಲಿಂಗಾಯತ ಮತವು ಯಾವಾಗ ಉದಯವಾಯಿತು, ಯಾರು ಮೂಲ ಪರುಷರು ಈ ವಿಚಾರವು ವಾದಗ್ರಸ್ತವಾಗಿದೆ. ಇನ್ನು ಸಂಶೋಧನೆಯ ಹಂತದಲ್ಲಿಯೇ ಇದೆ. ಇಂಥವರೇ ಎಂದು ನಿರ್ಣಯವಾಗಿಲ್ಲ.

ಯಾವುದೇ ಒಂದು ಧರ್ಮದ ಮಹತ್ವವನ್ನು ಅರಿವು ಮಾಡಿಕೊಳ್ಳಬೇಕಾದರೆ ಅದರ ಪ್ರಾಚೀನತೆ ಅಥವಾ ಅದರ ಮೂಲ ಪುರುಷನ ನಿರ್ಣಯದಿಂದಲ್ಲ. ಆದರೆ ಆ ಧರ್ಮದ ತತ್ವಗಳೇನು ? ಅವುಗಳಿಂದ ಜನತೆಯ ಮೇಲೆ ಆಗತಕ್ಕ ಪರಿಣಾಮಗಳೇನು ? ತತ್ವಗಳ ಪರಣಿತೆಯಿಂದ ಆಗತಕ್ಕ ಸಮಾಜದ ಸ್ವರೂಪವೇನು ? ಆಧುನಿಕ ಜಗತ್ತಿನ ಸಮಸ್ಯೆಗಳಿಗೆ ಅದು ಹೇಗೆ ಸ್ಪಂದಿಸಬಲ್ಲದು ಈ ಮುಂತಾದ ವಿಷಯಗಳಿಗೆ ಹೆಚ್ಚು ಮಹತ್ವ ಕೊಡಬೇಕಾಗುತ್ತದೆ.

ಮೂಲ ಪುರುಷರಿಲ್ಲದಿದ್ದರೆ ತಂದೆಯಿಲ್ಲದ ಮಗುವಿನಂತೆ ಏನೂ ಆಗುವುದಿಲ್ಲ. ಈಗ ಹಿಂದೂ ಧರ್ಮವೆಂದು ಕರೆಯುತ್ತಾರೆ. ಅದರ ಮೂಲ ಪುರುಷರು ಯಾರು ? ಎಂಬುದು ಇನ್ನೂ ನಿರ್ಣಯವಾಗಿಲ್ಲ ಇದರಿಂದ ಅದು ಅನಾಥವೆಂದು ತಿಳಿಯಲು ಬರುವುದಿಲ್ಲ. ಪ್ರಯುಕ್ತ ಎಲ್ಲ ವಿಷಯಗಳನ್ನು ಪತ್ರದಲ್ಲಿ ಬರೆಯಲು ಆಗುವುದಿಲ್ಲ. ಸಮಕ್ಷಮ ಬಂದು ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

ಇತ್ಯಾಶಿಷಃ
ಶ್ರೀ ಶಿವಕುಮಾರ ಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠ

ಸಿದ್ಧಗಂಗಾ ಶ್ರೀಗಳಂತಹ ಹಿರಿಯರು ಯಾರಿಗೆ ಹೆದರಿ ಸತ್ಯವನ್ನು ಹೇಳಲು ಹಿಂಜರಿಯುತ್ತಿದ್ದಾರೋ ನಮಗೂ ಅರ್ಥವಾಗುತ್ತಿಲ್ಲ. ಶ್ರೀ ಎಸ್.ಎಂ.ಕೃಷ್ಣ ಅವರಿಗೆ ಹೆದರುತ್ತಿದ್ದಾರೋ (ಪಾಪ, ಅವರಿಗೂ ಇದಕ್ಕೂ ಏನೂ ಸಂಬಂಧವಿಲ್ಲ) ರಂಭಾಪುರಿ ಜಗದ್ಗುರುಗಳಿಗೆ ಹೆದರುತ್ತಿದ್ದಾರೋ ಅಥವಾ ವೀರಶೈವ ಮಹಾಸಭಾಧ್ಯಕ್ಷ ಭೀಮಣ್ಣ ಖಂಡ್ರೆಯವರಿಗೆ ಹೆದರುತ್ತಿದ್ದಾರೋ ? ಈ ಸಂದೇಹ ನಮ್ಮನ್ನು ಕಾಡುತ್ತಿದೆ. ಸಿದ್ಧಲಿಂಗೇಶ್ವರರ ಸಂಪ್ರದಾಯದವರಾದ ಅವರು ತೋಂಟದ ಸಿದ್ಧಲಿಂಗ ಯತಿಗಳ ವಚನವನ್ನು ಓದಿದರೆ ಸಾಕು. ಈ ಧರ್ಮದ ಮೂಲ ಪುರುಷರು ಯಾರು ಎಂಬುದು ಸ್ಪಷ್ಟವಾಗುತ್ತದೆ. ನೀವು ಇನ್ನು ಅವರಿವರನ್ನು ಕೇಳುವುದನ್ನು ಬಿಟ್ಟು ವಚನ ಸಾಹಿತ್ಯವನ್ನು ಸತತವಾಗಿ ಓದಿರಿ, ಸಾಕು. ನಿಮ್ಮ ಎಲ್ಲ ಸಂದೇಹಕ್ಕೂ ಉತ್ತರ ದೊರೆಯುತ್ತದೆ. ಡಾ|| ಚಿ.ಮೂ ಅಂಥವರನ್ನು ಪ್ರಶ್ನಿಸುವ ಬೌದ್ಧಿಕ ತಾಕತ್ತು ಬರುತ್ತದೆ.

ಲಿಂಗಾಯತ ಧರ್ಮಕ್ಕೂ ಹಿಂದು ಧರ್ಮಕ್ಕೂ ಹೋಲಿಕೆ ಸಲ್ಲದು. ಹಿಂದು ಒಂದು ವಿಶಿಷ್ಟ ಧರ್ಮವಲ್ಲ. ಹೀಗಾಗಿ ಅದಕ್ಕೆ ಒಬ್ಬ ಸ್ಥಾಪಕನಿಲ್ಲ; ಒಂದೇ ಬಗೆಯ ವಿಚಾರ-ಆಚಾರ ಸಂಹಿತೆ ಇಲ್ಲ ಜಗತ್ತಿನಲ್ಲಿ ನೈಸರ್ಗಿಕ ಧರ್ಮಗಳು (Natural religions) ಎಂದು ಕರೆಸಿಕೊಂಡಿರುವ ವೈದಿಕ-ಹಿಂದು ಧರ್ಮ ಮತ್ತು ಯಹೂದಿ ಧರ್ಮ ಇವಕ್ಕೆ ಒಬ್ಬ ಸ್ಥಾಪಕರು ಇರುವುದಿಲ್ಲ. ಉಳಿದ ಧರ್ಮಗಳೆಲ್ಲ ಸ್ಥಾಪಕರನ್ನು ಹೊಂದಿವೆ ಮತ್ತು ಏಕರೂಪದ ಆಚಾರ-ವಿಚಾರ-ಮಾರ್ಗಗಳನ್ನು ಹೊಂದಿವೆ. ಲಿಂಗಾಯತವು ನೈಸರ್ಗಿಕ ಧರ್ಮವಲ್ಲ, ಬಸವ ಸಂಸ್ಥಾಪಿತ ವಿಶ್ವಧರ್ಮ.

ಸಿದ್ಧಗಂಗಾ ಶ್ರೀಗಳು ಹೇಳುವಂತೆ ಮೂಲಪುರುಷರ ಬಗ್ಗೆ ಯಾವ ಸಂದೇಹವೂ ಉಳಿದಿಲ್ಲ. ವಚನ ಸಾಹಿತ್ಯವೇ ಬಸವಣ್ಣನವರು ಮೂಲ ಪುರುಷರೆಂದು ಘೋಷಿಸಿದೆ. ಯಾವುದೇ ಸಮಾಜವು ಸಂಘಟಿತವಾಗಿ ರೂಪುಗೊಳ್ಳಬೇಕಾದರೆ ಧರ್ಮಗುರುವಿನಲ್ಲಿ ಅಚಲ ಶ್ರದ್ಧೆ ಮುಖ್ಯ. ಇಂದು ಬಹುಪಾಲು ಚಿಂತಕರು ಕೇಳುವ ಪ್ರಶ್ನೆ, 'ನೀವು ಬಸವ ತತ್ತ್ವವು ಬಹಳ ಘನವಾಗಿದೆ ಎಂದು ಹೇಳುತ್ತೀರಿ. ಹಾಗಾದರೆ ಅದಕ್ಕೆ ಎಳ್ಳಷ್ಟೂ ಹೋಲಿಕೆ ಇಲ್ಲದಂತೆ ಲಿಂಗಾಯತ ಸಮಾಜ (ಮತ್ತು ಮಠಗಳು) ಏಕೆ ರೂಪುಗೊಂಡಿವೆ'. ಇದಕ್ಕೆ ನಾನು ಕೊಡುವ ಸ್ಪಷ್ಟ ಉತ್ತರ, ಗುರು ಬಸವಣ್ಣನವರನ್ನು ಮರೆತುದು, ವಚನ ಸಾಹಿತ್ಯವನ್ನು ಓದದೆ ಮತ್ತೆ ವೇದಾಗಮ ಪುರಾಣಗಳನ್ನು ಮಠಾಧೀಶರು ಓದ ತೊಡಗಿದುದು.

- ಶಂಕರ್ ಕರಡಿ ಗುಡ್ಡ, ಹುಬ್ಬಳ್ಳಿ

? ವೀರಶೈವರು ಮತ್ತು ವೀರಶೈವ ಲಿಂಗಾಯತರು ವೀರಶೈವ ಮಹಾಸಭಾ ಆಶ್ರಯದಲ್ಲಿ ಕೂಡಲ ಸಂಗಮದಲ್ಲೇ ಮಾಡುವ ಅಗತ್ಯವೇನಿತ್ತು? ಪಂಚಪೀಠದವರ ಮುಖ್ಯ ಕೇಂದ್ರ ಬಾಳೇಹೊನ್ನೂರು ಅಥವಾ ವಿರಕ್ತರ ಕೇಂದ್ರಗಳಾದ ಸಿದ್ಧಗಂಗ, ಚಿತ್ರದುರ್ಗ, ಗದಗ್ ಮುಂತಾದಲ್ಲಿ ಮಾಡಬಹುದಿತ್ತಲ್ಲ?

★ ಅನೇಕ ಧಾರ್ಮಿಕ ನೇತಾರರು ನೆಲೆಸಿದ ಕ್ಷೇತ್ರಗಳು ಧರ್ಮದ ಕ್ಷೇತ್ರಗಳಾದರೆ, ಧರ್ಮಗುರು ಬಸವಣ್ಣನವರು ಐಕ್ಯರಾದ ಕೂಡಲ ಸಂಗಮವು ಲಿಂಗಾಯತರ ಧರ್ಮಕ್ಷೇತ್ರ ಎಂದು ನಾವು 1988ರಲ್ಲಿ ಮೊಟ್ಟಮೊದಲನೆಯ ಶರಣ ಮೇಳದಲ್ಲಿ ಘೋಷಿಸಿದೆವು. ಅದೀಗ ನಿಜವಾಗುವಂತೆ ಗುರು-ವಿರಕ್ತರೆಲ್ಲರೂ ಕೂಡಲ ಸಂಗಮವೇ ಧರ್ಮಕ್ಷೇತ್ರ ಎಂದು ಭಾವಿಸಿ ಕೂಡಲ ಸಂಗಮದಲ್ಲಿ

ಸಮಾವೇಶ ಮಾಡಿದ್ದಾರೆ. ಇದು ಅಭಿನಂದನಾರ್ಹವೆ!

- ವಿನಯ ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ

? ಗುರು ವಿರಕ್ತರ ಸಮಾವೇಶಕ್ಕೆ ತಮ್ಮನ್ನು ಏಕೆ ಕರೆದಿಲ್ಲ? ನೀವೊಬ್ಬರೇ ಮಹಿಳಾ ಜಗದ್ಗುರು! ಮಹಿಳಾ ಗುರುಗಳು ಇಲ್ಲದುದು ಬಹುದೊಡ್ಡ ಕೊರತೆ ಎನ್ನಿಸಿತು. ನಿಮ್ಮನ್ನು ಆಹ್ವಾನಿಸದುದಕ್ಕೆ ಆಶ್ಚರ್ಯ-ಖೇದ ಎರಡೂ ಆಯಿತು. ಈ ಬಗ್ಗೆ ತಮ್ಮ ಅಭಿಪ್ರಾಯವೇನು ?

★ ನಾವು ವೀರಶೈವ ವಾದಿಗಳಾದ ಗುರುವರ್ಗದವರೂ ಅಲ್ಲ, ವೀರಶೈವ ಲಿಂಗಾಯತರಾದ ವಿರಕ್ತವರ್ಗದವರೂ ಅಲ್ಲ. ನಾವು ಶುದ್ಧ ಲಿಂಗಾಯತರು, ಬಸವ ಧರ್ಮೀಯರು. ಅದು ಬಸವ ಧರ್ಮೀಯರ ಸಮಾವೇಶವಲ್ಲ, ಆದ್ದರಿಂದ ಅವರು ನಮ್ಮನ್ನು ಕರೆದಿಲ್ಲ. ಆಚರಣೆಯಲ್ಲಿ ಬಹುದೇವತೋಪಾಸಕರು, ಇಷ್ಟಲಿಂಗ ನಿಷ್ಠೆ ಇಲ್ಲದವರು, ಜಾತಿವಾದಿಗಳು, ಮಹಿಳೆಯರ ಗುರುತ್ವ ಒಪ್ಪದ ಪ್ರತೀಗಾಮಿಗಳು ಆಗಿರುವ ಆ ಜನರು ನಮ್ಮನ್ನು ಕರೆದಿದ್ದರೆ ಆಶ್ಚರ್ಯ ಪಡಬೇಕಾಗಿತ್ತೇ ವಿನಾ ಕರೆಯದಿದ್ದುದಕ್ಕಲ್ಲ.

- ಗಂಗಮ್ಮ ಸೋಬಾನದ, ಧಾರವಾಡ

? ವೀರಶೈವ ಮಹಾಸಭೆಯವರು ತಮ್ಮನ್ನು ಆಹ್ವಾನಿಸದಿದ್ದರಷ್ಟೆ, ಆದರೆ ಮಾತೆ ಮಹಾದೇವಿಯವರನ್ನು ಆಹ್ವಾನಿಸಿಲ್ಲ ವಚನಾಂಕಿತ ತಿದ್ದುಪಡಿ ಮಾಡಿದ್ದರಿಂದ ಎಂದು ಪದೇಪದೇ ಹೇಳಿಕೆಯನ್ನು ಪತ್ರಿಕೆಗಳ ಮೂಲಕ ಭೀಮಣ್ಣ ಖಂಡ್ರೆ, ಚಂದ್ರಕಾಂತ ಬೆಲ್ಲದ ಮುಂತಾದವರು ಕೊಡುವ ಅಗತ್ಯವಿತ್ತೆ?

★ ಅದು ಅವರ ಅನಾಗರೀಕ ನಡೆಯನ್ನೂ, ಕುಸಂಸ್ಕೃತಿಯನ್ನು ತೋರಿಸುತ್ತದೆ. ಶಿಷ್ಟಾಚಾರ ಸಂಹಿತೆಯನ್ನೇ ಅರಿಯದ ಭೀಮಣ್ಣ ಖಂಡ್ರೆ, ತಮ್ಮ ಮತ್ತು ತಮ್ಮ ಮಕ್ಕಳ ನಡತೆಯಿಂದ ಸಭ್ಯ ಸಂಸ್ಕೃತಿಯಾದ ಶರಣ ಸಂಸ್ಕೃತಿಗೆ ಕುಂದುತರುತ್ತಿದ್ದಾರೆ. ಒಂದು ವೇಳೆ ಅವರು ಕರೆದರೂ ನಾವು ಹೋಗುತ್ತಿರಲಿಲ್ಲ; ಹೋದರೂ ನಾವು ಸುಮ್ಮನೆ ಉಳಿದ ವಿರಕ್ತರಂತೆ ಕಾಲೆತ್ತಿನಲ್ಲಿ ತಲೆ ಹಾಕುತ್ತಾ ಪಂಚ ಪೀಠದವರು ಆಡಿದ ಮಾತುಗಳನ್ನೆಲ್ಲ ಸಹಿಸಿಕೊಂಡು ಎದ್ದು ಬರುತ್ತಿರಲಿಲ್ಲ.

'ಮಾತೆ ಮಹಾದೇವಿಯವರನ್ನು ಕರೆದಿಲ್ಲ' ಎಂದು ಹೇಳುವ ಒಂದು ಸದುದ್ದೇಶವೂ ಇರಬಹುದು. ಅದೇನೆಂದರೆ, ಹಾಗೆ ಹೇಳಿದಾಗ ಮಾತೆ ಮಹಾದೇವಿಯವರ ತತ್ತ್ವನಿಷ್ಠ ಅಭಿಮಾನಿಗಳು ಸಭೆಗೆ ಬರುವುದಿಲ್ಲ, ಅವರು ಬರಬಾರದೆಂಬುದೇ ಆ ಉದ್ದೇಶವಿರಬಹುದು.

- ಬಸವರಾಜ ಶಿವಪುತ್ರಪ್ಪ ಬಿರಾದಾರ, ಬೀದರ

? ಚಿತ್ರದುರ್ಗದ ಬೃಹನ್ಮಠದ ಶರಣರು ಭಾಷಣಗಳ ಮೂಲಕ ಕೊಡುವ ಶಾಂತಿ-ಅಹಿಂಸೆಯ ಸಂದೇಶಗಳು ಬಹಳ ಚೆನ್ನಾಗಿರುತ್ತವೆ. ಆದರೆ ಅವರು ಮತ್ತು ಅವರ ಅನುಯಾಯಿಗಳು, ಅವರಿಂದ ಪ್ರೇರಿತರಾದವರು ಮಾಡುತ್ತಿರುವ ದುಷ್ಟ ಚುಟುವಟಿಕೆ ನೋಡಿದರೆ ದಿಗ್ಭ್ರಾಂತಿಯಾಗುತ್ತದೆ. ಈ ನುಡಿ-ನಡೆಗಳ ವೈಪರೀತ್ಯ ಎಷ್ಟು ಅಸಹ್ಯವಲ್ಲವೆ?

★ ಅವರಿಗೆ ಭಾಷಣಗಳನ್ನು ಬರೆದುಕೊಡುವ ಯಾರೋ ಪುಣ್ಯಾತ್ಮನು ಸಾತ್ತ್ವಿಕನಿದ್ದಂತೆ ತೋರುತ್ತದೆ. ಬಹುಶಃ ಆತನು ಬರೆದುಕೊಡುವ ಮಾತುಗಳನ್ನು ಬಾಯಿಪಾಠ ಮಾಡಿ ಶ್ರೀ

ಶಿವಮೂರ್ತಿ ಶರಣರು ಭಾಷಣದಲ್ಲಿ ಪುನರುಚ್ಚಾರ ಮಾಡುವಂತೆ ತೋರುತ್ತದೆ. ಆದ್ದರಿಂದ ಅವರ ಮಾತುಗಳಲ್ಲಿ ಆ ಅಜ್ಞಾತ ಬರಹಗಾರನನ್ನು ಗುರುತಿಸಿರಿ, ಅವರ ಹಿಂಬಾಲಕರ ಹೀನ ಕೃತ್ಯಗಳಲ್ಲಿ ಇವರನ್ನು ಹುಡುಕಿರಿ.

- ಓರ್ವ ಸಾಧಕ ಹೃದಯಿ, ಧಾರವಾಡ

? ಕಲ್ಯಾಣ ಪರ್ವದಲ್ಲಿ ಬಿಡುಗಡೆಯಾದ ದೇವ ಪ್ರೇಮ ಧ್ವನಿ ಸುರುಳಿ ಕೇಳಿ ಸಂತೋಷವಾಯಿತು. ಅದರಲ್ಲಿ ತಾವು ಬರೆದ ದೇವ-ಭಕ್ತರ ಮಧುರ ಸಂಬಂಧದ ಭಕ್ತಿಗೀತೆಗಳಿವೆ. ಇತ್ತೀಚೆಗೆ ಅಂಥ ಗೀತೆಗಳನ್ನು ಏಕೆ ಬರೆಯುತ್ತಿಲ್ಲ?

★ ಮನಸ್ಸು ಆಧ್ಯಾತ್ಮಿಕ ಸಾಧನಾ ಪಥದಲ್ಲಿ ವಿವಿಧ ಮೆಟ್ಟಿಲುಗಳ ಮೂಲಕ ಮೇಲೇರುತ್ತದೆ. ಕನ್ಯೆಯು ನಿಶ್ಚಯವಾದ ಬಳಿಕ, ಮದುವೆಗೆ ಮುನ್ನ ಬಹುವಾಗಿ ತನ್ನ ಭಾವೀ ಪತಿಯ ಬಗ್ಗೆ ವಿರಹವನ್ನು ಅನುಭವಿಸುತ್ತಾಳೆ. ಮದುವೆಯ ನಂತರ ಸ್ವಲ್ಪಕಾಲ ಅನುರಕ್ತೆಯಿಂದ ಅದೇ ರೀತಿ ಹಂಬಲಿಸುತ್ತಾಳೆ. ಬರುಬರುತ್ತಾ ಗೃಹಿಣಿಯ ಕರ್ತವ್ಯ ಸ್ಥಾಯಿಯಾಗುತ್ತಾ ಹೋದಾಗ ಮಕ್ಕಳ ಸೇವೆ, ಅತ್ತೆ ಮಾವಂದಿರ ಸೇವೆಯಲ್ಲಿ ತಲ್ಲೀನಳಾಗಿ ಹೊಸತರಲ್ಲಿ ಕೇವಲ ಪತಿಯ ಬಗ್ಗೆ ಕೇಂದ್ರೀಕೃತವಾಗಿದ್ದ ಪ್ರೀತಿಯನ್ನು ನಂತರ ಹಂಚಬೇಕಾಗುತ್ತದೆ. ಅದೇ ರೀತಿ ಸಾಧಕರು ಗುರುಕಾರುಣ್ಯಕ್ಕೆ ಮೊದಲು ಮತ್ತು ದೀಕ್ಷಾ ನಂತರ ಉತ್ಕಟವಾದ ಲಿಂಗದೇವನ ವಿರಹ ಅನುಭವಿಸುತ್ತಾರೆ. ಭಕ್ತಿಯು ಮಾಗುತ್ತ ಹೋದಂತೆ ಬಸವಾದಿ ಪ್ರಮಥರೆಂಬ ಹಿರಿಯರ ಸೇವೆಯಲ್ಲಿ, ಸಮಾಜ ಬಂಧುಗಳೆಂಬ ಮಕ್ಕಳ ಪ್ರಗತಿಯಲ್ಲಿ ಆಸಕ್ತಿ ಹೊಂದುತ್ತಾರೆ. ಅಂಥ ಸ್ಥಿತಿಯನ್ನು ಲಿಂಗವಿಕಳಾವಸ್ಥೆ ಎಂದು ಕರೆಯಲಾಗಿದೆ. ನಂತರದ ಬದಲಾವಣೆಯನ್ನೇ ಷಟಸ್ಥಲದ ವಿವಿಧ ಹಂತಗಳಲ್ಲಿ ಪ್ರತಿಪಾದಿಸಿರುವುದು.

- ಚಂದ್ರಶೇಖರಪ್ಪ, ದಾವಣಗೆರೆ

? ಡಾ|| ಎಂ.ಎಂ. ಕಲಬುರ್ಗಿಯವರು ಅಕ್ಟೋಬರ್ 3ರಂದು ಚಿತ್ರದುರ್ಗದ ಬೃಹನ್ಮಠದ ಉತ್ಸವದಲ್ಲಿ ಮಾತನಾಡುತ್ತ ಬಸವಣ್ಣನೇ 'ವೀರಶೈವರ ಮೂಲಪುರುಷ' ಎಂದಿದ್ದಾರೆ (ಪ್ರಜಾವಾಣಿ ಅಕ್ಟೋಬರ್ 4). ಚಿತ್ರದುರ್ಗದ ಶ್ರೀ ಶಿವಮೂರ್ತಿ ಶರಣರು ಒಬ್ಬ ಯುಗಪುರುಷ ಎಂದು ಹೊಗಳಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯ!

★ ಸಾಹಿತಿಗಳದ್ದು ಬಹಳ ನಿಧಾನಗತಿಯ ತಿಳುವಳಿಕೆ. ಅವರ ನಾಲಿಗೆ ಮೇಲೆ ಕೆಲವು ಪದಗಳು ನೆಲೆಸಿರುತ್ತವೆ - ನಂತರ ಅವರು ಸತ್ಯವನ್ನು ತಿಳಿದು, ಉದಾಹರಣೆಗೆ ನಾವು ಆಚರಿಸುವುದು ಲಿಂಗಾಯತ ಧರ್ಮ ಎಂದು ತಿಳಿದರೂ ಹಳೆಯ ಅಭ್ಯಾಸದಿಂದ ವೀರಶೈವ ಎಂದು ಬಡಬಡಿಸುತ್ತಾರೆ. ಬಾಗಲಕೋಟೆ 'ಸಮ್ಮೇಳನದ ಸಮಯದಲ್ಲಿ ಲಿಂಗಾಯತ ಪದಕ್ಕೇ ಡಾ|| ಕಲಬುರ್ಗಿ ಒತ್ತುಕೊಟ್ಟಿದ್ದರು. ಈ ಪತ್ರಿಕಾ ವರದಿಗಾರರು ಕೆಲವೊಮ್ಮೆ ಅದಲು ಬದಲು ಮಾಡುವುದುಂಟು ವೀರಶೈವವಾದಿಗಳಿದ್ದರೆ ಕಲಬುರ್ಗಿಯವರು ಲಿಂಗಾಯತ ಎಂದು ಬಳಸಿದ್ದರೂ ಬೇಕೆಂತಲೇ ವೀರಶೈವ ಎಂದು ಬಳಸುವ ಸಾಧ್ಯತೆ ಇರುತ್ತದೆ. ವೀರಶೈವವು ಬಸವ ಪೂರ್ವದಲ್ಲಿದ್ದ ಸಪ್ತಶೈವಗಳಲ್ಲಿನ ಒಂದು ಶಾಖೆ(ಪಂಥ)ಯಾದ್ದರಿಂದ ಅದರ ಮೂಲಪುರುಷ ಬಸವಣ್ಣನವರು ಎಂದರೆ ತಪ್ಪಾಗುತ್ತದೆ. ವರ್ಣಾಶ್ರಮ ವ್ಯವಸ್ಥೆ, ಏಕದೇವತಾ ಉಪಾಸನೆ ಒಪ್ಪುವ, ಸಂಕುಚಿತ ವಿಚಾರದ ವೀರಶೈವದ

ಮೂಲಿಗರು ಬಸವಣ್ಣನವರು ಎಂದು ವಿಶ್ವಧರ್ಮಿ ಬಸವಣ್ಣನವರಿಗೆ ಅಪಚಾರ ಮಾಡುವ ಸಣ್ಣಮನಸ್ಸಿನವರಲ್ಲ ಡಾ|| ಕಲಬುರ್ಗಿಯವರು ಎಂದು ನಾನು ನಂಬಿದ್ದೇನೆ.

ಇನ್ನು ಶ್ರೀ ಶಿವಮೂರ್ತಿ ಶರಣರನ್ನು 'ಯುಗಪುರುಷ' ಎನ್ನುವ ಮಟ್ಟಕ್ಕೆ ಡಾ|| ಕಲಬುರ್ಗಿ ಹೋಗಿದ್ದರೆ ಉದಾರ ಮನಸ್ಸಿನಿಂದ ಅವರನ್ನು ಕ್ಷಮಿಸಿಬಿಡಿರಿ. ಭಾಷಣಕ್ಕೊಂದು ವೇದಿಕೆ, ಹೊದೆಯಲೊಂದು ಶಾಲು ಸಿಕ್ಕರೆ ಯಾರ ನಾಲಿಗೆ ತಾನೆ ಚುರುಕಾಗದು ? ಅವರು ಉಪ್ಪು, ಹುಳಿ, ಕಾರ ತಿನ್ನುವ ಆಸೆಗಳಿರುವ ಮನುಷ್ಯ ಜೀವವಲ್ಲವೆ ? ಈಗ ನನಗೆ ಯುಗಪುರುಷ ಪದದ ಅರ್ಥ ವ್ಯಾಪ್ತಿಯ ಬಗ್ಗೆಸಂದೇಹ ಏಳುತ್ತಿದೆ. ಗೂಂಡಾಗಿರಿ, ಇನ್ನೊಬ್ಬರ ಆಸ್ತಿ ಕಬಳಿಕೆ, ಇನ್ನಿತರ ಸಂಘ - ಸಂಸ್ಥೆಗಳ ಮೇಲೆ ಹಿಡಿತ ಸಾಧಿಸಲು ಮಾಡುವ ಕುತಂತ್ರ, ಪೋಲೀಸ್ ಇಲಾಖೆಯನ್ನು ಜೇಬಿನಲ್ಲಿಟ್ಟುಕೊಂಡು ಮುಗ್ಧಭಕ್ತರನ್ನು ಬಡಿಸುವ ಸಂಚು ಇತ್ಯಾದಿ ಇತ್ಯಾದಿ ಯುಗಪುರುಷರ ಲಕ್ಷಣಗಳೆ ? ಹಾಗಾದರೆ ವಿಶ್ವಗುರು ಬಸವಣ್ಣನವರು , ಬುದ್ಧ ಮುಂತಾದವರು ಯುಗಪುರುಷರು ಎಂಬ ನಮ್ಮ ಹೊಗಳಿಕೆಯನ್ನು ವಾಪಸ್ಸು ಪಡೆಯಬೇಕಾಗುತ್ತದೆ.. ಪಾಪ ! ಸಾಹಿತಿಗಳು !

ಹೆಸರು ಬೇಡ, ಚಿತ್ರದುರ್ಗ

? ಚಿತ್ರದುರ್ಗ ಶ್ರೀಗಳು ಜಾತಿ ಒಳಜಾತಿಗೆ ಒಂದೊಂದು ಪೀಠವನ್ನು ಆರಂಭಿಸುತ್ತಿದ್ದಾರೆ. ಇದನ್ನು ಗೃಹಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರಿಂದ ಹಿಡಿದು ಅನೇಕರು ಒಪ್ಪುತ್ತಿಲ್ಲ. ಇದು ಬಸವ ತತ್ತ್ವವೇ ಅಲ್ಲ ಎನ್ನುತ್ತಿದ್ದಾರೆ. ನಿಮ್ಮ ಅನಿಸಿಕೆ ಏನು ?

★ ಒಂದು ದೃಷ್ಟಿಯಿಂದ ಇದು ಬಸವ ತತ್ತ್ವವಲ್ಲ. ಧರ್ಮಪಿತ, ಕ್ರಾಂತಿಪುರುಷ ಬಸವಣ್ಣನವರು ಅಲ್ಲಮಪ್ರಭುದೇವರು ಹುಟ್ಟಿದ ನಟುವರ ಜಾತಿಗೊಂದು ಪೀಠ ಮಾಡಿ, ಅದಕ್ಕೆ ಪ್ರಭುದೇವರನ್ನು ಪೀಠಾಧಿಕಾರಿಯನ್ನಾಗಿ ಮಾಡಲಿಲ್ಲ. ಆಚಾರದಿಂದ ಭಕ್ತ, ಅರಿವಿನಿಂದ ಗುರು, ಅನುಭಾವದಿಂದ ಜಂಗಮ ಎಂದು ಸಾರಿ ಅಂಥ ಅನುಭಾವಿಯಾದ ಅಲ್ಲಮಪ್ರಭುವನ್ನು ಸಮಾಜದ ಸರ್ವೋನ್ನತ ಪೀಠಕ್ಕೆ ಏರಿಸಿದರು. ಹಾಗೆ ಚಿತ್ರದುರ್ಗ ಶ್ರೀಗಳು ತಮ್ಮ ಶಾಖಾ ಮಠಗಳಿಗೆಲ್ಲ ವಿವಿಧ ಜಾತಿ, ವರ್ಗಗಳವರನ್ನು ಅಧಿಕಾರಿ ಮಾಡಿದ್ದರೆ ಅದು ನಿಜವಾದ ಬಸವ ತತ್ತ್ವವಾಗುತ್ತಿತ್ತು.

ಇಂದಿನ ಕಾಲಮಾನದ ದೃಷ್ಟಿಯಿಂದ ಚಿತ್ರದುರ್ಗ ಶ್ರೀಗಳ ಪ್ರಯತ್ನವನ್ನು ಸ್ವಲ್ಪ ಅನುಮೋದಿಸಬಹುದು. ಲಿಂಗಾಯತ ಮಠಗಳ ಮೇಲೆ ಒಂದು ದೊಡ್ಡ ಹೊಣೆಗಾರಿಕೆ ಇದೆ. ಅದೆಂದರೆ ತಾವು ವಿಶ್ವಗುರು ಬಸವಣ್ಣನವರಿಂದ ಪಡೆದುಕೊಂಡ ಧಾರ್ಮಿಕ ಸೌಲಭ್ಯವನ್ನು ಉದಾರ ಮನಸ್ಸಿನಿಂದ ಇನ್ನಿತರರಿಗೂ ಕೊಡಬೇಕು. ಇದನ್ನು ಮರೆತಿರುವುದಷ್ಟೇ ಅಲ್ಲ ಲಿಂಗಾಯತರಲ್ಲಿರುವ ಒಳಜಾತಿಗಳಲ್ಲೇ ಮೇಲುಕೀಳು ಎಂದು ಭೇದ ಮಾಡುತ್ತಿದ್ದಾರೆ. ಕೆಲವರು ತಾವು ಮೇಲುಜಾತಿಯವರೆಂದು ಹೇಳಿಕೊಳ್ಳುತ್ತ ಇನ್ನಿತರ ಲಿಂಗಾಯತ ಒಳಜಾತಿಗಳವರನ್ನು ನಿಕೃಷ್ಟವಾಗಿ ಕಾಣುತ್ತಾರೆ. ಹೀಗಿರುವಾಗ ಇವರು ಲಿಂಗಾಯತೇತರ ನಿಮ್ನವರ್ಗದವರ ಉದ್ಧಾರಕ್ಕೆ ಯತ್ನಿಸುವುದಂತೂ ದೂರವೇ ಉಳಿಯಿತು. ಆದ್ದರಿಂದ ಆ ಎಲ್ಲ ಜನರ ಉದ್ಧಾರಕ್ಕೆ ಸಹಕಾರಿಯಾಗುವುದಾದರೆ ಆಯಾ ಜಾತಿಗೊಂದು ಪೀಠ ಮಾಡಿ, ಗುರುಗಳನ್ನು ನೇಮಿಸಿದರೆ ಆ ಜನಾಂಗದ ಉದ್ಧಾರದ ಬಾಗಿಲು ತೆರೆದಂತಾಗುವುದು.

ಆದರೆ.....ಉದ್ದೇಶ ಘನವಾಗಿದ್ದರೂ ಪ್ರಾಯೋಗಿಕವಾಗಿ ಎಷ್ಟರ ಮಟ್ಟಿಗೆ ಯಶಸ್ಸು ಸಿಗುತ್ತಲಿದೆ ? ಆಧ್ಯಾತ್ಮಿಕ ಮನೋವೃತ್ತಿ ಇಲ್ಲದವರನ್ನು ಜಾತಿ ಉದ್ಧಾರಕ್ಕೆ, ಆಸ್ತಿ ಮಾಡಲು, ಅದನ್ನು ಕಾಯಲು, ಪೀಠಾರೋಹಣ ಮಾಡಿಸಿದರೆ ಅಂಥವರು ಜನರಲ್ಲಿ ಆಧ್ಯಾತ್ಮಿಕ ಜಾಗೃತಿ ಉಂಟು ಮಾಡುವ ಬದಲು ಭಯೋತ್ಪಾದಕರಂತೆ ಒತ್ತಾಯದಿಂದ ಹಣ ವಸೂಲಿ ಮಾಡುತ್ತ 'ತಲೆಗಂದಾಯ' ಹಾಕಲು ಸಿದ್ಧರಾಗುವರು. ಇಂದು ಬೇಕಾಗಿರುವುದು ಆಧ್ಯಾತ್ಮಿಕ ಮೌಲ್ಯಗಳ ಜಾಗೃತಿ ಮತ್ತು ಪ್ರಚಾರ.

ಚಿತ್ರದುರ್ಗದ ಬೃಹನ್ಮಠದವರು ಮಹತ್ವಾಕಾಂಕ್ಷಿಗಳು. ಅನೇಕ ಜಾತಿಗಳ ಸಾಧಕರ ತಲೆಯ ಮೇಲೆ ಕೈ ಇಡುವ ಜೊತೆಜೊತೆಗೆ ಅವರ ಮಠಗಳ ಆಸ್ತಿಗಳ ಮೇಲೂ ವಾರೆ ನೋಟ ಬೀರುವುದು ಅಸಂಭವವೇನಲ್ಲ. ಆದ್ದರಿಂದ ಆ ಜನರು ಮುಂಜಾಗ್ರತೆ ವಹಿಸಿದರೆ ಜಾತಿ ಪೀಠಗಳ ಸ್ಥಾಪನೆ ತೀರಾ ಪ್ರಮಾದವೇನಲ್ಲ.

- ಮಲ್ಲಿಕಾರ್ಜುನಪ್ಪ ಸಬರದ, ಹಾವೇರಿ

? ಪಂಚಮಸಾಲಿ ಜನರು ತಮ್ಮದೇ ಆದ ಒಂದು ಒಳಜಾತಿಯ ಸಂಘಟನೆ ಮಾಡುತ್ತಿದ್ದಾರೆ. ಇದು ಸೂಕ್ತವೆ ?

★ ಲಿಂಗಾಯತ ಸಮಾಜದಲ್ಲಿ ಒಂದು ದೊಡ್ಡ ತಮಾಷೆ ನಡೆಯುತ್ತಿದೆ. 20 ನೆಯ ಶತಮಾನದ ಐವತ್ತನೆಯ ದಶಕದಲ್ಲಿ ಸಂಪ್ರದಾಯ ಮಠಗಳು ಜಂಗಮ ಜಾತಿ ಆಧಾರಿತವಾಗಿ ವೈದಿಕ ಧರ್ಮವನ್ನು ಅನುಕರಣೆ ಮಾಡತೊಡಗಿದರು. ಜಂಗಮರು ಎಲ್ಲರಿಗಿಂತ ಶ್ರೇಷ್ಠರೆಂದು, ಅವರಿಗಿಂತ ಸ್ವಲ್ಪ ಕೆಳಗೆ ಬಣಜಿಗರು-ಪಂಚಮಸಾಲೆಯವರು ನಿಲ್ಲುವರೆಂದು ಉಳಿದ ಲಿಂಗಾಯತರು ಶೂದ್ರರೆಂದು ವಿಲಕ್ಷಣ ಭೇದ ಮಾಡುತ್ತಿದ್ದರು. ಜಂಗಮ-ಪಂಚಮಸಾಲೆ-ಬಣಜಿಗರ ಒಕ್ಕೂಟ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ ಒಕ್ಕೂಟದಂತೆ ಇತ್ತು. ಆಗ ಜಾಗೃತಗೊಂಡ ಸಾದರು, ನೊಳಂಬರು, ಸಜ್ಜನರು, ರೆಡ್ಡಿಗಳು ಮುಂತಾದ ಲಿಂಗಾಯತ ಒಳಪಂಗಡದವರು ಪ್ರತ್ಯೇಕ ಸಂಘಟನೆಗಳನ್ನು ಮಾಡಿಕೊಂಡರು. ಇಂಥ ಪ್ರತ್ಯೇಕ ಸಂಘಟನೆಗಳಿಗೆ ಕಾರಣ ಕರ್ತೃಗಳಾದ ಜಂಗಮರು ಪುನಃ ತಾವೊಂದು ಜಾತಿ ಗುಂಪಿನ ಸಂಘಟನೆ ಮಾಡಿಕೊಂಡರು ; ಈಗ ಪಂಚಮಸಾಲೆ ಮತ್ತು ಬಣಜಿಗರ ಸರದಿ ! ನನಗೊಂದು ನಗೆ ಕಥೆ ನೆನಪಿಗೆ ಬರುತ್ತದೆ....

ಒಂದು ದಿನ ಓರ್ವ ವ್ಯಕ್ತಿಗೆ ತಮಾಷೆ ಮಾಡಬೇಕೆನ್ನಿಸಿತು. ಕೆಲವು ಹುಡುಗರನ್ನು ಕರೆದು, 'ನೋಡ್ರೋ ಆ ಮನೆಯಲ್ಲಿ ಎಲ್ಲರಿಗೂ ರವೆ ಉಂಡೆ ಕೊಡುತ್ತಿದ್ದಾರೆ' ಎಂದ. ಆಗ ಹುಡುಗರ ದಂಡು ಅತ್ತ ಹೊರಟಿತು. ರವೆ ಉಂಡೆ ಕೊಡುತ್ತಿದ್ದಾರೆ ಎಂದು ಭಾವಿಸಿ ದೊಡ್ಡವರೂ ಹೊರಟರು. ಜನರೆಲ್ಲ ತಂಡೋಪತಂಡವಾಗಿ ಹೋಗುವುದು ನೋಡಿ, ಈ ಸುದ್ದಿ ಎಬ್ಬಿಸಿದವನಿಗೂ ಭ್ರಾಂತಿಯುಂಟಾಗಿ ಅವನೂ ರವೆ ಉಂಡೆ ಪಡೆಯಲು ಹೊರಟನಂತೆ ! ಹಾಗೆ ಎಲ್ಲರೂ ಪ್ರತ್ಯೇಕವಾಗುವ ಬದಲು ಮುಸಲೀಮರಂತೆ ಅಖಂಡತೆ, ಏಕತೆಯನ್ನು ಸಾಧಿಸಬಹುದಿತ್ತು.

ಆದರೆ, ಪಂಚಮಸಾಲೆ ಸಂಘಟನೆಯಲ್ಲಿ ಒಂದು ಉತ್ತಮ ಅಂಶವನ್ನು ನಾನು ಗುರುತಿಸಿದ್ದೇನೆ. ಕೆಲವರು ಪಂಚಮ ಪದವನ್ನು ತಪ್ಪುತಪ್ಪಾಗಿ ಅನ್ವಯಿಸಿ ಪಂಚಮಸಾಲೆ ಅರ್ಥಾತ್ ಪಂಚಾಚಾರದವರು ಎಲ್ಲರೂ ಪಂಚಪೀಠಗಳಿಗೆ ನಡೆದುಕೊಳ್ಳಬೇಕು ಎಂಬ ಅತಾರ್ಕಿಕ ವಿಚಾರವನ್ನು ಪ್ರತಿಪಾದಿಸುತ್ತಿದ್ದರು.

ಆದರೆ ಈ ಸಂಘಟನೆಯಿಂದ ಆದ ಲಾಭವೆಂದರೆ ಪಂಚಮಸಾಲೆಯವರು ಪಂಚಪೀಠಾಧೀಶರ ವಶವರ್ತಿಗಳಾಗದೆ ತಮ್ಮ ತನವನ್ನು, ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುತ್ತಾರೆ. ಆಗ ಅವರಲ್ಲಿ ಬಸವ ತತ್ತ್ವದ ಬೀಜವನ್ನು ಬಿತ್ತಲು ನಮಗೆ ಅನುಕೂಲವಾಗುವುದು. ಮೂಢನಂಬಿಕೆಯ ದಾಸರಾದ ಪಂಚಪೀಠಾಧೀಶರ ನಿಷ್ಠಾವಂತ ಅನುಯಾಯಿಗಳಲ್ಲಿ ವಿಚಾರಶಕ್ತಿ ಕುಂಠಿತವಾಗುವುದರಿಂದ ಅವರಲ್ಲಿ ಬಸವ ತತ್ತ್ವದ ಬೀಜ ಬಿತ್ತಲು ನಮಗೆ ಸಾಧ್ಯವಾಗದು. ಪಂಚಪೀಠಾಧೀಶರ ಸಾಂಗತ್ಯದಿಂದ ಆ ಜನರನ್ನು ಈ ಸಂಘದವರು ಬಿಡಿಸಿದರೆ ಮುಂದೆ ಒಳ್ಳಿತನ್ನು ನಿರೀಕ್ಷಿಸಬಹುದು.

- ಸಿದ್ದಣ್ಣ, ಕನ್ನಡ ಪ್ರಭಾ, ಹುಬ್ಬಳ್ಳಿ

? ಒಮ್ಮೆ 'ಡಾ॥ ಎಂ.ಎಂ. ಕಲಬುರ್ಗಿ ಹೇಳಿದರು, ಏಸುಕ್ರಿಸ್ತರನ್ನು ಶಿಲುಬೆಗೇರಿಸಿದ್ದರಿಂದ ಹುತಾತ್ಮರಾದರು. ಅದನ್ನೇ ತಮ್ಮ ಧರ್ಮಲಾಂಛನ ಮಾಡಿಕೊಂಡಿದ್ದರಿಂದ ಕ್ರೈಸ್ತ ಧರ್ಮ ವಿಶ್ವವ್ಯಾಪಿಯಾಗಿ ಹಬ್ಬಿತು. ಹಾಗೆಯೇ ಬಸವಣ್ಣನವರು ಹುತಾತ್ಮರಾದರು. ಅವರ ಸಾವಿಗೆ ಕಾರಣವಾದ ಸಾಧನವನ್ನು ಧರ್ಮಲಾಂಛನವಾಗಿ ಮಾಡಿಕೊಂಡಿದ್ದರೆ ಲಿಂಗಾಯತ ಧರ್ಮವೂ ಕೀರ್ತಿಶಾಲಿಯಾಗುತ್ತಿತ್ತು' ಎಂದು. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?(ಹುಬ್ಬಳ್ಳಿ ಪತ್ರಿಕಾ ಗೋಷ್ಠಿಯಲ್ಲಿ ದಿ. 25-11-2003 ರಂದು ಕೇಳಿದ ಪ್ರಶ್ನೆ)

★ ನಾನು ಅಮೆರಿಕಾ ಪ್ರವಾಸದಲ್ಲಿದ್ದಾಗ ಈ ಬಗ್ಗೆ ಶ್ರೀ ಕಲಬುರ್ಗಿಯವರು ಹೇಳಿರಬಹುದು. ಆ ಹೇಳಿಕೆಯನ್ನು ನಾನು ನೇರವಾಗಿ ಓದಿಲ್ಲ; ನಿಮ್ಮ ಮಾತಿನಲ್ಲಿ ವಿಶ್ವಾಸವಿಟ್ಟು ಉತ್ತರಿಸುತ್ತೇನೆ.

ಒಂದು ಧರ್ಮವು ಪ್ರಚಾರಗೊಳ್ಳುವುದು ಅಲ್ಲಿಯ ಧರ್ಮಗುರುಗಳ ಪರಿಶ್ರಮ, ಪ್ರಯತ್ನ, ನಿಷ್ಠೆ, ಸಮರ್ಪಣ ಮನೋಭಾವದಿಂದ ಮತ್ತು ಅನುಯಾಯಿಗಳ ಆಚರಣೆಯಿಂದ. ಅತ್ಯಂತ ಅಶುದ್ಧವಾದ, ಬಸವ ತತ್ತ್ವಕ್ಕೆ ವಿರುದ್ಧವಾದ ವಿಚಾರ-ಆಚಾರ ಮೈಗೂಡಿಸಿಕೊಂಡಿರುವ ಅನೇಕ ಮಠಾಧೀಶರು ಮತ್ತು ಅನುಯಾಯಿಗಳು ತಮ್ಮವರಲ್ಲೇ ಭೇದ ಮಾಡುವರು, ಲಿಂಗಾಯತೇತರರು ದೀಕ್ಷೆ ಪಡೆಯುತ್ತೇವೆಂದರೆ ಕೆಂಗಣ್ಣು ಬೀರುವರು. ಅಂದಾಗ ಹೇಗೆ ತಾನೆ ಇದು ಪ್ರಚಾರಗೊಳ್ಳುವುದು? ಕ್ರೈಸ್ತ ಧರ್ಮ ಪ್ರಚಾರಗೊಂಡಿರುವುದು ಮೇಲೆ ಕಾಣಿಸಿದ ಸಲಕ್ಷಣಗಳಿಂದಲೇ ವಿನಾ ಲಾಂಛನದಿಂದಲ್ಲ. ಶಿಲುಬೆಗೆ ಕೇವಲ 'ಏಸುವನ್ನು ಕೊಂದ' ಭಾವನಾತ್ಮಕ ಹಿನ್ನೆಲೆ ಇದೆಯೇ ವಿನಾ ತಾತ್ತ್ವಿಕ ಹಿನ್ನೆಲೆಯಿಲ್ಲ. ಧರ್ಮಪಿತ ಬಸವಣ್ಣನವರು ಕೊಟ್ಟ ಇಷ್ಟಲಿಂಗವು ತಾತ್ತ್ವಿಕ, ಯೋಗಿಕ, ಸಾಮಾಜಿಕ ಆಯಾಮವಿರುವ ಶ್ರೇಷ್ಠ ಲಾಂಛನ, ದೇವರ ಕುರುಹು. ಪ್ರಚಾರ ಮಾಡದ್ದರಿಂದ ಈ ಧರ್ಮ ಬೆಳಕಿಗೆ ಬಂದಿಲ್ಲ.

ಧರ್ಮಪಿತ ಬಸವಣ್ಣನವರು ವಧಿಸಲ್ಪಟ್ಟ ಹುತಾತ್ಮರೂ ಆಗಿಲ್ಲ, ಆತ್ಮಹತ್ಯೆ ಮಾಡಿಕೊಂಡ ಹೇಡಿಯೂ ಅಲ್ಲ. ಇಚ್ಛಾಮರಣಿಗಳಾಗಿದ್ದ ಅವರು ಅದ್ಭುತ ಯೋಗಸಿದ್ಧಿಯನ್ನು ಪಡೆದಿದ್ದರು. ಯೋಗ ತಂತ್ರದ ಮೂಲಕ ದೇಹವನ್ನು ವಿಸರ್ಜನೆ ಮಾಡಿ ಲಿಂಗೈಕ್ಯರಾಗಿದ್ದಾರೆ. ಆದ್ದರಿಂದ ಡಾ॥ ಕಲಬುರ್ಗಿಯವರು ತಮ್ಮ ಹಳೆಯ ಅಪಸ್ವರದ ಆಲಾಪ ನಿಲ್ಲಿಸುವುದು ಒಳ್ಳೆಯದು.

- ಮಾತೆ ಮಂಗಳಾದೇವಿ, ಚಿತ್ರದುರ್ಗ

? ಪ್ರಜಾವಾಣಿಯ 1-8-2003 ರ ಸಂಚಿಕೆಯಲ್ಲಿ ಚಿತ್ರದುರ್ಗದಿಂದ ಹೊರಟ ಪ್ರಕಟಣೆಯಲ್ಲಿ

'ಸಮಾನ ಮನಸ್ಕರ ಜತೆ ಸೇರಿ ಬಸವಣ್ಣನವರ ತತ್ತ್ವ ಹಾಗೂ ಶರಣರ ನಡುವೆ ಕೊಂಡಿ ಬೆಸೆಯಲು ಶರಣ ಧರ್ಮವನ್ನು ಹುಟ್ಟುಹಾಕಲು ತೀರ್ಮಾನಿಸಿರುವುದಾಗಿ ಮುರುಘಾಮಠದ ಶ್ರೀ ಶಿವಮೂರ್ತಿ ಶರಣರು ಹೇಳಿದ್ದಾರೆ'. ಈ ಬಗ್ಗೆ ನಿಮ್ಮ ಅಭಿಪ್ರಾಯ ?

★ ಕೆಲವರು ಮೊದಲು ಚಿಂತನೆ ಮಾಡಿ ನಂತರ ಮಾತಾಡುತ್ತಾರೆ. ಮತ್ತೆ ಕೆಲವರು ಮಾತನಾಡಿ ನಂತರ ಚಿಂತನೆ ಮಾಡುತ್ತಾರೆ. ಹಾಗೆ ಅವಸರದಲ್ಲಿ ಏನೋ ಒಂದು ಘೋಷಣೆ ಮಾಡಿ, ನಂತರ ಭಕ್ತರ ಒತ್ತಾಯಕ್ಕೆ ಶ್ರೀಶಿವಮೂರ್ತಿ ಶರಣರು ಮಣಿದು 'ಶರಣ ಧರ್ಮ' ಬಿಟ್ಟು 'ಬಸವ ಧರ್ಮ' ಹಿಡಿದುದು ಆಗಲೇ ಹಳೆಯ ಕಥೆ. ಆದರೆ ಲಿಂಗಾಯತ ಧರ್ಮ, ಶರಣ ಧರ್ಮ, ಬಸವ ಧರ್ಮ ಎಂಬ ಹೆಸರು ಹೊಂದಿದ 'ಒಂದು ಧರ್ಮ' ಆಗಲೇ 12ನೆಯ ಶತಮಾನದಲ್ಲಿ ಹುಟ್ಟಿ ಬೆಳೆದು 850 ವರ್ಷ ವಯಸ್ಸಿಗೆ ಬಂದಿದೆ. ಅದನ್ನು ಇನ್ನು ಹುಟ್ಟು ಹಾಕಲಿಕ್ಕೆ ಎಂತು ಸಾಧ್ಯ ? ಬೆಳೆಸುವ ಬಲಪಡಿಸುವ ಕೆಲಸ ಮಾಡಿದರೆ ಸಾಕು. ಅವರಿಗೆ ಪದಗಳನ್ನು ಹೇಗೆ ಬಳಸಬೇಕೋ ತಿಳಿಯದೆ ಏನೇನೋ ಬಳಸುತ್ತಾರೆ ಎಂದು ಅವರ ಬಗ್ಗೆ ನಮಗೆ ಅನುಕಂಪ ! ★★★

ಎನ್ನೊಡಯ ಬಸವೇಶ

ಬಸವೇಶನೆ ಬಸವೇಶನೆ
ಘನಕಾರ್ಯ ಘನಮಹಿಮ ಬಸವೇಶನೆ ॥ಪ॥
ತನು ನೀನೆ ಮನ ನೀನೆ
ಮನದೊಳಗೆ ಇಹ ಘನ ನೀನೆ
ಮನದೊಳಿಹ ಮಹ ನೀನೆ
ಎನ್ನೊಡಯನೆ ನೀನು ಬಸವೇಶನೆ ॥1॥
ತನುವಿನ ಅಣು ನೀನೆ
ಪತಿತರ ಮಾತೃ ನೀನೆ
ನೊಂದವರ ಬದುಕಿನ ಸಂಜೀವಿನಿ
ಎನ್ನೊಡಯನೆ ನೀನು ಬಸವೇಶನೆ ॥2॥
ದೀನದಲಿತರ ಬಂಧು ನೀನೆ
ಕರುಣೆಯ ಸಿಂಧುವೇ
ಹೆಣ್ಮನದ ಕಂಬನಿಯ ತೊಡೆದ ಗುರುವೇ
ಎನ್ನೊಡಯನೆ ನೀನು ಬಸವೇಶನೆ ॥3॥
ಚಿತ್ತದ ಸ್ಫುರಣ ನೀನೆ
ಬತ್ತದ ಸೆಲೆಯು ನೀನೆ
ಕರುಣೆಯ ಸಾಗರದ ಮಹಾಪೂರವೇ
ಎನ್ನೊಡಯನೆ ನೀನು ಬಸವೇಶನೆ ॥4॥
ಆತ್ಮದ ನೇತ್ರ ನೀನೆ
ಪ್ರಾಣದ ಸೂತ್ರ ನೀನೆ
ಹೃದಯದ ಬಡಿತವು ನೀನೆ ತಂದೆ
ಎನ್ನೊಡಯನೆ ನೀನು ಬಸವೇಶನೆ ॥5॥
ಭಾವದ ಬಯಲು ನೀನೆ
ಅರಿವಿನ ನಿಲುವು ನೀನೆ
ಆಗಸದ ಬಿತ್ತರವೇ ನಿನ್ನ ಹೃದಯ
ಎನ್ನೊಡಯನೆ ನೀನು ಬಸವೇಶನೆ ॥6॥
ಕಂಗಳ ಕಾಂತಿ ನೀನೆ
ಕರ್ಣದ ಸ್ತೋತ್ರ ನೀನೆ
ದಮನಿಯ ಕಣ ಕಣವು ನೀನೆ ತಂದೆ
ಎನ್ನೊಡಯನೆ ನೀನು ಬಸವೇಶನೆ ॥7॥
ಜೀವದ ಜೀವ ನೀನೆ
ಪ್ರಾಣದ ಪ್ರಾಣ ನೀನೆ
ಜಗದ ಜೀವನಾಡಿಯೂ ನೀನೆ
ಎನ್ನೊಡಯನೆ ಬಸವೇಶನೆ ನಿನಗಾಗಿ
ಮುಡಿಪು ಈ ಬದುಕೆಲ್ಲವು ॥8॥

ರಚನೆ : ಕುಮಾರಿ. ಬಸವಜ್ಯೋತಿ
ಭದ್ರಾವತಿ, ರಾ.ಬ.ದಳ

ಸಂಪಾದಕೀಯ - 1

ಜೇನುಹುಳುಗಳ ಕಡಿತ ಮತ್ತು ನಿದ್ದೆ

- ಮಾತಾಜಿ

ಸುಮಾರು 5 ತಿಂಗಳ ಕಾಲ ಭಾರತದಿಂದ ಹೊರಗೆ ಇದ್ದು, ಇಲ್ಲಿಯ ವಿವರಗಳು ಏನೂ ತಿಳಿಯದೆ ಒಂದು ಬಗೆಯ ಗಾಢವಾದ ಸುಖನಿದ್ರೆಯಲ್ಲಿದ್ದಂತೆ ಆಗಿತ್ತು. ಇಲ್ಲಿಯ ವಿವರಗಳು, ಅಂತರರಾಷ್ಟ್ರೀಯ ಮಹತ್ವದವು ಬಿಟ್ಟರೆ, ಉಳಿದಂಥವು ಅಮೆರಿಕಾದ ದಿನಪತ್ರಿಕೆಗಳಲ್ಲಿ ಬರುತ್ತಿರಲಿಲ್ಲ. ಆಸ್ಟಿನ್‌ದಲ್ಲಿದ್ದಾಗ ದಿನಪತ್ರಿಕೆಗಳನ್ನು ಯೋಗೀಶ್ವರಿಯವರು ತರಿಸುತ್ತಿರಲಿಲ್ಲವಾದ ಕಾರಣ ಪತ್ರಿಕೆ ಓದುವ ಅವಕಾಶ ಇರುತ್ತಿರಲಿಲ್ಲ. ದಿನ ಪತ್ರಿಕೆ ಓದಿ ಕ್ರೌರ್ಯ, ಹಿಂಸೆ, ಯುದ್ಧ ಅತ್ಯಾಚಾರ ಮುಂತಾದ ಕಸವನ್ನು ತಲೆಗೆ ಏಕೆ ಹಾಕಿಕೊಳ್ಳಬೇಕು ಎಂಬ ವಿಚಾರಧಾರೆ ಅಧ್ಯಾತ್ಮ ಜೀವಿಯಾದ ಯೋಗೀಶ್ವರಿ ಅವರದು. ಕೆಲವೊಂದು ಕಂಪೆನಿಗಳು, ಅಂಗಡಿಯವರು ವಿಶೇಷ ಪುರವಣಿಗಳು ಇದ್ದಾಗ ಉಚಿತವಾಗಿ ಎಸೆದು ಹೋಗಿರುತ್ತಿದ್ದ ನೂರಾರು ಪುಟಗಳ ದಿನಪತ್ರಿಕೆಗಳನ್ನು ನಾನು ಎತ್ತಿರಿಸಿಕೊಂಡು ಓದುತ್ತಿದ್ದೆ.

ಅದೇನೋ ಭಾರತದಲ್ಲಿದ್ದಾಗ ಸ್ನಾನ-ಪೂಜೆ ಆದ ನಂತರ ದಿನ ಪತ್ರಿಕೆ ಓದದಿದ್ದರೆ ಉಪಾಹಾರ, ಊಟ ರುಚಿಸುವುದಿಲ್ಲ. ಅಮೆರಿಕಾದಿಂದ ಬಂದು ದಿನಪತ್ರಿಕೆಯನ್ನು ಓದಲು ತೊಡಗುತ್ತಿದ್ದಂತೆಯೇ ನಿದ್ದೆಯಿಂದ ಎದ್ದು ಕಣ್ಣು ಬಿಡುತ್ತಿದ್ದಂತೆಯೇ ಹಲವಾರು ಜೇನುಹುಳುಗಳು ಸುತ್ತಮುತ್ತ ಮುತ್ತಿಕೊಂಡು ಕಡಿಯುವಂತಹ ಅನುಭವ.

1. ಗಿರೀಶ್ ಮಟ್ಟೆಣ್ಣನವರು

ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಯಲ್ಲಿದ್ದ ಉತ್ಸಾಹಿ ತರುಣ, ಆದರ್ಶವಾದಿ ಗಿರೀಶ್ ಮಟ್ಟೆಣ್ಣನವರು ಭ್ರಷ್ಟಾಚಾರಿಗಳಿಗೆ ಎಚ್ಚರಿಕೆ ನೀಡಲು ಭ್ರಷ್ಟಾಚಾರ ಭವನ ಎಂದು ಸಾಗರದ ಗಾಂಧಿವಾದಿ ಹೆಚ್. ಗಣಪತಿಯಪ್ಪನವರು ಕರೆದಿರುವ (ಪ್ರಜಾವಾಣಿ: ವಾಚಕರ ವಾಣಿ. ದಿ. 28-11-03) ಶಾಸಕರ ಭವನದಲ್ಲಿ ಸಿಡಿಯದ ಬಾಂಬ್ ಇಟ್ಟು ಫೋನ್ ಮಾಡಿ, ಇದೀಗ ಪೋಲೀಸ್ ಬಂಧನದಲ್ಲಿ ಸಿಕ್ಕಿಬಿದ್ದಿರುವ ಸುದ್ದಿ ಮೊದಲನೆಯ ಜೇನುಹುಳದ ಕಡಿತ.

ಪಾಪ! ಅನನುಭವಿ ಅತ್ಯುತ್ಸಾಹಿ ತರುಣ. ನಿಜವಾಗಿಯೂ ಬಾಂಬ್ ಸಿಡಿಸಿದ್ದರೆ ದಾವೂದ್ ಇಬ್ರಾಹಿಂ ಮತ್ತು ಅಂಥ ಭಯೋತ್ಪಾದಕರಂತೆ ಸುಖವಾಗಿ ಇರುತ್ತಿದ್ದರೇನೊ ! ಪಾಪ-ಪುಣ್ಯಗಳ ಮಧ್ಯದ ತೊಳಲಾಟದಲ್ಲಿ ಸಿಕ್ಕಿ ಬಾಂಬ್ ಸಿಡಿಸದೆ ಇದ್ದುದರಿಂದ ಇಂದು ಅಪರಾಧಿ ಎಂದು ಸರ್ಕಾರವು ಆತನ ಸುತ್ತ ಜಾಲವೊಂದನ್ನು ಹೆಣೆದು ಕಾನೂನಿನ ಕುಣಿಕೆಯನ್ನು ಬಿಗಿ ಮಾಡುತ್ತಿದೆ. ಇದರ ಬೆನ್ನ ಹಿಂದೆಯೇ ನಕ್ಸಲೀಯರೆಂದು ಸಂಶಯಿಸಿ ಇಬ್ಬರು ಮಹಿಳೆಯರನ್ನು ಕೊಂದಿರುವ ಮತ್ತು ಯಶೋಧಾ ಎಂಬ ಓರ್ವ ಮಹಿಳೆಯನ್ನು ಬಂಧಿಸಿರುವ ಸುದ್ದಿ ಜೇನುಹುಳುಗಳ ಎರಡನೆಯ ಕಡಿತ. ಆ ತರುಣಿಯರ ಗತ ಇತಿಹಾಸ ಆದರ್ಶಪೂರ್ಣವಾಗಿದೆ. ಅವರು ದೀನದಲಿತರ, ಬಡವರ ಪರ ಹೋರಾಟಗಾರರು. ಅನೇಕ ಸಾಮಾಜಿಕ ಜಾಗೃತಿಯ ಚಳುವಳಿಗಳನ್ನು ಹಮ್ಮಿಕೊಂಡವರು. ಸಾತ್ವಿಕ ಧ್ಯೇಯವಾದಿಗಳು ಹಿಂಸಾತ್ಮಕ ಚಟುವಟಿಕೆಗೆ ಇಳಿಯುವುದು ಏತಕ್ಕೆ ? ಗಿರೀಶ್ ಮಟ್ಟೆಣ್ಣನವರನ್ನು ಆಗಲೇ ನಕ್ಸಲೀಯರ ಜೊತೆ ಸಂಪರ್ಕ ಇಟ್ಟುಕೊಂಡವರು ಎಂದು ಪೋಲೀಸ್ ಇಲಾಖೆ ಕೃತಕ ದಾಖಲೆಗಳನ್ನು

ಸಿದ್ಧಪಡಿಸುತ್ತಿರಬಹುದು. ಈ ಎರಡೂ ಘಟನೆಗಳನ್ನು ನಾನು ಒಟ್ಟೊಟ್ಟಿಗೆ ವಿಶ್ಲೇಷಿಸುತ್ತಿದ್ದರೂ ಇದರ ಹಿನ್ನೆಲೆ ಗಿರೀಶ್ ಅವರು, ನಕ್ಸಲೀಯರು ಎಂಬ ಮನೋಭಾವ ಅಥವಾ ಸಂಶಯದಿಂದಲ್ಲ. ಎರಡೂ ಪ್ರಸಂಗಗಳಲ್ಲಿ ಕಾಣಿಸಿಕೊಳ್ಳುವವರು ಬಡವರ ಬಗ್ಗೆ, ಶ್ರೀಸಾಮಾನ್ಯರ ಬಗ್ಗೆ ಅನುಕಂಪ ಉಳ್ಳವರು. ಇಂಥವರು ಇಂದಿನ ಕಾನೂನಿನ ದೃಷ್ಟಿಯಲ್ಲಿ ಅಪರಾಧ ಎನ್ನಿಸುವ (ಸಿಡಿಯದ) ಬಾಂಬ್ ಇಡುವ ಮತ್ತು ನಕ್ಸಲೀಯ ಕೃತ್ಯಗಳನ್ನು ಮಾಡಿದುದೇಕೆ ?

ದೇಶದ ಬಗ್ಗೆ, ಜನರ ಬಗ್ಗೆ ವೈಚಾರಿಕವಾಗಿ ಚಿಂತನೆ ಮಾಡುವ ಪ್ರತಿಯೊಬ್ಬ ಆದರ್ಶವಾದಿ ಭಾರತೀಯನೂ ಇಂದು ಮಾನಸಿಕವಾಗಿ ಗಿರೀಶ್ ಮಟ್ಟೆಣ್ಣನವರು ಮತ್ತು ನಕ್ಸಲೀಯರಂತೆಯೇ ಆಲೋಚಿಸುವ ಮನಃಸ್ಥಿತಿ ಪಡೆಯುತ್ತಾನೆ. ರೈತರು, ಜನರು ಪಡುತ್ತಿರುವ ಕಷ್ಟ, ಬಡವರ ಸಂಕಷ್ಟ ಉನ್ನತ ಮಟ್ಟದ ಸರ್ಕಾರಿ ಅಧಿಕಾರಿಗಳ ಅಟ್ಟಹಾಸ, ರಾಜಕಾರಣಿಗಳ ಆಟಾಟೋಪ, ಬೃಹದಾಕಾರ ತಳೆಯುತ್ತಿರುವ ಭ್ರಷ್ಟಾಚಾರ ಇವನ್ನೆಲ್ಲ ನೋಡಿದಾಗ ಎಂಥಾ ಸಾತ್ವಿಕರೂ, ವಿಚಾರಶೀಲರಾಗಿದ್ದರೆ ತಲೆಕೆಟ್ಟಂತೆ ವರ್ತಿಸುತ್ತಾರೆ. ಬಹುಜನರ ಅಂತರಂಗ ಹೀಗೇ ಆಲೋಚಿಸುತ್ತಿದ್ದರೂ 'ಹೊಟ್ಟೆಯಲ್ಲಿರುವ ಸಿಟ್ಟು ರಟ್ಟೆಯಲ್ಲಿಲ್ಲ' ಎಂಬಂತೆ, ಮನಸ್ಸನ್ನು ಹಿಡಿತಕ್ಕೆ ತಂದುಕೊಳ್ಳುತ್ತಾರೆ. ಸುಭಿಕ್ಷದ ಕಾಲದಲ್ಲೂ ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳಿಗೆ ಸಿಂಹಪಾಲು, ದುರ್ಭಿಕ್ಷದ ಕಾಲದಲ್ಲೂ ವಿವಿಧ ಯೋಜನೆಗಳನ್ನು ಜಾರಿಗೆ ತರುವಾಗ ಮಧ್ಯಂತರದಲ್ಲಿ ಸಿಂಹಪಾಲು. ಯಾವ ಯೋಜನೆಗಳೂ ಜನರ ಪಾಲಿಗೆ ದಕ್ಕವು. ಇದನ್ನೆಲ್ಲ ನೋಡಿ ನೋಡಿ ಆದರ್ಶವಾದಿ ತರುಣ ತರುಣಿಯರು ತಪ್ತರಾಗಿ, ಕಾದ ಕಲ್ಲಿದ್ದಲ ಕೆಂಡದಂತೆ ಉದ್ವಿಗ್ನರಾಗುತ್ತಾರೆ, ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಲಾರದೆ ಚಟಪಟಿಸುತ್ತಾರೆ. ಅವರ ಅಂತರ್ಮನ ಕೊಳೆತು ನಾರುತ್ತಿರುವ ಇಂದಿನ ವ್ಯವಸ್ಥೆಯನ್ನು ಬದಲಾಯಿಸಲು ತುಡಿಯುತ್ತದೆ. ಮಾತನಾಡುವಾಗ ಮದ್ಯಪಾನ ಮಾಡಿದಾಗ ಮನುಷ್ಯ ನಿಶೆಗೆ ಹೋಗಿ ಏನೇನೋ ಮಾಡುವಂತೆ, ಆದರ್ಶದ ಹೊಯ್ದಾಟದಲ್ಲಿ ಸಿಲುಕಿ ಗಿರೀಶ್ ಮಟ್ಟಣ್ಣನವರು ಬಾಂಬ್ ಸಿಡಿಸಲು ಬಯಸಿರಲೂ ಸಾಕು. ಆದರೆ ಮೊದಲಿನಿಂದಲೂ ಒಂದು ವಿಶಿಷ್ಟ ಆದರ್ಶವನ್ನು, ದೇಶ ಪ್ರೇಮವನ್ನು, ಯೋಗಧ್ಯಾನ - ಅಧ್ಯಯನ ಮುಂತಾದ ಆದರ್ಶ ಕ್ರಿಯೆಗಳನ್ನು ಬೆಳೆಸಿಕೊಂಡು ಬಂದ ಗಿರೀಶ್ ಅವರ ಅಂತರಾತ್ಮ ಬಾಂಬ್ ಸಿಡಿಸಲು ಒಪ್ಪಿಗೆ ನೀಡಿಲ್ಲ. ಇಂಥ ತಾಕಲಾಟವೇ ಬಾಂಬ್ ಸಿಡಿಯದೆ ವಿಲಕ್ಷಣ ಪರಿಸ್ಥಿತಿ ನಿರ್ಮಾಣವಾಗಲು ಕಾರಣವಾಗಿದೆ.

ಕೈಗೊಳ್ಳಬೇಕಾದ ಕ್ರಮ

ಕಾನೂನಿನ ದೃಷ್ಟಿಯಲ್ಲಿ ಗಿರೀಶ್ ಅಪರಾಧ ಮಾಡಿದ್ದಾರೆ. ಆದರೆ ಒಳಗೇ ನೋವು ಅನುಭವಿಸುತ್ತಿದ್ದ ಲಕ್ಷಾಂತರ ಆದರ್ಶವಾದಿಗಳ ನೋವಿಗೆ ಧ್ವನಿಕೊಟ್ಟಂತೆ ಭ್ರಷ್ಟಾಚಾರ ಭವನದಲ್ಲಿ ಹುಸಿಬಾಂಬ್ ಇಟ್ಟು ಅಂಥ ನಿಸ್ಸಹಾಯಕ ಮನಸ್ಸುಗಳಿಗೆ ಹೀರೋ ಆಗಿ ತೋರುತ್ತಿದ್ದಾರೆ. ಹಾಗಾಗಿ ಅವರ ಪರವಾಗಿ ಸಾಂತ್ವನದ ಮಹಾಪೂರ ಹರಿದು ಬರುತ್ತಿದೆ. ಪೋಲೀಸ್ ಪಡೆಯ ಮೂಲಕ ಮಾನವರ ಮೇಲೆ, ಪ್ರಾಣಿಗಳ ಮೇಲೆ ಕ್ರೌರ್ಯ ಪ್ರದರ್ಶಿಸುವುದರಲ್ಲಿ ಪರಿಣಿತರಾದ ಗೃಹಮಂತ್ರಿ ಶ್ರೀಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಇಲಾಖೆಯ ಮೂಲಕ ಗಿರೀಶ್ ಬಗ್ಗೆ ಅಪರಾಧಗಳ ಉದ್ದಪಟ್ಟಿಯನ್ನು ಸಿದ್ಧಪಡಿಸುತ್ತಿದ್ದಾರೆ. 'ಕುರುಡರ ರಾಜ್ಯದಲ್ಲಿ ಕಣ್ಣಿದ್ದವನೇ ಅಪರಾಧಿ' ಎಂಬ ಮಾತು

ಸಂಪೂರ್ಣವಾಗಿ ಅನ್ವಯವಾಗುತ್ತಿರುವ ನಮ್ಮ ದೇಶದಲ್ಲಿ ಗಿರೀಶ್ ಹೇಗೆ ಬದುಕಬೇಕೆಂಬುದನ್ನು ಅರಿತುಕೊಳ್ಳಬೇಕಿತ್ತು. ಮೂಗಿಗೆ ಅಸಹನೀಯವಾಗಿ ತೋರುವ ಗಟಾರದ ರಾಡಿಯಲ್ಲಿ ಹೇಗೆ ಕೆಲವು ಹುಳುಗಳು, ಕ್ರಿಮಿಗಳು ಖುಷಿಯಿಂದ ಲೀಲಾಜಾಲವಾಗಿ ಬದುಕುತ್ತವೋ ಹಾಗೆ ಇಂದಿನ ವ್ಯವಸ್ಥೆಯಲ್ಲೂ ಸಮಾಧಾನ-ಸಂತೋಷಗಳಿಂದ ಬದುಕುವ ಕಲೆ ರೂಢಿಸಿಕೊಳ್ಳುವುದು ಅಗತ್ಯವಿದೆ.

ನಿನ್ನೆ (1-12-2003) ಬಿಜಾಪುರದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಪ್ರವಚನ ಬೆಂಗಳೂರಲ್ಲಿ ಪ್ರಾರಂಭವಾಯಿತು. ಆ ಪ್ರವಚನದ ಸಾರಾಂಶವನ್ನು 2-12-2003ರ ಪ್ರಜಾವಾಣಿ ಪತ್ರಿಕೆಯ ಪುಟ 5 ರಲ್ಲಿ ಅರಿವಿನ ಅಂತರಾಳ ಎಂಬ ಶೀರ್ಷಿಕೆಯ ಅಡಿಯಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಶ್ರೀಗಳು ನುಡಿದಿದ್ದಾರೆ, 'ನಮ್ಮ ಮನಸ್ಸು ಸುಲಭವಾಗಿ ಮಲಗುವುದಿಲ್ಲ. ತಲೆಯಲ್ಲಿ ಮೈಯಲ್ಲಿ ನೂರಾರು ಭಾವನೆಗಳು ತುಂಬಿಕೊಂಡಿರುತ್ತವೆ. ಹೀಗಾಗಿ ಮನುಷ್ಯ ಮಲಗುವುದಿಲ್ಲ. ನನ್ನ ಮಾತುಗಳೆಲ್ಲ ನಿಮ್ಮನ್ನು ಮಲಗಿಸೋ ಮಾತುಗಳೇ ವಿನಾ ಎಬ್ಬಿಸುವ ಮಾತುಗಳಲ್ಲ'.

ನಮ್ಮ ದೇಶದಲ್ಲಿ ಸುಖವಾಗಿ ಬದುಕಬೇಕೆಂದರೆ ಏನನ್ನೂ ಆಲೋಚಿಸದೆ ಮಲಗಲು ಕಲಿಯಬೇಕು. ಸ್ಥಿತ ಪ್ರಜ್ಞತ್ವ ಎಂಬ ಹೆಸರಿನಲ್ಲಿ ಚಿಂತನೆ ಮಾಡದಿರುವ ಜಡತ್ವ ರೂಢಿಸಿಕೊಳ್ಳಬೇಕು. ಸುತ್ತಲೂ ಕಸಕೊಳಕು ಇದ್ದರೇನಂತೆ ನಾನು ಕುಳಿತುಕೊಳ್ಳಲು ಬೇಕಾಗುವಷ್ಟು ಸ್ಥಳವನ್ನು ಸ್ವಚ್ಛ ಮಾಡಿಕೊಂಡರಾಯಿತು ಎಂಬ ಮನೋಭಾವ ಬೆಳೆಸಿಕೊಳ್ಳಬೇಕು. ಇನ್ನೂ ಸುಖವಾಗಿ ಬದುಕಬೇಕಾದರೆ ನಾನು ಕುಳಿತುಕೊಳ್ಳುವಷ್ಟು ಸ್ಥಳವನ್ನು ಸಹ ಸ್ವಚ್ಛ ಮಾಡಿಕೊಳ್ಳಬೇಕೆಂದು ಬಯಸದೆ, ಪ್ರಯತ್ನಿಸದೆ ಕೊಳಕಿನ ಮೇಲೇ ಕುಳಿತು ಧ್ಯಾನದ ಆನಂದವನ್ನು ಪಡೆಯಬೇಕು. ಹೀಗಾಗಿ ವಿಚಾರಶೀಲತೆ ಬೆಳೆಸಿಕೊಂಡ ಗಿರೀಶ್ ನಮ್ಮ ಮಹಾನ್ ಭಾರತದಲ್ಲಿ ತಪ್ಪಿತಸ್ಥರಲ್ಲವೇ ? ಆದ್ದರಿಂದ 100 ಜನರಲ್ಲಿ 99 ಮಂದಿ "ಇವನು ಸತ್ತಿದ್ದಾನೆ" ಎಂದು ಠರಾವು ಪಾಸು ಮಾಡಿದರೆ ಜೀವಂತವಿದ್ದವನು ಸತ್ತಂತೆ ತಾನೆ ?! ಇದು ನಮ್ಮ ದೇಶದ ಪ್ರಜಾಪ್ರಭುತ್ವದ ವೈಖರಿ.

ಅಮೆರಿಕಾ ಅಧ್ಯಕ್ಷ ಬುಷ್ ಅವರ ಪ್ರವಾಸ ಕಾಲದಲ್ಲಿ ಅಭೇದ್ಯವಾದ ಭದ್ರತಾ ವ್ಯವಸ್ಥೆಯನ್ನು ಭೇದಿಸಿ ಓರ್ವ ಸಾಮಾನ್ಯ ಅಮೆರಿಕನ್ ನಾಗರೀಕಳು ಅದರ ಕಾರಿನ ಮೇಲೆ ಎರಗಿದಳು. ಆಗ ಅಲ್ಲಿಯ ಪೋಲೀಸರು ಆಕೆಯನ್ನು ಬಂಧಿಸಿದರು. ಆಕೆ ಯಾವ ಭಯೋತ್ಪಾದಕಳಲ್ಲ ಎಂದು ಅರಿತು, ಆಂತರಂಗಿಕ ಸಂಕಟದಿಂದ ನಿಸ್ಸಹಾಯಕಳಾಗಿ ಹೀಗೆ ಮಾಡಿದ್ದಾಳೆ ಎಂದು ಆಕೆಯನ್ನು ಹುಚ್ಚಾಸ್ಪತ್ರೆಗೆ ಸೇರಿಸಿ, ಚಿಕಿತ್ಸೆ ಕೊಡಲು ಆರಂಭಿಸಿದರು. ಗಿರೀಶ್ ಮಟ್ಟೆಣ್ಣನವರ ಪರಿಸ್ಥಿತಿ ಇದಕ್ಕಿಂತಲೂ ಬೇರೆ ಏನಲ್ಲ. ಒಂದು ವೇಳೆ ಮುಂದಿನ ಹಂತವಾದ ನಕ್ಸಲೀಯರ ವಿಚಾರಧಾರೆಗೆ ಗಿರೀಶ್ ಪಕ್ಕಾಗದಿದ್ದರೆ ಅವರು ಬಾಂಬನ್ನು ಸಿಡಿಸಿ ಭೂಗತರಾಗುತ್ತಿದ್ದರು. ನಿಸ್ಸಹಾಯಕ ಆದರ್ಶವಾದಿಯಾಗಿ ಇಂಥ ವಿಲಕ್ಷಣ ವರ್ತನೆ ಮಾಡಿರುವ ಗಿರೀಶರನ್ನು ಆದರ್ಶವಾದಿಯಾದರೂ ಮಾನಸಿಕವಾಗಿ ಅಸ್ತವ್ಯಸ್ತವಾಗಿರುವ ವ್ಯಕ್ತಿ ಎಂದು ಪರಿಗಣಿಸಿ ಅವರಿಗೆ ಚಿಕಿತ್ಸೆ ಕೊಡಿಸಬೇಕು, ಕ್ಷಮೆ ನೀಡಬೇಕು. ಇಲ್ಲದ ಆರೋಪಗಳ ಸರಮಾಲೆಯನ್ನು ಸೃಷ್ಟಿಮಾಡಿ, ಗಿರೀಶರ ಕೊರಳಿಗೆ ಹಾಕಿ, ಕುಣಿಕೆ ಬಿಗಿಯಬಾರದು. Law is not for Law sake, Law is for welfare's sake ಎಂಬುದನ್ನು ಅರಿಯಬೇಕು. 'ಕಾನೂನು ಒಂದು ಕತ್ತೆಯಂತೆ, ಹೇಗೆ ಬೇಕಾದರೂ ಒದೆಯಬಹುದು' ಎಂಬ ವ್ಯಂಗ್ಯ ನುಡಿಯನ್ನು ಕ್ರಿಯಾರೂಪಕ್ಕೆ

ಇಳಿಸಬಾರದು?

2. ವೀರಪ್ಪನ್ ಮಾಹಿತಿ ಇದ್ದರೆ ಪೋಲೀಸರಿಗೆ ತಿಳಿಸಿ

ವಿಜಯ ಕರ್ನಾಟಕ, ಮೈಸೂರು ಆವೃತ್ತಿ ದಿ. 28-11-2003 ಕೊಳ್ಳೇಗಾಲ; ನ : 27. "ದಂತಚೋರ ವೀರಪ್ಪನ್ ಚಲನವಲನದ ಬಗ್ಗೆ ಜನತೆಗೆ ತಿಳಿದುಬಂದರೆ ಪೋಲೀಸರಿಗೆ ಸಕಾಲದಲ್ಲಿ ಮಾಹಿತಿ ನೀಡಬೇಕು" ಎಂದು ಡಿವೈ ಎಸ್ ಪಿ ಡಿಸೋಜಾ ಮನವಿ ಮಾಡಿದರು.

ತಾಲ್ಲೋಕಿನ ಜಾಗೇರಿ ಗ್ರಾಮದಲ್ಲಿ ಪೋಲೀಸ್ ಇಲಾಖೆ ವತಿಯಿಂದ ಏರ್ಪಡಿಸಿದ್ದ ಜನ ಸಂಪರ್ಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕಾಡಂಚಿನ ಗ್ರಾಮಗಳ ಜನತೆಗೆ ಸರಕಾರದಿಂದ ದೊರೆಯುವ ಸೌಲಭ್ಯಗಳನ್ನು ದೊರಕಿಸುವಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯುವುದಾಗಿ ತಿಳಿಸಿದರು. ಸರ್ಕಾರಕ್ಕಿಂತ ಮಿಗಿಲಾಗಿ ವೀರಪ್ಪನ್ ಬಡಬಗ್ಗರ ಮದುವೆ ಮುಂತಾದಕ್ಕೆ ಅನುಕಂಪದಿಂದ ನೆರವು ನೀಡುವಾಗ ಜನ ಸಾಮಾನ್ಯರೇಕೆ ವೀರಪ್ಪನ್ ಬಗ್ಗೆ ಮಾಹಿತಿ ನೀಡಲು ಹೋಗುವರು ? ಮಾಹಿತಿ ನೀಡಿ ವೀರಪ್ಪನ್ ಕೋಪಕ್ಕೆ ಪೋಲೀಸರ ವಿಶೇಷ ದೃಷ್ಟಿಗೆ ಸಿಕ್ಕಿಬೀಳಲು ಇಷ್ಟಪಡುವರು ? ಡೆಪ್ಯೆ ಎಸ್ ಪಿಯವರು ಬಡಪಾಯಿ ಗ್ರಾಮಸ್ಥರನ್ನು ಕೇಳುವ ಬದಲು "ಹಲೋ ವೀರಪ್ಪನ್ ಹೇಗಿದ್ದೀರಾ ?" ಎಂದು ಮೊಬೈಲ್ ಮೂಲಕ ಮಾತನಾಡುವ ಮಂತ್ರಿವರ್ಯರನ್ನು ಕೇಳಿದರೆ ಸಾಕಲ್ಲವೆ ?

ತರಳಬಾಳು ಮಠದ ಶ್ರೀಮಲ್ಲಿಕಾರ್ಜುನ ಸ್ವಾಮಿಗಳು 'ವೀರಪ್ಪನ್ ಅನ್ನು ಪರಿವರ್ತಿಸುವ ಸಾತ್ವಿಕ ಶಕ್ತಿ ನಮ್ಮಲ್ಲಿ ಇಲ್ಲ' ಎಂಬ ಹೇಳಿಕೆ ನೀಡಿದ್ದನ್ನು (ದಾವಣಗೆರೆಗೆ ಹೋದಾಗ ಪತ್ರಿಕೆಯೊಂದರಲ್ಲಿ ಓದಿದೆ) ವೀರಪ್ಪನ್‌ನ ಮನಸ್ಸನ್ನು ಪರಿವರ್ತಿಸಿ, ನಾಗರಿಕ ಜೀವನ ಮಾರ್ಗಕ್ಕೆ ತರುವ ಹಂಬಲ ನಮಗೆ, ನಮ್ಮ ರಾಷ್ಟ್ರೀಯ ಬಸವ ದಳಕ್ಕೆ ಇತ್ತು. ಮಾತ್ರವಲ್ಲ ಆತ ಸಹ ಕಾಡಿನ ಬದುಕಿನಿಂದ ಬೇಸತ್ತು ನಾಗರಿಕ ಜೀವನವನ್ನು ಬಯಸಿ ಕ್ಷಮೆಯನ್ನು ಆಶಿಸುತ್ತಿದ್ದಾನೆ, ಈಗ ಪರಿವರ್ತನೆಗೆ ಸಕಾಲ ಎಂದು ಕೊಳ್ಳೇಗಾಲದ ಸುತ್ತಲಿನ ಜನರು ಹೇಳುತ್ತಿದ್ದರು. ಕಾಡಂಚಿನ ಗ್ರಾಮಗಳ ಜನರಂತೂ ದಟ್ಟವಾಗಿ ಈ ಮಾತನ್ನಾಡುತ್ತಿದ್ದರು. ಆದರೆ ಒಂದು ಬೃಹತ್ ರ್‍ಯಾಲಿಯ ನಂತರ ಕೆಲವು ಪತ್ರಿಕೆಗಳವರು ಭೇಟಿಯಾಗಿ, 'ತಾವಿನ್ನು ಪ್ರಯತ್ನಿಸಬೇಡಿರಿ. ವೀರಪ್ಪನ್ ಹೊರಗೆ ಬರುವುದು ಅನೇಕ ಮುಖಂಡರಿಗೆ ಇಷ್ಟವಿಲ್ಲ. ಆತ ಹೊರಗೆ ಬಂದರೆ ಇವರ ಹುಳುಕು ಹೊರಬರುತ್ತದೆ ಎಂದು ಭಯಭೀತರಾಗಿದ್ದಾರೆ' ಎಂದು ಕಳಕಳಿಯಿಂದ ತಿಳಿಸಿದರು. ಈ ಕಠೋರ ಸತ್ಯ ಅರಿತ ಬಳಿಕ ನಾವು ನಮ್ಮ ಪ್ರಯತ್ನ ಕೈಬಿಡಬೇಕಾಯಿತು.

3. ಛಾಪಾ ಕಾಗದ ಹಗರಣ

ಕರೀಂಲಾಲ್ ತೆಲಗಿಯ ಛಾಪಾ ಕಾಗದದ ಹಗರಣವನ್ನೇ ತೆಗೆದುಕೊಳ್ಳಿರಿ. ಎಂಥಾ ರಾಷ್ಟ್ರ ದ್ರೋಹವಿದು ? ದೇಶದ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂಥದು. ಇದರ ಬೇರು ಕರ್ನಾಟಕದಲ್ಲಿದೆ; ರೆಂಬೆ ಕೊಂಬೆಗಳು ಹಲವಾರು ರಾಜ್ಯಗಳಿಗೆ ಹರಡಿದೆ. ವೀರಪ್ಪನ್ ಆಗಲಿ ಅಥವಾ ಕರೀಂಲಾಲ್ ಆಗಲಿ ಇಷ್ಟು ಬೃಹತ್ತಾಗಿ ಬೆಳೆಯಬೇಕಾದರೆ ಪೋಲೀಸರ, ಕೆಲವು ಶ್ರೀಮಂತರ, ಸರ್ಕಾರಿ ಅಧಿಕಾರಿಗಳ ಮತ್ತು ಮಂತ್ರಿವರ್ಯರ ಶ್ರೀರಕ್ಷೆ ಮತ್ತು ವ್ಯವಹಾರ ಸಂಬಂಧವಿಲ್ಲದಿದ್ದರೆ ಸಾಧ್ಯವೆ ? ಕರ್ನಾಟಕ ಸರ್ಕಾರ ಲಾಲನನ್ನು ತನ್ನ ಪ್ರೀತಿಯ (ಜೇಲಿನ) ತೊಟ್ಟಿಲಲ್ಲಿ ಇಟ್ಟು ಲಾಲಿ ಹಾಡದಿದ್ದರೆ

ಇಷ್ಟೊತ್ತಿಗೆ ಆತ ಪಕ್ಕದ ರಾಜ್ಯದ ಪೋಲೀಸರ ಅತಿಥಿಯಾಗಿ ಇರುತ್ತಿದ್ದನು. ದಿನಕ್ಕೊಂದೊಂದು ತಮಾಷೆಯ ಸುದ್ದಿ ಪೇಪರಿನಲ್ಲಿ ಕಾಣಿಸಿಕೊಳ್ಳುತ್ತವೆ. ಮುಖ್ಯಮಂತ್ರಿಗಳು, ಗೃಹ ಸಚಿವರು, ಕಾಂಗ್ರೆಸ್ ಅಧ್ಯಕ್ಷರ ಉಕ್ತಿಗಳು ಒಂದು ಕಡೆ ವಿಸ್ಮಯ ಉಂಟು ಮಾಡಿದರೆ, ಇನ್ನೊಂದು ಕಡೆ ಮೈಪರಚಿಕೊಳ್ಳುವಂತೆ ಮಾಡುತ್ತವೆ. ಕರೀಂಲಾಲ್ ಸತ್ಯ ಹರಿಶ್ಚಂದ್ರನ ಮೊಮ್ಮಗನಂತೆ, ''ನಿಜ ಸಂಗತಿ ಹೊರಗೆ ಬರಬೇಕಾದರೆ ಸಿ.ಬಿ.ಐ. ತನಿಖೆ ಆಗಬೇಕು'' ಎನ್ನುತ್ತಾನೆ. ಕಾಂಗ್ರೆಸ್ ಅಧ್ಯಕ್ಷ ಶ್ರೀ ಪೂಜಾರಿ ಸಿ.ಬಿ.ಐ. ತನಿಖೆ ಪ್ರಾಮಾಣಿಕವಾಗಿರುವುದಿಲ್ಲ ಎನ್ನುತ್ತಾರೆ. ಮುಂಬೈ ಹೈಕೋರ್ಟ್ '' ಈ ಹಂತದಲ್ಲಿ ಸಿ.ಬಿ.ಐ. ತನಿಖೆ ಬೇಕಾಗಿಲ್ಲ'' ಎನ್ನುತ್ತದೆ. ಅಂತೂ ಈ ಎಲ್ಲ ಗೊಂದಲದಲ್ಲಿ ಸತ್ಯವಾದರೂ ಸಾಯುತ್ತದೆ ಇಲ್ಲವೇ ಕರೀಂಲಾಲ್ ಆದರೂ (ಏಡ್ಸ್‌ದಿಂದ) ಸಾಯಬಹುದು. ಒಟ್ಟಾರೆ ಈ ಪವಿತ್ರಭೂಮಿ ಭಾರತದಲ್ಲಿ ಯಾರೂ ಪಾಪಾತ್ಮರೇ ಇಲ್ಲ. ಹೀಗಾಗಿ ಯಾರಿಗೂ ಶಿಕ್ಷೆಯಿಲ್ಲ. ಆದರೆ ಮಟ್ಟಣ್ಣನವರಂಥ ಸಜ್ಜನರಿಗೆ ಆಗಬಹುದು. ''ಭ್ರಷ್ಟಾಚಾರಿಗಳಿಗೆ ಬಹುಮಾನ, ಸಜ್ಜನರಿಗೆ ಶಿಕ್ಷೆ'' ಇದು ಆಧುನಿಕ (ಮಹಾ) ಭಾರತದ ನೀತಿಯಾಗಿದ್ದು ದುಷ್ಟರಕ್ಷಕ ಶಿಷ್ಟಶಿಕ್ಷಕ ಆಧುನಿಕ ಕೃಷ್ಣ ನಮೋ ನಮಃ ಎಂದು ಪ್ರಸ್ತುತ ಸರ್ಕಾರದ ಸಂಪುಟದ ಮಂತ್ರಿವರ್ಯರು ಹೊಸ ಭಜನೆ ಮಾಡಿದರೆ ಆಶ್ಚರ್ಯವೇನಲ್ಲವಷ್ಟೆ

ಇಂಥ ಎಲ್ಲ ಸಮಸ್ಯೆಗಳ ಜೇನುಹುಳುಗಳ ಕಡಿತದ ಮಧ್ಯೆಯೂ ನಿಶ್ಚಿಂತೆಯಾಗಿ ನಿದ್ದೆ ಮಾಡಬಲ್ಲವನೆ ನಿಜ ಜಾಣ!

★★★

ಲಿಂಗಾಯತ ಧರ್ಮ ಬಸವಣ್ಣನವರದೇ

(ಕನ್ನಡ ಪ್ರಭ ದಿನ ಪತ್ರಿಕೆಯಲ್ಲಿ ದಿ. 16-9-03 ರಂದು ಪ್ರಕಟಿತ)

– ಮ. ಜಯದೇವ, ವಿಜಯಪುರ

ಕನ್ನಡ ಪ್ರಭ ಪತ್ರಿಕೆಯ 16-09-03ರಲ್ಲಿ 'ಜನನುಡಿ' ವಿಭಾಗದಲ್ಲಿ ಡಾ|| ಎಚ್. ಎಂ. ಮರುಳ ಸಿದ್ಧಯ್ಯನವರು 'ಬಸವ ಧರ್ಮ ಯಾಕೆ? ಎಂದಿನಿಂದ?' ಎಂಬ ಶೀರ್ಷಿಕೆಯಡಿಯಲ್ಲಿ ಇಷ್ಟಲಿಂಗ ಬಸವ ಪೂರ್ವದಲ್ಲಿತ್ತು ಎಂದು ಹೇಳುತ್ತಾ ವಚನ ಸಾಹಿತ್ಯವನ್ನು ಉಲ್ಲೇಖಿಸುತ್ತಾ ಅರೆಬರೆ ಸತ್ಯವನ್ನು ಬಿಂಬಿಸಲು ಪ್ರಯತ್ನಿಸಿದ್ದಾರೆ.

ಇಷ್ಟಲಿಂಗ ಪ್ರಧಾನವಾದ ಈ ಲಿಂಗಾಯತ ಧರ್ಮವನ್ನು ಬಸವಣ್ಣನವರೇ ಕೊಟ್ಟಿದ್ದಾರೆಂಬುದಕ್ಕೆ ವಿಫುಲವಾದ ಆಧಾರಗಳು ಶರಣರ ವಚನಗಳಲ್ಲಿಯೇ ಉಲ್ಲೇಖಿತವಾಗಿರುವುದನ್ನು ಕಾಣಬಹುದು. ಆದರೆ ಕೆಲವರು ಬಸವಣ್ಣನವರಿಗೆ ಈ ಧರ್ಮದ ಆದಿ ಗುರು ಹಾಗೂ ಪ್ರವಾದಿ ಪಟ್ಟ ಕೊಡಬಾರದೆಂಬ ಧೂರ್ತತನದಿಂದ ಈ ಧರ್ಮ ಬಸವ ಪೂರ್ವದ್ದೆಂದು ಸಾಧಿಸ ಹೊರಟಿದ್ದಾರೆ.

ಬಸವ ಪೂರ್ವದಲ್ಲಿದ್ದ ವೀರಶೈವ ಮತವು ಒಂದು ಪಂಥ ಮಾತ್ರ. ಸ್ವತಂತ್ರ ಧರ್ಮವಲ್ಲ. ಯೋಗಿರಾಜ ಶಿವನಿಂದ ಕೊಡಲ್ಪಟ್ಟ ಶೈವ ಧರ್ಮದ ಸಪ್ತ ಶಾಖೆಗಳಲ್ಲಿ ಕೊನೆಯದಾದ ವೀರಶೈವ,

ಶೈವ ಧರ್ಮ ವೃಕ್ಷದೊಂದು ಟೊಂಗೆ ಮಾತ್ರ. ಅದು ಎಂತು ಪರಿಪೂರ್ಣ ಧರ್ಮವಾಗಲಿಕ್ಕೆ ಸಾಧ್ಯ?

ಬಣಜಿಗ ಲಿಂಗಾಯತ, ಸಾದರ ಲಿಂಗಾಯತ, ನೊಣಬ ಲಿಂಗಾಯತ, ಒಕ್ಕಲಿಗ ಲಿಂಗಾಯತ ಎಂದು ನಾನಾ ಪಂಗಡಗಳವರು ಈ ಲಿಂಗಾಯತ ಧರ್ಮಕ್ಕೆ ಬಂದು ತಮ್ಮನ್ನು ಗುರ್ತಿಸಿಕೊಂಡಿರುವರೋ ಹಾಗೆ ಆಂಧ್ರ ಪ್ರದೇಶದಿಂದ ಈ ವೀರಶೈವರು ತಾವು ಬ್ರಾಹ್ಮಣ ಸಮಾನರೆಂಬ ಭಾವದಿಂದಲೇ, ಈ ಲಿಂಗಾಯತ ಧರ್ಮಕ್ಕೆ ಬಂದರೂ ತಾವು ಇತರರಿಗಿಂತ ಶ್ರೇಷ್ಠರೆಂದು ಗುರ್ತಿಸಲು ವೀರಶೈವ ಲಿಂಗಾಯತವೆಂದು ಬಳಸುತ್ತಿದ್ದರು. ಈಗಲೂ ಈ ವೀರಶೈವರು ಆಂಧ್ರ, ತಮಿಳುನಾಡು, ಕೇರಳಗಳಲ್ಲಿರುವುದನ್ನು ಕಾಣಬಹುದು. ಇವರುಗಳಲ್ಲಿ ಹೆಚ್ಚಿನವರಿಗೆ ಯಾವ ಸ್ವತಂತ್ರ ಧರ್ಮದ ಸಂಸ್ಕಾರಗಳೂ ಇಲ್ಲ. ಶೇ. 30-40 ಭಾಗ ಮಂದಿ ಮಾಂಸಾಹಾರಿಗಳಾಗಿದ್ದಾರೆ. ಇವರಿಗೆ ಇಷ್ಟಲಿಂಗವೆಂಬುದೇ ಗೊತ್ತಿಲ್ಲ. ಬಸವ ಪ್ರಣೀತ ಲಿಂಗಾಯತ ಧರ್ಮ ಶುದ್ಧ ಶಾಖಾಹಾರಿ ಧರ್ಮ. ಕರ್ನಾಟಕದಲ್ಲಿ ವೀರಶೈವರೆಂದು ಹೇಳಿಕೊಳ್ಳುವವರೂ ಈ ಪದಕ್ಕೆ ಬಡಿದಾಡುತ್ತಿದ್ದಾರೆ ವಿನಾ ಇವರುಗಳೂ ಲಿಂಗಾಯತರೆ! ಹೊರ ರಾಜ್ಯಗಳಲ್ಲಿದ್ದ ಕೆಲ ವೀರಶೈವರು ಈ ಲಿಂಗಾಯತ ಧರ್ಮಕ್ಕೆ ಬಂದು, ಒಂಟೆ ಡೇರೆಯಲ್ಲಿ ತನಗೂ ಸ್ವಲ್ಪ ಜಾಗ ಕೇಳಿ ಪಡೆದು ಕೊನೆಗೆ ಡೇರೆಯೇ ನನ್ನದು ಎಂದಂತೆ ಈ ವೀರಶೈವ ವಾದಿಗಳು ಒಳಗೆ ಇಂಬಿಟ್ಟುಕೊಂಡ ಲಿಂಗಾಯತ ಧರ್ಮವನ್ನೇ ತಮ್ಮದೆಂದು ಸಾಧಿಸ ಹೊರಟು ಬಸವಣ್ಣನವರ ಆದಿ ಗುರುತ್ವವನ್ನು ಅಲ್ಲಗಳೆಯಹೊರಟಿದ್ದಾರೆ.

ಗುರು ಒಂದು, ಲಿಂಗ ಒಂದು ಉಪದೇಶ ಒಂದು ಕೂಡಲ ಚೆನ್ನಸಂಗಯ್ಯನ ಶರಣ ಬಸವಣ್ಣನ ಗರುಡಿಯಲ್ಲಿ ಇಬ್ಬರಿಗೂ ಅಭ್ಯಾಸ ಒಂದೇ ಕಾಣ ಪ್ರಭುವೆ।

ಎಂಬ ಚನ್ನಬಸವಣ್ಣನವರ ನುಡಿಯಲ್ಲಿ 'ಬಸವಣ್ಣನವರ ಧರ್ಮದ ಗರುಡಿಯಲ್ಲಿ ಶರಣರೆಲ್ಲರಿಗೂ ಒಂದೇ ಅಭ್ಯಾಸ' ಎಂದು ಸ್ಪಷ್ಟಪಡಿಸಿರುವುದು ಕಾಣುತ್ತದೆ. ಇಷ್ಟಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು, ಪ್ರಸಾದವು ಬಸವಣ್ಣನು ಅನುಕರಿಸಲು ಆಯಿತ್ತು, ಇಂತೀ ತ್ರಿವಿಧಕ್ಕೆ ಬಸವಣ್ಣನೇ ಕಾರಣವೆಂದರಿದೆನಯ್ಯಾ ಕೂಡಲ ಚೆನ್ನ ಸಂಗಮದೇವಾ ಎಂಬಲ್ಲಿ ಗುರು, ಲಿಂಗ, ಜಂಗಮ ತ್ರಿ-ತತ್ತ್ವಗಳು ಬಸವಣ್ಣನವರಿಂದ ಸಂಸ್ಥಾಪಿತವಾಯಿತು ಎಂಬುದನ್ನು ಚನ್ನಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ.

ಬಸವ ಗುರುವಿನ ಹೆಸರ ಬಲ್ಲವರಾರಿಲ್ಲ?
ಹುಸಿ ಮಾತನಾಡಿ ಕೆಡದಿರಿ। ಲಿಂಗಾಯತಕೆ
ಬಸವನೇ ಕರ್ತೃ ಸರ್ವಜ್ಞ॥

ಆದುದರಿಂದ ಪ್ರಾಜ್ಞರಾದವರು ಈ ಸುಳ್ಳು ಮಾತುಗಳನ್ನು ಕೇಳದೆ, ವಚನ ಸಾಹಿತ್ಯವನ್ನು ಅಭ್ಯಾಸಿಸಿದರೆ, ಎಲ್ಲಾ ಶರಣರೂ ಈ ಲಿಂಗಾಯತ ಧರ್ಮದ ಕರ್ತೃ ಬಸವಣ್ಣನವರೇ ಎಂಬುದನ್ನು ಸ್ಪಷ್ಟಪಡಿಸಿರುವುದನ್ನು ಕಾಣಬಹುದು.

★★★



ಬೆಂಗಳೂರಿನ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪೂಜ್ಯ ಮಾತಾಜಿಯವರ ಆಗಮನಕ್ಕಾಗಿ ಕಾದು ನಿಂತಿದ್ದ ಶರಣ ವೃಂದ



ಬೆಂಗಳೂರಿನ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆಗಮಿಸುತ್ತಿರುವ ಪೂಜ್ಯ ಮಾತಾಜಿಯವರಿಗೆ ಭಕ್ತರಿಂದ ಮಾಲಾರ್ಪಣೆ



ವಿದೇಶ ಪ್ರವಾಸ ಪೂರೈಸಿಕೊಂಡು ಬಂದ ಪೂಜ್ಯ ಮಾತಾಜಿಯವರನ್ನು ಸ್ವಾಗತಿಸುತ್ತಿರುವ ಶರಣ ಸಮೂಹ



ವಿದೇಶ ಪ್ರವಾಸ ಪೂರೈಸಿಕೊಂಡು ಬಂದ ಪೂಜ್ಯ ಮಾತಾಜಿಯವರಿಗೆ ಶರಣೆ. ಸುಜಯಾದೇವಿ ಅವರಿಂದ ಪುಷ್ಪವೃಷ್ಟಿ



ವಿದೇಶ ಪ್ರವಾಸ ಪೂರೈಸಿಕೊಂಡು ಬಂದ ನಂತರ ಬಸವ ಮಂಟಪದತ್ತ ಸಾಗಲು ಸಿದ್ಧರಾದ ಮಾತಾಜಿಯವರು



ವಿದೇಶ ಪ್ರವಾಸ ಪೂರೈಸಿಕೊಂಡು ಬಂದ ಪೂಜ್ಯ ಮಾತಾಜಿಯವರಿಗೆ 'ಶರಣ ಸಂಗಮ' ಪ್ರಾರ್ಥನಾ ಕಾರ್ಯಕ್ರಮದಲ್ಲಿ ಪೂಜ್ಯ ಬಸವ ಕುಮಾರ ಸ್ವಾಮಿಗಳಿಂದ ಶಾಲಿನ ಸಮರ್ಪಣೆ




ಬೆಂಗಳೂರು ಬಸವ ಮಂಟಪದಲ್ಲಿ ವಿಶೇಷ ಅಭಿನಂದನ ಕಾರ್ಯಕ್ರಮದಲ್ಲಿ ಪ್ರಾರ್ಥನೆ ಮಾಡಿಸುತ್ತಿರುವ ಮಾತಾಜಿಯವರು ಹಾಗೂ ಪ್ರಾರ್ಥನೆಯಲ್ಲಿ ತಲ್ಲೀನರಾಗಿರುವ ಪೂಜ್ಯರುಗಳು



ಬೆಂಗಳೂರು ರಾಷ್ಟ್ರೀಯ ಬಸವ ದಳ ಹಾಗೂ ಗಣಚಾರ ದಳದವರಿಂದ ಪೂಜ್ಯ ಮಾತಾಜಿಯವರಿಗೆ ಅಭಿನಂದನೆಯ ನಂತರ ಪ್ರವಚನ ಮಾಡುತ್ತಿರುವ ಪೂಜ್ಯರು



ವಿದೇಶ ಪ್ರವಾಸ ಪೂರೈಸಿಕೊಂಡು ಬಂದ ಪೂಜ್ಯ ಮಾತಾಜಿಯವರಿಗೆ ಬೀದರ್ ಬಸವ ಮಂಟಪದಲ್ಲಿ ಶರಣೆಯರಿಂದ ಪುಷ್ಪವೃಷ್ಟಿ



ಬೀದರ್ ಬಸವ ಮಂಟಪದಲ್ಲಿ ವಿದೇಶ ಪ್ರವಾಸ ಪೂರೈಸಿಕೊಂಡು ಬಂದ ಪೂಜ್ಯ ಮಾತಾಜಿಯವರ ಅಭಿನಂದನ ಸಮಾರಂಭ



ವಿದೇಶ ಪ್ರವಾಸ ಪೂರೈಸಿಕೊಂಡು ಬಂದ ಪೂಜ್ಯ ಮಾತಾಜಿಯವರಿಗೆ ಗುಲಬರ್ಗಾ ರಾಷ್ಟ್ರೀಯ ಬಸವ ದಳದವರಿಂದ ಸ್ವಾಗತ



ಗುಲಬರ್ಗಾಯಲ್ಲಿ ನಡೆದ ಪೂಜ್ಯ ಮಾತಾಜಿಯವರ ಅಭಿನಂದನ ಸಮಾರಂಭದಲ್ಲಿ ಬಸವಾರ್ಚನೆ ಮಾಡುತ್ತಲಿರುವ ಪೂಜ್ಯರು



ವಿದೇಶ ಪ್ರವಾಸ ಪೂರೈಸಿಕೊಂಡು ಬಂದ ಪೂಜ್ಯ ಮಾತಾಜಿಯವರಿಗೆ ಧಾರವಾಡ ಹಾಗೂ ವಿವಿಧ ರಾಷ್ಟ್ರೀಯ ಬಸವ ದಳದವರಿಂದ ಸ್ವಾಗತ





ಅಮೇರಿಕಾ ದೇಶದಲ್ಲಿ ಪೂಜ್ಯ ಮಾತಾಜಿ



ಅಮೇರಿಕಾ ದೇಶ - ಕಾರ್ಯಕ್ರಮದಲ್ಲಿ ಪ್ರವಚನ ಮಾಡುತ್ತಿರುವ ಪೂಜ್ಯ ಮಾತಾಜಿ.
ಪೂಜ್ಯರ ಪ್ರವಚನ ಕೇಳುವುದರಲ್ಲಿ ತಲ್ಲೀನರಾದ ಭಕ್ತರು.

ಸ್ವಯಂ ಸೇವಕರಿಗೆ ಕರೆ

ಕಾಯ ಸೇವೆ :

12ನೆಯ ಶತಮಾನದ ಮಹಾಮನೆಯಲ್ಲಿ ನಡೆದಂತಹ ದಾಸೋಹ ಸೇವೆಯನ್ನು ನೆನಪಿಸುವಂತೆ ಶರಣ ಮೇಳದ ದಾಸೋಹ ನಡೆಯಬೇಕು, ನಡೆಯುತ್ತಲಿದೆ. ಧರ್ಮಪಿತರ ಆದೇಶ ಹೀಗಿರುತ್ತದೆ :

ಭಕ್ತ ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು. (ಬ.ವ.ದೀ 248)

ಶರಣರು ಶರಣರನ್ನು ಭೇಟಿಯಾದಾಗ ಪರಸ್ಪರ ಉಪಚರಿಸಬೇಕು, ಸೇವೆ ಮಾಡಬೇಕು. ತಾನೇ ಶ್ರೇಷ್ಠ ಎಂಬ ಅಹಂಕಾರ ತಾಳಿ ಇನ್ನಿತರರು ಸೇವೆ ಮಾಡಲೆಂದು ನಿರೀಕ್ಷಿಸಬಾರದು. ಲಕ್ಷ ಗಾವುದ ದೂರವೇ ಇರಲಿ ಸಹ ಧರ್ಮೀಯ ಶರಣರನ್ನು ಕಾಣಲು ಹೋಗಬೇಕು. ಹಾಗೆ ಹೋದಾಗ ದಾಸೋಹಂ ಭಾವನೆಯಿಂದ ತನು ಸೇವೆ - ಮನ ಸೇವೆ, ಧನ ಸೇವೆ ಮಾಡಬೇಕು. ಅಂಥವರನ್ನು ಲಿಂಗದೇವನು ಮೆಚ್ಚಿ, ಒಲಿದು, ಕೂಡುವನು. ಧರ್ಮಪಿತರ ಆದೇಶವನ್ನು ಪಾಲಿಸಲು ಇರುವ ಸೂಕ್ತ ಅವಕಾಶ ಶರಣ ಮೇಳ. ಅಲ್ಲಿ ದಾಸೋಹ ಮಾಡಲು ಅವಕಾಶ ಉಂಟು. ಒಬ್ಬೊಬ್ಬ ಶರಣ ಬಂಧುವನ್ನು ಭೇಟಿಯಾಗಲು ಬಹುದೂರ ಕ್ರಮಿಸಬೇಕಿಲ್ಲ, ಎಲ್ಲರೂ ಒಂದೇ ಕಡೆ ಸಿಗುತ್ತಾರೆ. ಜೊತೆಗೆ ಜ್ಞಾನ ದಾಸೋಹವೂ ಇರುತ್ತದೆ. ಆದ್ದರಿಂದ ಅಚ್ಚುಕಟ್ಟಾಗಿ ದಾಸೋಹವು ನಡೆಯಬೇಕಾದರೆ ಹೆಚ್ಚು ಜನ ಶರಣ ಬಂಧುಗಳು ಸ್ವಯಂ ಸೇವಕರಾಗಿ ದುಡಿಯಲು ಸಿದ್ಧರಾಗಬೇಕು. ಶರಣ ಮೇಳವೆಂಬ (ಧಾರ್ಮಿಕ) ತೌರಿನ ಹಬ್ಬಕ್ಕಾಗಿ ರಜೆಗಳನ್ನು, ಸಮಯವನ್ನು ಕಾಯ್ದಿರಿಸಿಕೊಳ್ಳಬೇಕು; ನೀಡಲು ಕಾಣಿಕೆಯನ್ನು ಹೊಂದಿಸಿಡಬೇಕು. ಶರಣ ಮೇಳ ಪೂರೈಸಿ ಹೋಗುತ್ತಲೇ ಹುಂಡಿಯೊಂದನ್ನು ಇಟ್ಟು ಕಾಣಿಕೆಯನ್ನು ಸಂಗ್ರಹಿಸುತ್ತಲಿರಬೇಕು. ತಮ್ಮ ಇಷ್ಟಾರ್ಥಗಳು ಸಿದ್ಧಿಯಾದರೆ ಶರಣ ಮೇಳಕ್ಕೆ ಬಂದು ಸೇವಾ ಕಾರ್ಯ ಕೈಗೊಳ್ಳುತ್ತೇವೆ ಎಂಬ ಹರಕೆಯನ್ನು ಮಾಡಿಕೊಳ್ಳಬೇಕು. ತನು ದಾಸೋಹಿಗಳು ಡಿಸೆಂಬರ್ 15ರಿಂದಲೇ ಬರಲು ಪ್ರಯತ್ನಿಸಬೇಕು. ಅತ್ಯಂತ ಹೆಚ್ಚಿನ ಜನರು ಕನಿಷ್ಠ ಜನವರಿ 1ರಿಂದಲಾದರೂ ಬಂದು ಸೇವಾ ಕಾರ್ಯದಲ್ಲಿ ತೊಡಗಬೇಕು. ಆರ್ಥಿಕವಾಗಿ ಅಶಕ್ತರಿದ್ದವರಿಗೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಕೊಟ್ಟು ಕಳಿಸಿಕೊಡಬೇಕು. ಪ್ರತಿ ರಾಷ್ಟ್ರಿಯ ಬಸವ ದಳದವರು ಮತ್ತು ಇನ್ನಿತರ ಶರಣರು ತನು ಸೇವೆಗೆ ಸನ್ನದ್ಧರಾಗಬೇಕು. ಬುದ್ಧಿ ಜೀವಿಗಳಿಗೂ ಸಾಕಷ್ಟು ಕೆಲಸವಿರುತ್ತದೆ. ಶರಣೆಯರಿಗೂ ಸೇವಾಕಾರ್ಯ ಸಾಕಷ್ಟು ಇರುತ್ತವೆ. ಸಮಯವನ್ನು ಒದಗಿಸಿಕೊಂಡು ಬಂದು ಯಾರು ಬೇಕಾದರೂ ಸೇವೆ ಮಾಡಬಹುದು.

ಶರಣ ಮೇಳಕ್ಕೆ ಬಂದ ಶರಣರಿಗೆ ಮಾಡುವ ಉಪಚಾರ,
ಧರ್ಮಗುರು ಬಸವಣ್ಣನವರಿಗೆ ಮಾಡುವ ಉಪಚಾರ.
ಶರಣ ಮೇಳದ ವಿಸ್ತರಣೆಯಲ್ಲಿದೆ
ಬಸವ ಗುರುವಿನ ಕೀರ್ತಿ, ಲಿಂಗಾಯತ ಧರ್ಮದ ಮಹತಿ !
ಎಂಬುದು ತಮ್ಮೆಲ್ಲರಲ್ಲಿ ಅಚ್ಚೊತ್ತಲಿ.

\- ಬಸವಾತ್ಮಜೆ

ಬಸವ ತತ್ತ್ವ ಪರೀಕ್ಷೆಯ 2003ರ ಫಲಿತಾಂಶ

ಬಸವ ತತ್ತ್ವ ಪ್ರವೇಶ (ಮೊದಲ ಪರೀಕ್ಷೆ)

ಒಂದನೆಯ ವರ್ಗ

ಕ್ರ.ಸಂ.	ಶರಣರುಗಳಾದ	ಕೇಂದ್ರ
11.	ಕೆ. ಬಸವರಾಜ	ಬೆಳಗಾವಿ
18.	ಜಯಶ್ರೀ ಲಿಂಗಾಯತ	ಬೆಳಗಾವಿ

ಎರಡನೆಯ ವರ್ಗ

19.	ರೂಪ ಬಾಬಾನಗರ	ಬೆಳಗಾವಿ

ಮೂರನೆಯ ವರ್ಗ

1.	ಜಿ. ಎಸ್. ಸಂಧ್ಯಾ	ಹಾರಗದ್ದೆ
12.	ಶಂಕರ. ಎಸ್. ತಿಪ್ಪಾ	ಬೆಳಗಾವಿ
13.	ಮಹಾಂತೇಶ ಚ. ಗುಡಸ	ಬೆಳಗಾವಿ
15.	ಕೆ. ಶರಣ ಪ್ರಸಾದ	ಬೆಳಗಾವಿ
16.	ಸಂತೋಷ ಚ. ಗುಡಸ	ಬೆಳಗಾವಿ
22.	ಡಿ. ಎಚ್. ಶಿವನಳ್ಳಿ	ಕಳಸಾಪುರ

ಬಸವ ತತ್ತ್ವ ಪ್ರಕಾಶ (ನಾಲ್ಕನೆಯ ಪರೀಕ್ಷೆ)

ಎರಡನೆಯ ವರ್ಗ

1.	ಪ್ರತಿಭಾ ಗು. ಮಾಳಗಿ	ಬೆಳಗಾವಿ

ವಿಶೇಷ ಸೂಚನೆ : ರಾಷ್ಟ್ರೀಯ ಬಸವ ದಳಗಳು ಮತ್ತು ಇನ್ನಿತರ ಸಂಘ ಸಂಸ್ಥೆಗಳು ಬಸವ ತತ್ತ್ವ ಪರೀಕ್ಷೆಗಳನ್ನು ನಡೆಸುವ ಸಲುವಾಗಿ ನಿಯಮಾವಳಿಗಾಗಿ ರೂ. 5.00 ಅಂಚೆ ಚೀಟಿ ಲಗತ್ತಿಸಿದ ಸ್ವವಿಳಾಸದ ಲಕೋಟೆ ಕಳಿಸಿ ಪತ್ರ ಬರೆಯಬೇಕು.

ನಿರ್ದೇಶಕರು
ಬಸವ ತತ್ತ್ವ ಪರೀಕ್ಷೆಗಳು
ಬಸವ ಗಂಗೋತ್ರಿ, ಮೈಸೂರು ರಸ್ತೆ
ಕುಂಬಳಗೋಡು-560074
ಬೆಂಗಳೂರು ದಕ್ಷಿಣ ತಾಲ್ಲೋಕು

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು. ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು-ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು. ಇತ್ತೀಚೆಗೆ ಬಂದಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ-ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ-ಸೋದರತ್ವ-ಸ್ವಾತಂತ್ರ ಇವು ನನ್ನ ತತ್ತ್ವದ ಮುಖ್ಯಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ- ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ

ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು-ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ, ಜಾತಿ ಪದ್ದತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಠ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಥ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು ; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು, ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟನಿಂದಲೇ ಲಿಂಗಾಯತರಾಗಿರಬಹುದು. ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ 'ಗಣಧರ್ಮ'ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ: ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು, ನೆನಹು ಸಂಜೆಯ ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ನೆನಹು : ಪ್ರತಿದಿನ ಸಂಜೆ ೭ ಘಂಟೆಗೆ ಸರಿಯಾಗಿ ನೀವು ಎಲ್ಲಿಯೇ ಇದ್ದರೂ ಆ ಸ್ಥಳದಲ್ಲಿ ಐದು ನಿಮಿಷಗಳ ಪ್ರಾರ್ಥನೆಯನ್ನು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಅಳವಡಿಸಿಕೊಂಡು ತಪ್ಪದೆ ಮಾಡಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟ ಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೆ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದ ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿ- ಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು

ಮಾಡುವರು. 'ಗಣ ಮೇಳ'ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ ೧೨ ರಿಂದ ೧೫ ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ- ಮಡಿವಾಳ ಮಾಚಯ್ಯ-ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ-ಮಧುವಯ್ಯ -ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ, ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಅದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಿರುತ್ತಾಳೆ. ಬನ್ನಿ, ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ- ಬಸವಣ್ಣ
(ಗ್ರಹಿಸಿದವರು -ಬಸವಾತ್ಮಜೆ [illegible])

ದಿ. 6-9-03ರಂದು ಪ್ರಜಾವಾಣಿಯ, 'ವಾಚಕರ ವಾಣಿ' ವಿಭಾಗದಲ್ಲಿ ಪ್ರಕಟಿತ ಪತ್ರ

ಮಾನ್ಯರೆ,

ಡಾ. ಎಂ. ಚಿದಾನಂದಮೂರ್ತಿ ಮತ್ತು ಎಚ್. ಎಂ. ಮರುಳಸಿದ್ಧಯ್ಯ ಅವರು (ಆ. 27 ವಾ.ವಾ.) "ಬಸವ ಧರ್ಮ" ಎಂಬ ನಾಮಕರಣ ಅನಗತ್ಯ ಎಂದಿರುವುದು ಸರಿಯಷ್ಟೆ. ಯಾರು ಹಿಂದೂ ವ್ಯವಸ್ಥೆಯ ಬಗ್ಗೆ ಅಪಾರವಾದ ಆರಾಧನಾ ಭಾವವುಳ್ಳವರೊ ಅಂಥವರಿಗೆ 'ಬಸವ ಧರ್ಮ' ಎಂಬ ನಾಮಕರಣ ಅನಗತ್ಯ ಎಂಬುದು ಸಹಜವೇ ಆಗಿದೆ. ಆದರೆ ಹಿಂದೂ ವ್ಯವಸ್ಥೆಯನ್ನು ವಿರೋಧಿಸಿ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದ ಮಹಾ ಮಾನವತಾವಾದಿ ಬಸವಣ್ಣನವರ ಅನುಯಾಯಿ ಅಭಿಮಾನಿಗಳಿಗೆ 'ಬಸವ ಧರ್ಮ' ಎಂಬ ನಾಮಕರಣ ಅಗತ್ಯವೂ, ಅನಿವಾರ್ಯವೂ ಆಗಿದೆ. ಡಾ. ಎಂ. ಚಿದಾನಂದಮೂರ್ತಿ ಅವರು ವೀರಶೈವ ಹಿಂದೂ ವ್ಯವಸ್ಥೆಯ ಒಂದು ಉಪಪ್ರಭೇದ ಎಂದು ಅಖಂಡವಾಗಿ ನಂಬಿಕೊಂಡು ಬಂದವರು. ಹಿಂದೂ ವ್ಯವಸ್ಥೆಯ ಬಗ್ಗೆ ಅವರಿಗಿರುವ ನಿಷ್ಠೆ ಅವರ ಸ್ವಂತಿಕೆಗೆ ಸೇರಿದುದಾಗಿದೆ. ಅವರ ಅಭಿಪ್ರಾಯ ಒಪ್ಪುವಂತಹುದೇ ಆಗಿದೆ. ಯಾಕೆಂದರೆ ಹಿಂದೂ ವ್ಯವಸ್ಥೆಗೂ ಮತ್ತು ವೀರಶೈವ ವ್ಯವಸ್ಥೆಗೂ ಅಂಥ ವ್ಯತ್ಯಾಸವೇನಿಲ್ಲ. ಒಂದು ಮುಖ್ಯ ವ್ಯತ್ಯಾಸವೆಂದರೆ ಹಿಂದೂ ವ್ಯವಸ್ಥೆಯಲ್ಲಿ ಬ್ರಾಹ್ಮಣನಾದವನು ಶೋಷಕನಾಗಿದ್ದರೆ, ವೀರಶೈವ ವ್ಯವಸ್ಥೆಯಲ್ಲಿ ಜಂಗಮ ಜಾತಿಯವನು ಆ ಸ್ಥಾನವನ್ನು ಪಡೆದಿದ್ದಾನೆ. ಇವರಿಬ್ಬರೂ ಪೂಜೆ, ಹೋಮ, ಜ್ಯೋತಿಷ್ಯ, ಪಂಚಾಂಗಗಳನ್ನು ನಂಬಿದವರು. ಜಾತಿ ವ್ಯವಸ್ಥೆಯನ್ನು ಬೆಚ್ಚಗೆ ಕಾಪಾಡುವಲ್ಲಿ ನಿಸ್ಸೀಮರು.

ಬಸವಣ್ಣನವರ ಮೊದಲ ವಿರೋಧಿಗಳೆಂದರೆ ವೀರಶೈವ ವ್ಯವಸ್ಥೆಯಲ್ಲಿನ ಜಾತಿ ಜಂಗಮರು ಯಾಕೆಂದರೆ ಇವರ ಪಾದಗಳನ್ನು ತೊಳೆದ ನೀರನ್ನು ಇತರ ವೀರಶೈವರು ಭಯ ಭಕ್ತಿಯಿಂದ ಕುಡಿದು ಪಾವನರಾಗಬೇಕು! ಈ ಜಾತಿ ಜಂಗಮರಿಗೆ ಪಾದ ತೊಳೆಸಿಕೊಂಡು ಗೊತ್ತೇ ಹೊರತು ಮತ್ತೊಬ್ಬರ ಪಾದ ತೊಳೆದು ಅಭ್ಯಾಸವಿಲ್ಲ. ಅಲ್ಲದೆ, ಮಠಪೀಠಗಳಿಗೆ ಜಂಗಮರೇ ಸ್ವಾಮಿಗಳಾಗಬೇಕೆಂದು ಇವರ ಪಟ್ಟು. ಬಸವಣ್ಣನವರು ವೀರಶೈವ ವ್ಯವಸ್ಥೆಯಲ್ಲಿನ ಇಂಥ ಎಲ್ಲ ಕೊಳಕುಗಳನ್ನು ತೊಳೆದು ಸ್ವಚ್ಛಗೊಳಿಸಿದವರು. ಹಿಂದುಳಿದ ದೀನ ದಲಿತರು, ಸ್ತ್ರೀಯರೂ ಜಂಗಮರಾಗುವ, ಶರಣತ್ವವನ್ನು ಸಂಪಾದಿಸುವ ಅವಕಾಶವನ್ನು ಕಲ್ಪಿಸಿದವರು. ಸಹಜವಾಗಿಯೇ ಇದರಿಂದ ಜಾತಿ ಜಂಗಮರಿಗೆ ಅಸಮಾಧಾನ ಉಂಟಾಯಿತು. ಈ ಅಸಮಾಧಾನವೇ ಬಸವ ಕ್ರಾಂತಿಯನ್ನು ಛಿದ್ರಗೊಳಿಸಿದ ಬೀಜ ಎಂಬುದು ಚಾರಿತ್ರಿಕ ಸತ್ಯ.

'ವೀರಶೈವ' ಎಂಬುದು ಒಂದು ವ್ಯವಸ್ಥೆಯೇ ಹೊರತು ಅದು ಧರ್ಮವಲ್ಲ. ಅಸಮಾನತೆಯನ್ನು ಬಿತ್ತುವಂತಹದ್ದು ಧರ್ಮವಾಗುವುದಿಲ್ಲ. ವೀರಶೈವ ವ್ಯವಸ್ಥೆ 'ಧರ್ಮ'ದ ಸ್ವರೂಪ ಪಡೆದದ್ದು ಅಜ್ಞಾನದಿಂದ ಅಥವಾ ಹಿಂದೂ ವ್ಯವಸ್ಥೆಯನ್ನು 'ಧರ್ಮ'ವೆಂದು ರೂಪಿಸಿದ ವೈದಿಕರಂತಹವರ ಜಾಣ್ಮೆಯಿಂದಲೂ ಇರಬಹುದು. 'ವೀರಶೈವ'ಕ್ಕೆ ವಿರುದ್ಧವಾಗಿ ನಿಂತದ್ದು 'ಲಿಂಗಾಯತ' ಡಾ. ಎಂ. ಚಿದಾನಂದಮೂರ್ತಿ ಅವರ ಇವೆರಡೂ ಒಂದೇ ಎಂದಿದ್ದಾರೆ. ಬಸವಾಭಿಮಾನಿಗಳು ಇದನ್ನು ಅಲ್ಲಗಳೆಯುತ್ತಾರೆ. ಈ ಗೊಂದಲದಿಂದ ಜನರನ್ನು ಪಾರು ಮಾಡುವ ಒಂದೇ ಒಂದು ಉದ್ದೇಶದಿಂದ ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಬಸವ ತತ್ವಗಳಿಗೆ 'ಬಸವ ಧರ್ಮ' ಎಂದು ನಾಮಕರಣ ಮಾಡಿರುವುದು ಸ್ವಾಗತಾರ್ಹವಾದುದಾಗಿದೆ.

– ಬಿ. ಎಂ. ಶರಭೇಂದ್ರಯ್ಯ, ಚಿತ್ರದುರ್ಗ

ಪೂಜ್ಯ ಮಾತಾಜಿಯವರ ಪ್ರತಿಕ್ರಿಯೆ: ಶರಣ. ಶರಭೇಂದ್ರಯ್ಯನವರು ಬಹಳ ಉತ್ತಮವಾದ ಒಂದು ಪ್ರತಿಕ್ರಿಯೆಯನ್ನು ಡಾ॥ ಚಿ.ಮೂ ಮತ್ತು ಹೆಚ್.ಎಂ.ಎಂ ಅವರ ಪತ್ರಕ್ಕೆ (27-8-2003) ನೀಡಿದ್ದಾರೆ. ಶರಭೇಂದ್ರಯ್ಯನವರ ವಿಚಾರಕ್ಕೆ ನಮ್ಮ ಸಂಪೂರ್ಣ ಸಹಮತವಿದೆ. ಆದರೆ, ವೀರಶೈವ ಮತ್ತು ಲಿಂಗಾಯತ ಗೊಂದಲದಿಂದ ಜನರನ್ನು ಪಾರು ಮಾಡುವ ಒಂದೇ ಒಂದು ಉದ್ದೇಶದಿಂದ ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಬಸವ ತತ್ತ್ವಗಳಿಗೆ 'ಬಸವ ಧರ್ಮ' ಎಂದು ನಾಮಕರಣ ಮಾಡಿರುವುದು ಸ್ವಾಗತಾರ್ಹವಾದುದಾಗಿದೆ ಎಂದಿದ್ದಾರೆ.

'ಬಸವ ಧರ್ಮ' ಎಂಬ ಪದ ಪ್ರಯೋಗವನ್ನು ಶ್ರೀ ಶಿವಮೂರ್ತಿ ಶರಣರೇ 'ಪ್ರಥಮತಃ ಮಾಡಿರುವುದಾಗಿ ಶರಭೇಂದ್ರಯ್ಯನವರ ಅನಿಸಿಕೆಯಾದಂತೆ ತೋರುತ್ತದೆ. 'ಕರುಣೆ ಕಪಿಲ ಸಿದ್ಧಮಲ್ಲಿನಾಥಯ್ಯಾ ಎನಗೂ ನಿನಗೂ ಬಸವಣ್ಣನ ಧರ್ಮವಯ್ಯ' ಎಂಬ ಬಸವ ಯೋಗಿ ಸಿದ್ಧರಾಮೇಶ್ವರರ ನುಡಿವಿಡಿದು ನಾವು ಬಹಳ ಹಿಂದೆಯೇ 'ಬಸವ ಧರ್ಮ' ಎಂಬುದನ್ನು ಜಾರಿಗೆ ತಂದಿದ್ದೇವೆ. 1983 ರಲ್ಲಿ ಅಖಿಲ ಭಾರತ ಬಸವ ಧರ್ಮ ಸಮ್ಮೇಳನವನ್ನು ಸಂಯೋಜಿಸಿದೆವು. 1992 ರಲ್ಲಿ ಬಸವ ಧರ್ಮ ಪೀಠವು ಸ್ಥಾಪನೆಯಾಯಿತು. ಹಿಂದಿನ ಪೀಠಾಧೀಶರು ಮಾಡದೆ ಇರುವ ಬಸವ ತತ್ತ್ವ ಪ್ರಚಾರವನ್ನು ಶ್ರೀ ಶಿವಮೂರ್ತಿ ಶರಣರು ಮಾಡುತ್ತಿದ್ದಾರೆ ಎಂದು ಅವರನ್ನು ಅಭಿನಂದಿಸಲಿ, ಆದರೆ 'ಬಸವ ತತ್ತ್ವಗಳಿಗೆ ಬಸವ ಧರ್ಮ ಎಂದು ಶ್ರೀಗಳೇ ನಾಮಕರಣ ಮಾಡಿದರು' ಎಂಬ ಅತಿಶಯೋಕ್ತಿಯ ಮುಖಸ್ತುತಿ ಮಾಡಿ ನಗೆಗೆ ಈಡಾಗದಿರಲಿ ಎಂದು ನಮ್ಮ ಸಲಹೆ.

ಡಾ॥ ಚಿ.ಮೂ ಅವರ ಅಪಸ್ವರ ನಿಲ್ಲಲಿ

– ಮಾತಾಜಿ

ಅಮೆರಿಕಾ ಪ್ರವಾಸಕ್ಕೆ ನಾನು ಹೋದ ನಂತರ ಬಹಳಷ್ಟು ಘಟನೆಗಳು ಘಟಿಸಿದ್ದರೂ ವಿಶ್ವ ಬಸವ ಧರ್ಮ ಮಹಾಸಭೆಯ ಸ್ಥಾಪನೆ ಬಹಳ ಗಮನಾರ್ಹವಾದುದು. 'ಮಲಗಿದರೆ ಕುಂಭಕರ್ಣ ಎದ್ದರೆ ವೀರಭದ್ರ' ಎಂಬೊಂದು ಗಾದೆ ಕನ್ನಡದಲ್ಲಿದೆ. ಜೂನ್ 1 ರಂದು ಕೂಡಲಸಂಗಮದಲ್ಲಿ ನಡೆದ ಗುರು- ವಿರಕ್ತರ ಸಮಾವೇಶ ಬಹಳಷ್ಟು ಜನರಲ್ಲಿ ತಳಮಳ ಉಂಟು ಮಾಡಿತಾದರೂ ನಾನು ಪ್ರವಾಸ ಹೋಗಲಿದ್ದುದರಿಂದ ಪ್ರಯತ್ನಪೂರ್ವಕವಾಗಿ ತುಟಿ ಬಿಗಿ ಹಿಡಿದಿದ್ದೆ. ನಾನು ವಿಮರ್ಶೆ ಮಾಡಿ ಹೇಳಿಕೆ ಕೊಟ್ಟರೆ ಅದಕ್ಕೆ ಪ್ರತಿಕ್ರಿಯೆಯಾಗಿ ಬರುವ ಟೀಕೆಗಳಿಗೆ ಉತ್ತರಿಸಲು ಇರುವುದಿಲ್ಲ ಎಂದು ಮೌನ ತಾಳಿದ್ದೆ. ನಾವು ಊಹಿಸಿದ್ದಂತೆಯೇ ಆ ವೇದಿಕೆಯಿಂದ ಕೆಲವು ಪೀಠಾಧೀಶರು ಧರ್ಮಪಿತ ಬಸವಣ್ಣನವರನ್ನು ಅವಹೇಳನ ಮಾಡಿ ಮಾತನಾಡಿದರು. ಆದರೆ ವಿರಕ್ತರು ಬಾಯಿ ಬಿಡದೆ, ಪ್ರತಿಭಟಿಸದೆ ಪರಮ ಮೌನಿಗಳಾಗಿದ್ದರು. ಯಾರೋ ಹೇಳಿದರು ಒಂದು ಅಲಿಖಿತ ಒಪ್ಪಂದವಾಗಿತ್ತಂತೆ. ಅವರವರು ತಮ್ಮ ಅಭಿಪ್ರಾಯ ಮಂಡಿಸಲಿ; ಆದರೆ ಯಾರೂ ಅದನ್ನು ವಿಮರ್ಶಿಸಿ ಟೀಕಿಸಬಾರದು, ಮಾರುತ್ತರಿಸಬಾರದು.

ನಂತರ ಶ್ರೀ ದಯಾನಂದ ಸ್ವಾಮಿಯ ಜೊತೆಗೆ ಮಾತನಾಡುತ್ತ ನಾನು ನುಡಿದೆ, 'ವೀರಶೈವ ಮಹಾಸಭೆಯ ದುರಾಲೋಚನೆ ' ಮಿತಿ ಮೀರುತ್ತಿದೆ. ಹಾನಗಲ್ ಕುಮಾರ ಸ್ವಾಮಿಗಳಿಂದ ಪ್ರಾರಂಭವಾದ ಈ ಸಂಸ್ಥೆ ಅನವಶ್ಯಕವಾಗಿ ಲಿಂಗಾಯತರನ್ನು ತಪ್ಪುತಪ್ಪಾಗಿ ವೀರಶೈವರೆಂದು ಕರೆದು ಗೊಂದಲ ಉಂಟು ಮಾಡುತ್ತಿದೆ. ನಾವು 'ಲಿಂಗಾಯತ' ಪದ ಬಳಕೆ ತಂದು ಜನರನ್ನು ಸಾಕಷ್ಟು ಜಾಗೃತಗೊಳಿಸಿ ಸಂಘಟಿಸುತ್ತಾ ಬಸವ ಪಥಕ್ಕೆ ಕರೆತರುವಾಗ ಈಗ ಲಿಂಗಾಯತ ಪದಕ್ಕೂ ಕೈಹಾಕಿ, 'ವೀರಶೈವ-ಲಿಂಗಾಯತ' ಸಮಾನಾರ್ಥದ ಪದಗಳೆಂದು ಅಪಪ್ರಚಾರ ಆರಂಭಿಸಿದರು. ಆದ್ದರಿಂದ ನನಗೊಂದು ಆಲೋಚನೆ ಬರುತ್ತಿದೆ. ವೀರಶೈವ, ಲಿಂಗಾಯತ ಎರಡೂ ಪದ ಬಳಕೆ ಕೈಬಿಟ್ಟು ಬಸವ ಧರ್ಮ, ಇದರ ಅನುಯಾಯಿ ಬಸವ ಧರ್ಮಿ ಅಥವಾ ಬಸವಾಯತ ಎಂದೇಕೆ ಮಾಡಬಾರದು ? ಹೀಗೆ ಮಾಡಿದರೆ ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರು ಹೇಳುತ್ತಿದ್ದಂತೆ 'ಯಾವ ಧೂರ್ತ ಪಂಡಿತನೂ ಬಸವ ಧರ್ಮವು ಬಸವಣ್ಣನವರಿಗೂ ಮೊದಲು ಇತ್ತೆಂದು ಸಾಧಿಸಲಾರ, ಯಾವ ಮೂರ್ಖ ಭಕ್ತನೂ ಧೂರ್ತ ಪಂಡಿತನ ಮಾತನ್ನು ನಂಬಲಾರ'. ಈ ನನ್ನ ಮಾತುಗಳನ್ನು ಚಕ್ಕನೆ ಗ್ರಹಿಸಿಕೊಂಡ ಶ್ರೀ ದಯಾನಂದ ಸ್ವಾಮಿಗಳು ನಾನು ಅಮೆರಿಕಾ ಪ್ರವಾಸ ಕೈಗೊಳ್ಳುತ್ತಲೇ ವಿಶ್ವ ಬಸವ ಧರ್ಮ ಮಹಾಸಭಾದ ಯೋಜನೆ ಹಾಕಿದ್ದಲ್ಲದೆ ಅನೇಕ ಗಣ್ಯರನ್ನು ಸಂಪರ್ಕಿಸಿದರು. ಅಂತೂ ಆ ಹೆಸರಿನ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ. ಅದಕ್ಕೆ ನಮ್ಮದೇನೂ ಆಕ್ಷೇಪವಿಲ್ಲ ಆ ಸಂಸ್ಥೆಗೆ ವಿರುದ್ಧವಾಗಿ ಚಿತ್ರದುರ್ಗ ಶ್ರೀಗಳು ತಮ್ಮ ಅಮೆರಿಕಾ ಪ್ರವಾಸ ಮುಗಿಸಿಕೊಂಡು ಬರುತ್ತಿದ್ದಂತೆಯೇ ವಿಶ್ವಬಸವ ಧರ್ಮ ಮಹಾಸಭೆಗೆ ಇದಿರೇಟು ಕೊಡಲು ಶರಣ ಧರ್ಮ ಮಹಾಸಭಾ ಮಾಡಲು ನಿರ್ಧರಿಸಿ, ಘೋಷಿಸಿದರಂತೆ. ಆಗ ಅವರ ಅನೇಕ ಅಭಿಮಾನಿಗಳು ಮತ್ತೆ ಬಳಸಿನ ದಾರಿ ಬೇಕಿಲ್ಲ ಬಸವ ಧರ್ಮ ಎಂದೇ ಇರಲಿ ಎಂದು ಒತ್ತಾಯಿಸಿದಾಗ ಪುನಃ ಬಸವ ಧರ್ಮ ಮಹಾಸಭಾ ಎಂದು ತಾವೂ ಸ್ಥಾಪಿಸಿದರಂತೆ. ಈ ಎಲ್ಲ ಬೆಳವಣಿಗೆಗಳಿಂದ ನಮಗೆ ಬೇಸರವಾಗಿಲ್ಲ ಬದಲಿಗೆ ಹರ್ಷವಾಗಿದೆ ನಾವೊಂದು ಸತ್ಯವನ್ನು ಘೋಷಿಸಿದಾಗ ಒಪ್ಪದವರು, ವಿರೋಧಿಸಿದವರು ಕಾಲಾನಂತರದಲ್ಲಿ ಅದೇ ನಿಲುವಿಗೆ ಬರುವರಲ್ಲ ಎಂದು ! ಅಂತೂ ವೈಯಕ್ತಿಕವಾಗಿ, ಸಾಂಸ್ಥಿಕವಾಗಿ ಬೇರೆಬೇರೆ ಇದ್ದರೂ ವಿಚಾರದಲ್ಲಿ ಮಾತ್ರ ಬಸವ ಪಥಿಕರು ಸಮಾನ ವಿಚಾರಧಾರೆಯವರು ಎಂಬುದು ಇದರಿಂದ ನಿಶ್ಚಿತವಾಗುತ್ತದೆ.

ಆದರೆ, ನೆರೆ ಮನೆಯವರು ಹುಗ್ಗಿ-ಹೋಳಿಗೆ ಮಾಡಿಕೊಂಡು ಸಂತೋಷದಿಂದ ಊಟ ಮಾಡುತ್ತಿದ್ದರೆ ಪಕ್ಕದ ಮನೆಯವರಿಗೆ ಏಕೆ ಹೊಟ್ಟೆಕಿಚ್ಚು. ಬಸವ ತತ್ತ್ವಾನುಯಾಯಿಗಳು ತಮ್ಮ ತತ್ತ್ವದ ಬಗ್ಗೆ ಚಿಂತಿಸಿ, ತಪ್ಪು ಸರಿಪಡಿಸಿಕೊಂಡರೆ ವೀರಶೈವರಾದ ಡಾ|| ಚಿದಾನಂದ ಮೂರ್ತಿ ಮತ್ತು ಡಾ|| ಮರುಳು ಸಿದ್ಧಯ್ಯನವರಿಗೆ ಏಕೆ ಸಂಕಟವಾಗಬೇಕು ? ಅವರ ಪ್ರಲಾಪವನ್ನು ಕೇಳೋಣ.

'ಬಸವ ಧರ್ಮ' ನಾಮಕರಣ ಅನಗತ್ಯ

(ದಿ. 27-8-03ರಂದು ಪ್ರಜಾವಾಣಿಯ, 'ವಾಚಕರ ವಾಣಿ' ವಿಭಾಗದಲ್ಲಿ ಪ್ರಕಟಿತ)

ಮಾನ್ಯರೆ,

'ಲಿಂಗಾಯತ 'ರೇ ಬೇರೆ, 'ವೀರಶೈವ 'ರೇ ಬೇರೆ ಎಂಬ ವಾದ ಹುಟ್ಟಿರುವಂತೆ ವೀರಶೈವ ಧರ್ಮವನ್ನು ' ಶರಣ ಧರ್ಮ 'ವೆಂದು ಕರೆಯಬೇಕೆಂಬ ವಾದ ಆರಂಭವಾಗಿ, ಅದರ ಜಾಗದಲ್ಲಿ 'ಬಸವ ಧರ್ಮ' ಎಂಬುದು ಕಾಣಿಸಿಕೊಂಡಿರುವುದನ್ನು ನಾವು ಆತಂಕದಿಂದ ಗಮನಿಸಿದ್ದೇವೆ. ಲಿಂಗಾಯತರನ್ನು 'ಬಸವಾಯತ'ರೆಂದು ಕರೆಯಬೇಕೆಂಬ ವಾದವೂ ಕೆಲ ಕಾಲ ಕೇಳಿ ಬಂದಿತ್ತು.

ವೀರಶೈವ ಅಥವಾ ಲಿಂಗಾಯತವು ಒಬ್ಬ ನಿರ್ದಿಷ್ಟ ವ್ಯಕ್ತಿಯಿಂದ ಸ್ಥಾಪನೆಗೊಂಡುದಲ್ಲ, ಅದರ ಸ್ಥಾಪಕ ಯಾರೋ ತಿಳಿಯದು ಎಂಬುದು ಮಾತ್ರ ವಿವಾದಾತೀತ ಸತ್ಯ. ಬಸವಣ್ಣನವರೇ ತಮ್ಮ ಒಂದು ವಚನದಲ್ಲಿ ತಾವು 'ಶೈವ' ರಾಗಿದ್ದವರು 'ವೀರಶೈವ' ರಾದೆವು ಎಂದು ಹೇಳಿಕೊಂಡಿರುವುದು ಮಾತ್ರವಲ್ಲ, ವೀರಶೈವನ ಪರಿಚಯವೂ ಚೆನ್ನಬಸವಣ್ಣನವರಿಂದ ಆಯ್ತು ಎಂದೇ ಸ್ಪಷ್ಟಪಡಿಸಿದ್ದಾರೆ. ಅವರ ಸಮಕಾಲೀನ ವಚನಗಳಲ್ಲಿ, ವಚನಗಳ ಮಧ್ಯೆ ಬರುವ ಸಂಸ್ಕೃತ ಶ್ಲೋಕಗಳಲ್ಲಿ, ಅವರಿಗಿಂತ ಹಿಂದಿನ ಕೊಂಡಗುಳಿ ಕೇಶಿರಾಜನೆಂಬ ಕವಿಯ ಕೃತಿಗಳಲ್ಲಿ 'ವೀರಶೈವ' ಮಾತು ಹತ್ತಾರು ಕಡೆ ಕಾಣಿಸಿಕೊಂಡಿದೆ. ಈಗ ಬಳಕೆಯಲ್ಲಿರುವಂತೆ 'ವೀರಶೈವ' 'ಲಿಂಗಾಯಿತ' ಇವೆರಡೂ ಸಮಾನಾರ್ಥಗಳು. ಹೀಗಿರುವಾಗ, ಪರಂಪರೆಯ ಬೆಂಬಲವಿರುವ, ಜನತೆ ಆ ಪದಗಳನ್ನು ಒಪ್ಪಿರುವಾಗ ಅವುಗಳ ಜಾಗದಲ್ಲಿ 'ಬಸವ ಧರ್ಮ' ಎಂಬುದನ್ನು ತರಲು ಯತ್ನಿಸಿದರೆ ಉಂಟಾಗುವ ಗೊಂದಲ, ಲಿಂಗಾಯತ ಸಮಾಜದಲ್ಲಿ ಉಂಟಾಗುವ ಬಿರುಕು, ಅದರ ಪರಿಣಾಮ ಇವು ಅನೂಹ್ಯವಾದುವು. 'ಬಸವ ಧರ್ಮ' ಮಾತನ್ನು ಹಿಂದೂ ವಿವಾಹ ಕಾನೂನಿನಲ್ಲಿ ಇತರ ಸರ್ಕಾರಿ ದಾಖಲೆಗಳಲ್ಲಿ, ಬರಹಗಳಲ್ಲಿ ಜಾರಿಗೆ ಹೊಸದಾಗಿ ತರಲು ಸಾಧ್ಯವೇ? ಜನರ ನಾಲಗೆ ಮೇಲಿನ ಆ ಮಾತನ್ನು ಅಳಿಸಲು ಸಾಧ್ಯವೇ? 'ಬಸವ ಧರ್ಮ' ಎಂಬ ಮಾತೇ ಅತಾರ್ಕಿಕವಾದುದು. ಅಷ್ಟೇ ಅಲ್ಲ ಮುಂದೆ ಕ್ರಮೇಣ ಆ ಮಾತು ಹಾಸ್ಯ ಮಾಡಲು ಬಳಕೆಯಾಗುವ ಅಪಾಯವಿದೆ.

ಈ ಹಿನ್ನೆಲೆಯಲ್ಲಿ ಶ್ರೇಷ್ಠ ಮಾನವತಾವಾದಿ ಬಸವಣ್ಣನವರ ತತ್ವ ಆದರ್ಶಗಳತ್ತ ನಮ್ಮ ಗಮನ ಕೇಂದ್ರೀಕೃತವಾಗಬೇಕೇ ಹೊರತು, ಬರೀ ಪರಿಭಾಷೆಯ ಬದಲಾವಣೆ ಕಡೆ ಅಲ್ಲವೆಂಬುದು ನಮ್ಮ ಸ್ಪಷ್ಟ ನಿಲುವಾಗಿದೆ. ಈಗಿರುವಂತೆ, ವೀರಶೈವ (ಲಿಂಗಾಯತ) ಎಂಬುದರಲ್ಲಿ ಯಾವುದೇ ಸಂಕುಚಿತತೆ, ಅನೌಚಿತ್ಯವಿಲ್ಲವೆಂಬುದನ್ನು ನಾವು ಒತ್ತಿ ಹೇಳಬಯಸುತ್ತೇವೆ.

- ಡಾ. ಎಂ. ಚಿದಾನಂದ ಮೂರ್ತಿ,
ಎಚ್. ಎಂ. ಮರುಳಸಿದ್ದಯ್ಯ
ಬೆಂಗಳೂರು

ಪತ್ರ ವಿಮರ್ಶೆ :

ಪತ್ರದಲ್ಲಿ ಡಾ|| ಚಿ.ಮೂ ಮತ್ತು ಹೆಚ್.ಎಂ.ಎಂ ರವರು ವಿಲಕ್ಷಣವಾಗಿ ಪೀಠಿಕೆ ಹಾಕಿದ್ದಾರೆ. ಈ ಕೆಲವು ವಾದಗಳು ಕೇಳಿ ಬಂದಿದ್ದವು ಎಂದಿದ್ದಾರೆ. ಅದರರ್ಥ ಈಗಿಲ್ಲವೆಂದೇ ಅವರು ಭಾವಿಸಿದ್ದರೆ ಅದು ತಪ್ಪು.

1. ಲಿಂಗಾಯತವೇ ಬೇರೆ ವೀರಶೈವವೇ ಬೇರೆ

ಲಿಂಗಾಯತವು ಒಂದು ಸ್ವತಂತ್ರ ಧರ್ಮ, ಪ್ರಗತಿಪರ ಧರ್ಮ, ಪರಿಪೂರ್ಣ ಧರ್ಮ. ವೀರಶೈವವು 'ಶೈವ' ದೊಳಗಣ ಒಂದು ಶಾಖೆ ಮಾತ್ರ, ಒಂದು ಪಂಥ (Cult)

ಈ ಲಿಂಗಾಯತವು ಶರಣ ಧರ್ಮವೂ ಅಹುದು. ಏಕೆಂದರೆ ಬಸವಣ್ಣನವರೇ ಆದಿ ಪ್ರಮಥರಾಗಿ ಅಸಂಖ್ಯಾತ ಶರಣರು ಪೋಷಿಸಿದ ಧರ್ಮ! ಇದು ಬಸವ ಧರ್ಮವೂ ಅಹುದು. ಏಕೆಂದರೆ ಕ್ರಾಂತಿಪುರುಷ ಬಸವಣ್ಣನವರ ಹೃನ್ಮನಮತಿಗಳಲ್ಲಿ ಜನ್ಮ ತಳೆದ ಧರ್ಮ. ಇದಕ್ಕೆ ಇನ್ನೊಂದು ಹೆಸರು ಕೊಡಬಹುದು ವಚನ ಧರ್ಮ ಎಂದು. ಏಕೆಂದರೆ ವಚನ ಶಾಸ್ತ್ರದ ಮೂಲಕ ಅಭಿವ್ಯಕ್ತವಾಗುವ ಧರ್ಮ !

2. 'ವೀರಶೈವ' ಅಥವಾ 'ಲಿಂಗಾಯತ'ವು ಒಬ್ಬ ನಿರ್ದಿಷ್ಟ ವ್ಯಕ್ತಿಯಿಂದ ಸ್ಥಾಪನೆಗೊಂಡಿಲ್ಲ. ಅದರ ಸ್ಥಾಪಕ ಯಾರೋ ತಿಳಿಯದು- ಚಿ.ಮೂ ಉವಾಚ.

★ ಜನ್ಮದಾತ, ದಿಕ್ಕುದೆಸೆ ಇಲ್ಲದ ಪರಿಸ್ಥಿತಿ ವೀರಶೈವಕ್ಕೆ ಇರಬಹುದೇನೋ! ಆದರೆ ಲಿಂಗಾಯತಕ್ಕೆ ಸ್ಥಾಪಕರು ಬಸವಣ್ಣನವರು. ಆದ್ದರಿಂದ ವೀರಶೈವ ಮತ್ತು ಲಿಂಗಾಯತಗಳನ್ನು ಸಮೀಕರಿಸಿ ಮಾತನಾಡಿ ಜನರ ಮನಸ್ಸಿನಲ್ಲಿ ಗೊಂದಲ ಎಬ್ಬಿಸುವ ಅಗತ್ಯವೇನಿಲ್ಲ.

3. ಬಸವಣ್ಣನವರು ಹುಟ್ಟಿನಿಂದ ಶೈವ ಬ್ರಾಹ್ಮಣರು. ನಂತರ ಲಿಂಗಾಯತ ಧರ್ಮ ಕೊಟ್ಟರು. ಅವರು ವೀರಶೈವರಾಗಲಿಲ್ಲ. ಪಂಚಾಚಾರ್ಯ ಸ್ವಾಮಿಗಳು ಜಾತವೇದ ಮುನಿಗಳಿಂದ ಬಸವಣ್ಣನವರು ವೀರಶೈವ ದೀಕ್ಷೆ ಪಡೆದರು ಎಂದು ಸುಳ್ಳಿನ ಕಥೆಗಳನ್ನು ಹೆಣೆದರು. ಲೌಕಿಕ ಯಾವ ಗುರುವಿನಿಂದಲೂ ಬಸವಣ್ಣನವರು (ವೀರಶೈವ) ದೀಕ್ಷೆ ಪಡೆದಿಲ್ಲ. ಪಂಚ ಪೀಠದ ಸ್ವಾಮಿಗಳು ಬಸವಣ್ಣನವರು ಜಾತವೇದ ಮುನಿಗಳಿಂದ ದೀಕ್ಷೆ ಪಡೆದರು ಎಂದರೆ, ಚಿ.ಮೂ. ಅವರು ಕೂಡಲ ಸಂಗಯ್ಯ ಎಂಬ ಗುರುವಿನಿಂದ ಪಡೆದರು ಎನ್ನುತ್ತಾರೆ. ಇವರಲ್ಲೇ ಒಮ್ಮತವಿಲ್ಲ. ಚಿ.ಮೂ. ಅವರ ಅಪ್ರಾಮಾಣಿಕತೆಗೆ ಎಲ್ಲೆಯೇ ಇಲ್ಲ. "ತಮಗೆ ಯಾರೂ ಗುರುವಿಲ್ಲ ಎನಗೆ ಗುರುಪಥವ ತೋರಿದವರಾರು, ಲಿಂಗ ಪಥವ ತೋರಿದವರಾರು? ತೋರುವ ಮನವೇ ನೀವೆಂದರಿದೆ" ಎಂದು ನುಡಿದ ಬಸವಣ್ಣನವರು ತಮ್ಮ ಅಂತರ್ಮನವೇ ಗುರುವಾಯಿತು ಎಂದರು. "ಲಿಂಗದೇವಾ (ಕೂಡಲ ಸಂಗಮದೇವಾ) ನೀನೆನಗೆ ಜ್ಞಾನಗುರು" ಎಂದ ಪದವನ್ನು ದ್ವಂದ್ವಾರ್ಥದಲ್ಲಿ ಬಳಸುವ ಚಿದಾನಂದ ಮೂರ್ತಿಯವರ ಅಪ್ರಾಮಾಣಿಕತೆ ಖಂಡನಾರ್ಹ. ಕೂಡಲ ಸಂಗಮದೇವಾ ಎಂಬುದು ಒಮ್ಮೆ ಗುರುವಿನ ಹೆಸರು ಎನ್ನುತ್ತಾರೆ, ಇನ್ನೊಮ್ಮೆ ಇಷ್ಟಲಿಂಗದ ಹೆಸರು ಎಂದು ಬರೆಯುತ್ತಾರೆ. ಜಗದಗಲ ಮುಗಿಲಗಲ ವಚನದಲ್ಲಿ "ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಿ" ಎನ್ನುವರು. ಗುರುವು

ಚುಳುಕಾಗಿ ಬರುವನೆ ? ತತ್ತ್ವಜ್ಞಾನ (Philosophy - metaphysics) ಮತ್ತು ದರ್ಶನ ಶಾಸ್ತ್ರ (Mysticism) ಇವುಗಳ ಹಿನ್ನಲೆಯೇ ಇಲ್ಲದ ಚಿ.ಮೂ ಬರೆಯುವುದು ನೋಡಿದರೆ ಅವರ ಅಜ್ಞಾನಕ್ಕೆ ಮೈಪರಿಚಿಕೊಳ್ಳುವಂತೆ ಆಗುತ್ತದೆ.

4. ಕೊಂಡಗುಳಿ ಕೇಶಿರಾಜ ವೀರಶೈವನಾಗಿದ್ದ ಎನ್ನುವರು. ಯಾರು ಇಲ್ಲವೆನ್ನುವರು ? ವೀರಶೈವರು ಬೇಕಾದಷ್ಟು ಜನ ಇರಬಹುದು. ಅಕ್ಕಮಹಾದೇವಿಯ ತಾಯಿತಂದೆ ಶೈವದಿಂದ ವೀರಶೈವ, ವೀರಶೈವದಿಂದ ಲಿಂಗಾಯತರಾಗಿದ್ದರು. ಕೇವಲ ವೀರಶೈವರಷ್ಟೇ ಅಲ್ಲ ಪಾಶುಪತರು, ಲಾಕುಲೀಶರು, ಕಾಳಾ ಮುಖರು ಮುಂತಾದ ಶೈವ ಪಂಥಗಳವರು ಮತ್ತು ವಿವಿಧ ವರ್ಣ, ಜಾತಿ ಉದ್ಯೋಗಗಳವರು ಬಸವ ಪ್ರಣೀತ ಲಿಂಗಾಯತಕ್ಕೆ ಸೇರಿದ್ದಾರೆ.

5. "ಈಗ ಬಳಕೆಯಲ್ಲಿರುವಂತೆ 'ವೀರಶೈವ' 'ಲಿಂಗಾಯತ' ಇವೆರಡೂ ಸಮಾನಾರ್ಥಗಳು. ಹೀಗಿರುವಾಗ ಪರಂಪರೆಯ ಬೆಂಬಲವಿರುವ, ಜನತೆ ಆ ಪದಗಳನ್ನು ಒಪ್ಪಿರುವಾಗ ಅವುಗಳ ಜಾಗದಲ್ಲಿ ಬಸವ ಧರ್ಮ ಎಂಬುದನ್ನು ತರಲು ಯತ್ನಿಸಿದರೆ ಉಂಟಾಗುವ ಗೊಂದಲ, ಲಿಂಗಾಯತ ಸಮಾಜದಲ್ಲಿ ಉಂಟಾಗುವ ಬಿರುಕು, ಅದರ ಪರಿಣಾಮ ಅನೂಹ್ಯವಾದುವು" ಎಂದಿದ್ದಾರೆ ಚಿ.ಮೂ.

★ ಒಂದೇ ಒಂದು ಶತಮಾನದ ಹಿಂದೆ ಸಮಾಜದಲ್ಲಿ ವೀರಶೈವ ಪದ ಬಳಕೆಯಲ್ಲಿ ಇರಲಿಲ್ಲ. ಇಂದಿಗೂ ಹಳ್ಳಿಗಳಲ್ಲಿ ಕೇಳಿದರೂ ಲಿಂಗಾಯತ ಪದವೇ ಬಳಕೆಯಲ್ಲಿದೆ. ವೀರಶೈವ ಮಹಾಸಭೆಯಿಂದ, ಪಂಚ ಪೀಠಾಧೀಶರಿಂದ ಈ ವೀರಶೈವ ಪದವು ಕೃತಕವಾಗಿ ಲಿಂಗಾಯತ ಸಮಾಜದಲ್ಲಿ ಪ್ರಚಾರಗೊಂಡಿತು. ಮೊದಲಿಗೆ, ಮೂಢರಾದ ಭಕ್ತವರ್ಗಕ್ಕೆ ಒಳಸಂಚು ತಿಳಿಯಲಿಲ್ಲ. 'ಜಂಗಮ' ಜಾತಿಯನ್ನು ಹುಟ್ಟುಹಾಕಿ ಬಲಪಡಿಸಲು ವೀರಶೈವ ಪದವು ನೆರವಾಗುವುದೆಂದು (ಆಂಧ್ರ ವೀರಶೈವದಲ್ಲಿ ಲಿಂಗೀ ಬ್ರಾಹ್ಮಣನು, ಗೃಹಸ್ಥನಿದ್ದರೆ ಅವನನ್ನು ಮಾಹೇಶ್ವರನೆಂದು, ಸನ್ಯಾಸಿ ಇದ್ದರೆ ಜಂಗಮನೆಂದು ಕರೆಯಲಾಗುತ್ತಿತ್ತು) ಹಾನಗಲ್ ಕುಮಾರ ಸ್ವಾಮಿಗಳು, ಪಂಚಪೀಠಾಧೀಶರು 'ವೀರಶೈವ' ಪದಪ್ರಿಯರು ಆಗಿದ್ದಾರೆ. ಆದ್ದರಿಂದ ವೀರಶೈವ ಮತ್ತು ಲಿಂಗಾಯತ ಸ್ಪಷ್ಟವಾಗಿ ಬೇರೆ ಎಂಬ ಜ್ಞಾನವು ಜನರಿಗೆ ಆಗುವುದು ಒಳ್ಳೆಯದು. ಹಾಗೆಯೇ ಪಂಚಪೀಠಾಧೀಶರು ವೀರಶೈವರೇ ವಿನಾ ಲಿಂಗಾಯತ ಧರ್ಮೀಯರ ಗುರುಗಳಲ್ಲ ಎಂಬುದೂ ಜನರಿಗೆ ತಿಳಿಯಬೇಕು ಇಲ್ಲದಿದ್ದರೆ ಪಂಚಪೀಠಾಧೀಶರ ಪಟ್ಟೆ ಪೀತಾಂಬರ, ಆಭರಣ ಧಾರಣೆ, ಅಡ್ಡ ಪಲ್ಲಕ್ಕಿ, ವಜ್ರದುಂಗುರಗಳ ಮಿಂಚು, ದಸರಾ ದರ್ಬಾರ್‌ಗಳ ಪರಿಭಾಷೆ - ಇವು ಲಿಂಗಾಯತ (ಬಸವ) ಧರ್ಮದ ಆಚರಣೆಗಳೆಂದು ತಿಳಿದು ಪ್ರಜ್ಞಾವಂತ ಲಿಂಗಾಯತರು ತಮ್ಮ ಧರ್ಮದ ಬಗ್ಗೆ ಉದಾಸೀನ ತಾಳಿದರೆ, ವಿಚಾರಶೀಲ ಲಿಂಗಾಯತೇತರರು ತಿರಸ್ಕಾರ ತಾಳುವರು. ಹೀಗಾಗಿ ಲಿಂಗಾಯತ ಧರ್ಮಕ್ಕೆ ಸಂಬಂಧವಿಲ್ಲದವರ ಆಚರಣೆಯಿಂದ ಈ ಧರ್ಮಕ್ಕೆ ಏಕೆ ಕಳಂಕ ತಟ್ಟಬೇಕು ?!

ಲಿಂಗಾಯತ ಪದದ ತಂಟೆಗೆ ಬರದೆ ವೀರಶೈವಕ್ಕೆ ಕಚ್ಚಿಕೊಂಡಿದ್ದ ಜಿಗಣೆಗಳು ಈಗ ಲಿಂಗಾಯತ ಪದಕ್ಕೆ ಕಚ್ಚಿಕೊಳ್ಳ ತೊಡಗಿದ್ದಾರೆ. ಹೀಗಾಗಿ ಈ ಜಿಗಣೆಗಳ ಹಿಡಿತ ಬಿಡಿಸಿಕೊಳ್ಳಲು ಬಸವ ತತ್ತ್ವವಾದಿ ಲಿಂಗಾಯತರು ಮತ್ತು ಡಾ|| ದೇಜಗೌರಂತಹ ವಿಚಾರಶೀಲ ಲಿಂಗಾಯತೇತರರು 'ಬಸವ ಧರ್ಮ' ಎಂಬ ಪದದತ್ತ ಒಲವು ತೋರಿದ್ದಾರೆ. ಧರ್ಮಕ್ಕೆ ಬಸವ ಧರ್ಮ ಎಂದು,

ಅನುಯಾಯಿಗೆ ಬಸವ ಧರ್ಮಿ, ಬಸವಾಯತ ಎಂದು ಕರೆದುಕೊಂಡರೆ ಮಾರ್ಗವು ಸ್ಪಷ್ಟವಾಗುವುದು, ಗೊಂದಲಗಳು ನಿವಾರಣೆಯಾಗುವುವು. ಆಚರಣೆಗೆ ಶುದ್ಧಿಯಾಗುವುದು. ವಚನೇತರ ಸಾಹಿತ್ಯ ಓದಿ ನವಗ್ರಹ ಪೂಜೆಗೆ, ಬಹುದೇವತೋಪಾಸನೆ, ಜಾತೀಯತೆಗೆ ಪಕ್ಕಾಗಿರುವ ಲಿಂಗಾಯತರು ವಚನ ಸಾಹಿತ್ಯಕ್ಕೆ ಬದ್ಧರಾಗುವ ಅನಿವಾರ್ಯತೆ ಉಂಟಾಗುವುದು. ಬಿರುಕು ಮೂಡುವುದು ಸಹಜ, ಆದರೆ ಅದು ವಿಧಾಯಕ ಮತ್ತು ರಚನಾತ್ಮಕವಾಗಿರುವುದು. ಈಗ ನೂರಾರು ಒಳಪಂಗಡಗಳಿಂದ ಜರ್ಜರಿತವಾಗಿರುವ ಸಮಾಜ ಆಗ ಎರಡೇ ವಿಭಾಗಗಳಾಗಿ ಧ್ರುವೀಕರಣ ಹೊಂದುವುದು; ಒಂದು ಶುಚಿಯಾದ ತಾತ್ತ್ವಿಕ ಶುದ್ಧಿಯಿಂದ ಕೂಡಿದ ಸಮಾಜವು ರೂಪುಗೊಳ್ಳುವುದು. ಇದಕ್ಕೇಕೆ ಚಿ.ಮೂ. ಭಯಪಡಬೇಕು. ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣಾ ಅವರು ಕರೀಂಲಾಲ್ ವಿಚಾರಣೆಯನ್ನು ಸಿ.ಬಿ.ಐ.ಗೆ ವಹಿಸಲು ಭಯಪಡುವಂತೆ ?!

6. 'ಬಸವ ಧರ್ಮ' ಮಾತನ್ನು ಹಿಂದೂ ವಿವಾಹ ಕಾನೂನಿನಲ್ಲಿ, ಇತರ ಸರ್ಕಾರಿ ದಾಖಲೆಗಳಲ್ಲಿ, ಬರಹಗಳಲ್ಲಿ, ಜಾರಿಗೆ ಹೊಸದಾಗಿ ತರಲು ಸಾಧ್ಯವೆ? ಎಂದು ಚಿ.ಮೂ. ಅವರ ಪ್ರಶ್ನೆ

★ ಏಕೆ ಸಾಧ್ಯವಿಲ್ಲ? ಬೌದ್ಧ ಧರ್ಮ ದೇಶದಿಂದ ಓಡಿಸಲ್ಪಟ್ಟಿತ್ತು. ಡಾ|| ಅಂಬೇಡ್ಕರ್ ಸ್ವೀಕರಿಸಿದ ನಂತರ ಬೌದ್ಧ ಧರ್ಮಕ್ಕೆ ಮಹತ್ವ ಸಿಕ್ಕಿತು. ಈಗ ಎಲ್ಲೆಡೆ ದಾಖಲೆಯಾಗಿಲ್ಲವೆ ? ಬಸವಾಯತರು ಪ್ರಜ್ಞಾವಂತರಾದರೆ 800 ವರ್ಷಗಳಲ್ಲಿ ಸಾಧಿಸದಿರುವುದನ್ನು 10 ವರ್ಷಗಳಲ್ಲಿ ಸಾಧಿಸಲು ಸಾಧ್ಯವಿದೆ. ವೀರಶೈವದ ಜೊತೆ ಸೇರಿ ಮುದಿಗೂಬೆಯಂತೆ ಮುಲುಗುವ ಬದಲು ಬಸವ ಧರ್ಮವು ಸ್ವತಂತ್ರ ಧರ್ಮದ ನವಿಲಾಗಿ ನರ್ತಿಸುವುದು ಒಳ್ಳೆಯದು.

7. "ಬಸವ ಧರ್ಮ' ಎಂಬ ಮಾತೇ ಅತಾರ್ಕಿಕವಾದುದು. ಅಷ್ಟೇ ಅಲ್ಲ ಮುಂದೆ ಕ್ರಮೇಣ ಆ ಮಾತು ಹಾಸ್ಯ ಮಾಡಲು ಬಳಕೆಯಾಗುವ ಅಪಾಯವಿದೆ". ಇದು ಚಿ. ಮೂ. ರ ಅತಾರ್ಕಿಕ ಬೆದರಿಕೆಯ ಮಾತು.

★ ಗುಮ್ಮನ ವಿಷಯ ಹೇಳಿ ಸಣ್ಣ ಮಗುವನ್ನು ಬೆದರಿಸುವಂತೆ ಚಿ.ಮೂ. ರ ಮಾತು. ಏಸುಕ್ರಿಸ್ತರಿಂದ ಕ್ರೈಸ್ತ ಧರ್ಮ, ಬುದ್ಧನಿಂದ ಬೌದ್ಧ ಧರ್ಮ ಉಗಮವಾದಂತೆ ಬಸವ ಗುರುವಿನಿಂದ ಬಸವ ಧರ್ಮ ಬಂದಿದೆ ಎನ್ನುವುದರಿಂದ ಯಾವ ಅತಾರ್ಕಿಕತೆಯೂ ಇರದು, ಯಾರೂ ಅಪಹಾಸ್ಯ ಮಾಡರು. ನಾಲ್ಕು ಕಾಲು, ಎರಡು ಕೊಂಬು, ಒಂದು ಬಾಲದ ಎತ್ತನ್ನು ಬಸವಣ್ಣ ಎಂದು ಪೂಜಿಸುವ ಲಿಂಗಾಯತರು ಇಂದು ಅಪಹಾಸ್ಯದ ವಸ್ತುವಾಗಿದ್ದಾರೆ. ಇವರೆಲ್ಲರು ನಾವು ದನದ ಸಂತತಿಯವರಲ್ಲ, ಕ್ರಾಂತಿಪುರುಷ ಬಸವಣ್ಣನವರ ಸಂತತಿ (ಬಾಹೂರ ಬ್ರಹ್ಮಯ್ಯ ಎಂಬ ಶರಣ ಹೇಳುವಂತೆ) ಎಂದು ತಿಳಿದು, ತತ್ತ್ವದ ದಾರಿಯಲ್ಲಿ ನಡೆದರೆ ಪೂಜ್ಯ ಗಾಂಧೀಜಿ ಹೇಳುವಂತೆ ಇಡೀ ಕರ್ನಾಟಕ, ಭಾರತವನ್ನೇಕೆ ಜಗತ್ತನ್ನೇ ಉದ್ಧರಿಸಬಲ್ಲರು ಮತ್ತು ಜಗತ್ತಿನಲ್ಲೇ ಪ್ರಜ್ಞಾವಂತ ಜನಾಂಗ ಎಂಬ ಹೊಗಳಿಕೆಗೆ ಪಾತ್ರರಾಗುವರು. ಆದ್ದರಿಂದ ಚಿ.ಮೂ.ರ ಬಾಲಿಶ ಬೆದರಿಕೆಗೆ ಹೆದರಬೇಕಾಗಿಲ್ಲ. ಲಿಂಗಾಯತರ ಆಚರಣೆ ಶುದ್ಧವಾಗಬೇಕಾದರೆ ಬಸವ ಧರ್ಮ ಎಂಬ ಹೆಸರನ್ನು ಈ ಧರ್ಮಕ್ಕೆ ಇಡುವುದೊಂದೇ ಪರಿಹಾರ.

8. "ಶ್ರೇಷ್ಠ ಮಾನವತಾವಾದಿ ಬಸವಣ್ಣನವರ ತತ್ತ್ವ ಆದರ್ಶಗಳತ್ತ ನಮ್ಮ ಗಮನ

ಕೇಂದ್ರೀಕೃತವಾಗಬೇಕೇ ಹೊರತು ಬರೀ ಪರಿಭಾಷೆಯ ಬದಲಾವಣೆ ಕಡೆ ಅಲ್ಲವೆಂಬುದು ನಮ್ಮ ಸ್ಪಷ್ಟ ನಿಲುವಾಗಿದೆ. ಈಗಿರುವಂತೆ, ವೀರಶೈವ (ಲಿಂಗಾಯತ) ಎಂಬುದರಲ್ಲಿ ಯಾವುದೇ ಸಂಕುಚಿತತೆ, ಅನೌಚಿತ್ಯವಿಲ್ಲವೆಂಬುದನ್ನು ನಾವು ಒತ್ತಿ ಹೇಳಬಯಸುತ್ತೇವೆ" ಎಂದಿದ್ದಾರೆ ಚಿ.ಮೂ.

★ ವೀರಶೈವವು ಅತ್ಯಂತ ಸಂಕುಚಿತ ವಿಚಾರದ, ಮತಾಂಧ ಪಂಥ. ಇದರ ಪ್ರತಿರೂಪವೇ ಪಂಚಾಪೀಠಾಧೀಶರು. ಇವರ ಆಚರಣೆ ನೋಡಿದರೆ ಬಸವ ಧರ್ಮಕ್ಕೆ ಎಳ್ಳಷ್ಟೂ ಹೋಲಿಕೆ ಇಲ್ಲ. ಇವರು ವೇದಾಗಮ ಶಾಸ್ತ್ರ ಮೋಹಿಗಳು. ಬಸವ ಧರ್ಮವು ಶಾಸ್ತ್ರ ದಾಸ್ಯಕ್ಕೆ ವಿರುದ್ಧವಾಗಿ ನಿಂತು ಸಮಾನತೆ- ಸರಳತೆ ಬೋಧಿಸುವ ಪ್ರಗತಿಪರ ಧರ್ಮ. ಈ ವ್ಯತ್ಯಾಸ ಸ್ಪಷ್ಟವಾಗಿ ಗೊತ್ತಾಗಿ ಬಸವಣ್ಣನವರ ತತ್ತ್ವ ಆದರ್ಶಗಳ ಕಡೆಗೆ ಗಮನ ಕೊಡಬೇಕು ಎನ್ನುವುದಾದರೆ ಮೊದಲು ಪಾರಿಭಾಷಿಕ ಶುದ್ಧ ಅತ್ಯಗತ್ಯ ಎಂದೇ ನಮ್ಮ ಸ್ಪಷ್ಟ ಅಭಿಪ್ರಾಯ !!

★★★

ಆರ್ಥಿಕ ನೆರವಿಗಾಗಿ ಕಳಕಳಿಯ ಕೋರಿಕೆ

ಶರಣ ಬಂಧುಗಳೇ,

ಕೂಡಲ ಸಂಗಮದ ಬಸವ ಧರ್ಮ ಪೀಠದ ಯೋಜನೆಗಳೇ ಇನ್ನು ಮುಗಿಯದೆ ಇರುವಾಗ ಧರ್ಮಪಿತ ಬಸವಣ್ಣನವರ ಪ್ರೇರಣೆ ಮತ್ತು ಹಲವಾರು ಶರಣ ಬಂಧುಗಳ ಒತ್ತಡದಿಂದ ಬಸವ ಕಲ್ಯಾಣದಲ್ಲಿ ಜಾಗವನ್ನು ಖರೀದಿಸಬೇಕಾಯಿತು. ದಿ. 21-12-2001 ರಂದು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ 3 ಎಕರೆ ಕೊಂಡುಕೊಂಡೆವು. (ಓರ್ವ ಶ್ರೀಗಳ ಪ್ರಚೋದನೆಯಿಂದ ಒಬ್ಬ ಅನಾಮಿಕ ವ್ಯಕ್ತಿಯು ಕರೀಂಲಾಲನ ಛಾಪಾ ಕಾಗದದ ಮೇಲೆ ಒಂದು ಫೋರ್ಜರಿ ಸಹಿ ಮಾಡಿದ ದಾಖಲೆ ಸಿದ್ಧಪಡಿಸಿ ಕೋರ್ಟಿಗೆ ಹೋಗಿ ವಿಪರೀತ ಕಿರುಕುಳ ಉಂಟುಮಾಡಿದ. ನಮಗೆ ಜಮೀನು ಮಾರಿದ್ದ ಶ್ರೀ ಶ್ಯಾಮರಾವ ಕಟ್ಟಿಯವರು ಅದು ಫೋರ್ಜರಿ ದಾಖಲೆ ಎಂದು ಪೋಲೀಸ್ ಕಂಪ್ಲೆಂಟ್ ಕೊಟ್ಟಿದ್ದರು.

ಹೈಕೋರ್ಟಿನಲ್ಲಿ ಆ ದಾಖಲೆ ಖೋಟಾ ಎಂದು ಸಿದ್ಧವಾಗಿ, ನಮ್ಮದೇ ಅಧಿಕೃತ ಖರೀದಿ ಎಂದು ತೀರ್ಪಾಯಿತೆಂದು ನಿಮಗೆ ತಿಳಿಸಲು ಹರ್ಷವೆನಿಸುತ್ತದೆ. ನಮ್ಮ ಮುಂದಿನ ವಿಸ್ತೃತ ಯೋಜನೆಗಳಿಗೆ 3 ಎಕರೆ ಸಾಲದೆಂದು 1-6-2002 ರಂದು 13.5 (ಹದಿಮೂರೂವರೆ) ಎಕರೆ ಖರೀದಿಸಲಾಯಿತು. ವಿಶ್ವಗುರು ಬಸವಣ್ಣನವರ 63 ಅಡಿ ಎತ್ತರದ ಪುತ್ಥಳಿ ನಿರ್ಮಿಸಲು ಬೇಕಾದ ಸ್ಥಳವೆಂದು ಆ ಜಾಗವನ್ನು ಆಯ್ಕೆ ಮಾಡಲಾಯಿತು. ಇವೆರಡರ ಮಧ್ಯೆ 4 ಎಕರೆ ಉಳಿದಿತ್ತು. ಸಮತಟ್ಟಾದ ಜಾಗ ಅದೊಂದೇ ಇದ್ದು ಕಲ್ಯಾಣ ಪರ್ವಕ್ಕೆ ಅಲ್ಲೇ ಊಟ ಮತ್ತು ವಸತಿಯ ವ್ಯವಸ್ಥೆ ಮಾಡಿದ್ದಿತ್ತು. ಅದನ್ನೂ ತೆಗೆದುಕೊಂಡರೆ ಸಂಪೂರ್ಣವಾಗಿ ನಮ್ಮದೇ ಒಂದು ಆವರಣ (Campus) ಆಗುವುದೆಂದು ಇದೇ ವರ್ಷದ ಮೇ ತಿಂಗಳಲ್ಲಿ, ಕಲ್ಯಾಣ ಪರ್ವದ ನಂತರ ಆ ಜಾಗವನ್ನೂ ಖರೀದಿಸಲಾಯಿತು. ಮೊಟ್ಟ ಮೊದಲಿಗೆ ಖರೀದಿಸಿದ ಜಮೀನಿನ ಮಾಲಿಕರಿಗೆ ನಾವು ಯಾರು ಎಂದೇ ಗೊತ್ತಿಲ್ಲದ್ದರಿಂದ

ಪೂರ್ಣ ಹಣಕ್ಕೆ ಪಟ್ಟು ಹಿಡಿದಿದ್ದರು. ಆದರೆ ಎರಡನೆಯ ಬಾರಿ ಖರೀದಿಸಿದಾಗ ಜಮೀನಿನ ಮಾಲಿಕರಾದ ಶ್ರೀ ಸಂಜಯ ಶ್ರೀವಾತ್ಸವ್ ನೊಂದಣಿ ಮಾಡುವಾಗ ಸ್ವಲ್ಪ ಪಡೆದು ನಂತರ ಕಂತಿನಲ್ಲಿ ಉಳಿದ ಹಣ ಪಡೆಯುತ್ತಿದ್ದಾರೆ. ಅದೇ ರೀತಿ ಮೂರನೆಯ ಬಾರಿ ಖರೀದಿಸಿದಾಗಲೂ ಜಮೀನಿನ ಮಾಲೀಕರಾದ ಶ್ರೀ ವೇದಪಾಲ ಪಾಂಡೆಯವರು ನೋಂದಣಿ ಸಮಯದಲ್ಲಿ ಸ್ವಲ್ಪ ಪಡೆದು ನಂತರ ಕಂತಿನಲ್ಲಿ ಪಡೆಯುತ್ತಿದ್ದಾರೆ.

ಅವರುಗಳಿಗೆ ಕೊಡಬೇಕಾದ ಹಣದ ಅಗತ್ಯವಿದೆ. ಈ ಮೊದಲಿನ ಖರೀದಿಗೂ ಬಹಳಷ್ಟು ಹಣವನ್ನು ಸಾಲವಾಗಿಯೇ ಪಡೆಯಲಾಗಿದೆ. ಕೆಲವರು ಬಡ್ಡಿಯಿಲ್ಲದ ಸಾಲ ಕೊಟ್ಟಿದ್ದಾರೆ. ಮತ್ತೆ ಕೆಲವರು ಬಡ್ಡಿಯೊಡನೆ ಸಾಲ ಕೊಟ್ಟಿದ್ದಾರೆ. ಕೆಲವು ಶರಣ ಬಂಧುಗಳು ತಾವು ಕೊಟ್ಟ ಸಾಲವನ್ನು ಅದನ್ನು ಬಸವ ಕಲ್ಯಾಣದಲ್ಲಿ ವಸತಿ ಗೃಹ ಕಟ್ಟಿಸಲು, ಅದರಲ್ಲಿ ರೂಂಗೆ ತಮ್ಮ ಹೆಸರು ಹಾಕಲು ಸೂಚಿಸಿದ್ದಾರೆ. ಬಡ್ಡಿ ಸಹಿತವಾಗಿರುವ ಸಾಲವನ್ನು ಬೇಗನೆ ತೀರಿಸಿದಷ್ಟೂ ಒಳ್ಳೆಯದು. ಪ್ರಾರ್ಥನಾ ಮಂದಿರವೊಂದರ ಅಗತ್ಯವೂ ಬಹಳವಿದೆ. ಈ ಸದ್ಯ ತಗಡಿನ ಷೆಡ್ಡಿನಲ್ಲೇ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ, ವಾರದ ಪ್ರಾರ್ಥನೆ ನಡೆಸಲಾಗುತ್ತಿದೆ. ಬೋರ್, ತೆರೆದ ಭಾವಿ ತೋಡಿಸಲಾಗಿದೆ. ನೀರಿನ ಸಂಗ್ರಹದ ಬೃಹತ್ ತೊಟ್ಟಿ ಕಟ್ಟಿಸಲಾಗಿದೆ. ಒಂದು ಗವಿಯನ್ನು ತೋಡಿಸಲಾಗುತ್ತಿದೆಯಾದರೂ ಹಣದ ಕೊರತೆಯಿಂದ ಸ್ಥಗಿತಗೊಳಿಸಲಾಗಿದೆ.

ಹಣವು ಸಂಗ್ರಹವಾದ ಮೇಲೆಯೇ ಜಮೀನು ಖರೀದಿಸಬೇಕು. ಕೆಲಸ ಶುರು ಮಾಡಬೇಕು ಎಂದು ಕಾಯ್ದಿದ್ದರೆ ಏನೂ ಆಗುತ್ತಿರಲಿಲ್ಲ. ಅದಕ್ಕಾಗಿ ಸಾಲಪಡೆದು ಜಮೀನು ಖರೀದಿಸಿದ್ದಲ್ಲದೆ, ಕೆಲಸ ಪ್ರಾರಂಭಿಸಲಾಗಿದೆ. ಆದ್ದರಿಂದ ಶರಣ ಬಂಧುಗಳ ನೆರವು ಈಗ ಅತ್ಯಗತ್ಯವಾಗಿ ಬೇಕಾಗಿದೆ. ವಿವಿಧ ಯೋಜನೆಗಳಿಗೆ ಅಂದರೆ

1. ನಿತ್ಯ ದಾಸೋಹ ನಿಧಿ 2. ಪೂಜಾ ನಿಧಿ 3. ಕಲ್ಯಾಣ ಪರ್ವ ದಾಸೋಹ ನಿಧಿ 4. ಕೋಣೆ ಕಟ್ಟಿಸುವಿಕೆ ಮುಂತಾದ ನಿರ್ದಿಷ್ಟ ಯೋಜನೆಗಳಿಗೆ ಮಾತ್ರವಲ್ಲದೆ ಕಟ್ಟಡ ನಿಧಿಗೆ ಮತ್ತು ಗುರುಕಾಣಿಕೆ, ಮುಡಿಪು ಕೊಡುವ ಮೂಲಕ ಶರಣ ಬಂಧುಗಳು ನೆರವಿಗೆ ಬರಬೇಕೆಂದು ಕೋರುತ್ತೇವೆ.

ಶರಣ ಬಂಧುಗಳು ಸರಳವಾದ ಜೀವನ ವಿಧಾನ ಅಳವಡಿಸಿಕೊಂಡು, ಖರ್ಚುಗಳನ್ನು ಮಿತಗೊಳಿಸಿ, ಖರ್ಚುಗಳಲ್ಲಿ ಉಳಿತಾಯ ಮಾಡುತ್ತ ಬಸವ ಕಲ್ಯಾಣದ ಪುನರ್ ನಿರ್ಮಾಣವು ತಮ್ಮ ಪವಿತ್ರ ಕರ್ತವ್ಯ ಎಂದು ಭಾವಿಸಿ ಸಂಗ್ರಹಿಸಿದ ಹಣವನ್ನು ಕಾಣಿಕೆ ರೂಪದಲ್ಲಿ ಕೊಡಬೇಕು. ಶರಣ ಮೇಳಕ್ಕೆ ಬರುವಾಗ ಅಂಥ ಕಾಣಿಕೆಯನ್ನು ತಂದು ಸಲ್ಲಿಸುವಿರಾಗಿ ಆಶಿಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ,
ಕೂಡಲ ಸಂಗಮ- ಬಸವ ಕಲ್ಯಾಣ

ಗುರು - ವಿರಕ್ತರ ಒಗ್ಗೂಡುವಿಕೆ ಸೂಕ್ತವಲ್ಲ

- ಮಾತಾಜಿ

ಪ್ರವಾಸ ಮಾಡುತ್ತ ಹುಬ್ಬಳ್ಳಿ-ಧಾರವಾಡಕ್ಕೆ ಬಂದಾಗ ಒಂದು ಪತ್ರಿಕಾ ಪ್ರಕಟಣೆ ಗಮನಕ್ಕೆ ಬಂದಿತು. ಡಿಸೆಂಬರ್ 30 ರಂದು ಒಂದು ಧಾರ್ಮಿಕ ಸಮಾವೇಶ ಏರ್ಪಡಿಸಿರುವುದಾಗಿಯೂ, ಇದರಲ್ಲಿ ವಿರಕ್ತರೂ ಭಾಗವಹಿಸಬೇಕೆಂದು ಕಾಶಿಯ ಜಗದ್ಗುರುಗಳು ಕರೆ ಕೊಟ್ಟಿದ್ದಲ್ಲದೆ .ಗುರು-ವಿರಕ್ತರು ಒಂದುಗೂಡುವುದು ಅಗತ್ಯವಿದೆ, ಇದರಿಂದ ಸಮಾಜದ ಅಭಿವೃದ್ಧಿಯಾಗುವುದು ಎಂದು ತಿಳಿಸಿದ್ದರು. ಈ ಪಂಚಪೀಠಾಧೀಶರ ವಿಲಕ್ಷಣ ವರ್ತನೆಯೇ ಅರ್ಥವಾಗದು. ''ಬನ್ನಿ ಕೂಡೋಣ'' ಎಂದು ಕರೆಯುವುದು. ಬಂದಾಗ ಅವಮಾನ ಮಾಡುವುದು ಇವರ ಸಹಜ ವರ್ತನೆಯಾಗಿದೆ. ಸಾಮಾನ್ಯವಾಗಿ ವಿರಕ್ತರು ಇಂಥ ಹೇಳಿಕೆ ನೀಡಿಲ್ಲ. ಶಿವೈಕ್ಯ ಮೂರು ಸಾವಿರ ಶ್ರೀಗಳು ಈ ಬಗ್ಗೆ ಕನವರಿಸುತ್ತಿದ್ದರು. ಆದರೆ ಜೂನ್ 1 ಅವರ ಕನವರಿಕೆ ನಿಜವಾಗುವ ಸಮಯದಲ್ಲಿ ಅವರು ಶಿವನ ಪಾದ ಸೇರಿಬಿಟ್ಟರು. ಅವರ ಆಸೆ ಪೂರ್ಣಗೊಳ್ಳಲಿಲ್ಲ.

ಜೂನ್ 1 ಸಮಾವೇಶ ಕೂಡಲಸಂಗಮದಲ್ಲಿ ಆಯಿತು. ಅದು ಗುರು-ವಿರಕ್ತರನ್ನು ಬೆಸೆದು ಒಂದು ಮಾಡುವ ಬದಲು ಮತ್ತಷ್ಟು ಹೋಳು ಮಾಡಿತು. ''ಪ್ರಥಮ ಚುಂಬನಂ ದಂತ ಭಗ್ನಂ'' ಎಂಬಂತೆ ಆ ಸಮಾವೇಶ ಪರಿಣಾಮ ಉಂಟು ಮಾಡಿತು ! ಬಸವಣ್ಣನವರು ವೀರಶೈವಕ್ಕೆ ಮತಾಂತರಗೊಳ್ಳದಿದ್ದರೆ ಅದು ಬದುಕಿ ಉಳಿಯುವ ಸಾಧ್ಯತೆ ಇಲ್ಲ ಎಂಬುದನ್ನು ಗಟ್ಟಿಯಾಗಿ ನಂಬಿರುವ ಪಂಚಪೀಠಾಧೀಶರು, ವೀರಶೈವವಾದಿಗಳು ಬಲವಂತವಾಗಿ ಬಸವಣ್ಣನವರಿಗೆ ದೀಕ್ಷೆ ಕೊಡಲು ಹೋಗುತ್ತಾರೆ. ಚಿಕ್ಕ ಹಾವು ದೊಡ್ಡ ಪ್ರಾಣಿಯನ್ನು ಬಲವಂತವಾಗಿ ನುಂಗಿದರೆ ಅರಗಿಸಿಕೊಳ್ಳದೆ ಒದ್ದಾಡುವಂತೆ ಪ್ರಗತಿಪರ ವಿಚಾರಶೀಲ ಬಸವಣ್ಣನವರನ್ನು ವೀರಶೈವ ಪಂಚಪೀಠಾಧೀಶರು ನುಂಗಲು ಹೋದರೆ ಖಂಡಿತಾ ಜೀರ್ಣಿಸಿಕೊಳ್ಳಲಾರರು. ಆದರೂ ಪ್ರಯತ್ನಬಿಡರು. ಏನೇನೋ ಬಡಬಡಿಸಿದರು. ವಿರಕ್ತರು ಗಂಭೀರ ಮೌನಿಗಳಾಗಿ ತಮ್ಮ 'ಘನತೆ' ಯನ್ನು ಕಾಯ್ದುಕೊಂಡರು. ಪಂಚಪೀಠಾಧೀಶರ ಹೇಳಿಕೆಗೆ ಪ್ರತಿರೋಧ ತೋರಲಿಲ್ಲ. ಸದ್ಯ ನಮ್ಮನ್ನು ಆಹ್ವಾನಿಸಿರಲಿಲ್ಲ; ವೀರಶೈವ ಮಹಾಸಭೆಗೆ ಧನ್ಯವಾದ. ನಾನೇನಾದರೂ ಆಹ್ವಾನಿಸಲ್ಪಟ್ಟು ಅಲ್ಲಿದ್ದಿದ್ದರೆ ಅವರ ಕೆಳಮಟ್ಟದ ಬಸವ ನಿಂದೆಯನ್ನು ಹೇಡಿಯಂತೆ ತಾಳಿಕೊಳ್ಳದೆ ಆಗಲೇ ಉತ್ತರಿಸುತ್ತಿದ್ದೆ, ಪ್ರತಿಭಟಿಸುತ್ತಿದ್ದೆ. ''ಲಿಂಗದೇವ'' ವಚನಾಂಕಿತದಿಂದ ಬಸವಣ್ಣನವರಿಗೆ ಅಪಚಾರವಾಯಿತೆಂದು ಪ್ರಲಾಪಿಸಿದ ಶೂರ ಸ್ವಾಮಿಗಳು ಆದೇಕೆ ಮೌನವಹಿಸಿದ್ದರೊ !

(ಕೆಲವರು ಹೇಳಿದರು, ''ಭೀಮಣ್ಣ ಖಂಡ್ರೆ, ಗೊ.ರು.ಚ. ಮುಂತಾದ ಮುಖಂಡರು, ಯಾರು ಯಾರ ಮಾತನ್ನು ಟೀಕಿಸುವಂತಿಲ್ಲ; ಅವರವರ ಅಭಿಪ್ರಾಯ ಮಾತ್ರ ಮಂಡಿಸಬಹುದು ಎಂದು ಮೊದಲೇ ಕರಾರು ಮಾಡಿದ್ದರು. ಹೀಗಾಗಿ ವಿರಕ್ತರು ಉತ್ತರಿಸಲಿಲ್ಲ'' ಎಂದು. ಇದು ನ್ಯಾಯವೆ ? ಮತ್ತೆ ಕೆಲವರು ಹೇಳಿದರು, ಅನೇಕ ಸ್ವಾಮಿಗಳು ತಮ್ಮ ಭಾಷಣ ಆಗುತ್ತಲೇ ತಮ್ಮ ಹಿಂಬಾಲಕರು ಸಹಿತವಾಗಿ ಎದ್ದು ಹೋಗಿ ಬಿಡುತ್ತಿದ್ದರು. ಹೀಗಾಗಿ ಪಂಚಪೀಠಾಧೀಶರು ನಿರುಮ್ಮಳವಾಗಿ ಬಸವ-ಸ್ತುತಿ ಮಾಡಿದರು ಎಂದು. ಆದರೂ ಸನ್ನಿಧಿ ವಹಿಸಿದ್ದ ವಿರಕ್ತರಾದರೂ

ಇದ್ದಿರಲೇ ಬೇಕಲ್ಲವೆ?)

ಪಂಚಪೀಠಾಧೀಶರ ಮೇಲುಗಾರಿಕೆ ಪ್ರದರ್ಶನ ಈಗಾಗಲೇ ಬೆಳಗಾಂವಿಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ವೃದ್ಧ ಸ್ವಾಮಿಗಳಾದ ಶ್ರೀ ನಾಗನೂರು ಮಠಾಧೀಶರಿಗೆ ಅವಮಾನ ಮಾಡಿ, ಕುರ್ಚಿ ತಳ್ಳುವುದರಲ್ಲಿ ಆಗಿತ್ತು. ಆದರೂ ಭೀಮಣ್ಣ ಖಂಡ್ರೆ 'ಮರಳಿ ಯತ್ನವ' ಮಾಡು ಎಂದು ಕೂಡಲ ಸಂಗಮದಲ್ಲಿ ಜೂನ್ 1 ರಂದು ಗುರು-ವಿರಕ್ತರನ್ನು ಒಂದೇ ವೇದಿಕೆ ಮೇಲೆ ಕೂಡಿಸುವಲ್ಲಿ ಸಂತೋಷ ಕಂಡಿದ್ದರು.

ಇಂಗ್ಲೆಂಡಿನಲ್ಲಿ ತಯಾರಾದ ಒಂದು ನಗೆ ಧಾರಾವಾಹಿ Angry Family ಎಂಬುದು ಅಮೆರಿಕಾದ ಆಸ್ಟಿನ್‌ನ ಟಿ.ವಿ. ಚಾನೆಲ್‌ನಲ್ಲಿ ವಾರಕ್ಕೊಮ್ಮೆ ಬರುತ್ತಿತ್ತು. ನಕ್ಕೂ ನಕ್ಕೂ ಹೊಟ್ಟೆ ಹುಣ್ಣಾಗುತ್ತಿತ್ತು. ರಾಧಿಕಾ ಅದು ಬರುವ ಸಮಯ ನೋಡಿ ನನ್ನನ್ನೂ ನೋಡಲು ಕರೆಯುತ್ತಿದ್ದರು. ಅದರಲ್ಲಿ ಮನೆ ಮಂದಿಯ ಮಧ್ಯೆ ಬರೀ ಕೋಪದ ವಿನಿಮಯ. ಆಗ ಒಮ್ಮೆ ಚರ್ಚಿನ ಪಾದ್ರಿ ಎಲ್ಲರನ್ನೂ ಕರೆಸಿ ಕೌನ್ಸಲಿಂಗ್ (ಸಾಮರಸ್ಯ ಮೂಡಿಸಲು ಪ್ರಯತ್ನ) ಮಾಡುತ್ತಾರೆ. ಮೊದಲಿಗೆ ಇವರೆಲ್ಲರು, 'ನಾವೆಲ್ಲ ಚೆನ್ನಾಗಿದ್ದೇವೆ. ಭಿನ್ನಾಭಿಪ್ರಾಯವಿಲ್ಲ' ಎಂದು ಶ್ರೀಮದ್ ಗಾಂಭೀರ್ಯ ಪ್ರದರ್ಶಿಸುತ್ತಾರೆ. ಬರುಬರುತ್ತ ಅದೆಷ್ಟು ಕೂಗಾಡುತ್ತಾರೆಂದರೆ ಪಾದ್ರಿಯೇ ಹುಚ್ಚನಾಗಿ ಓಡಿ ಬಿಡುವಂತಹ ಸನ್ನಿವೇಶ ನಿರ್ಮಾಣವಾಗುತ್ತದೆ. ಹಾಗೆ ವೀರಶೈವರೂ Angry Family. ಮಂತ್ರಕ್ಕಿಂತ ಉಗುಳೇ ಜಾಸ್ತಿ ಎಂಬಂತೆ, ಗುರು-ವಿರಕ್ತರ ಸಮಾವೇಶಕ್ಕೆ ಖಂಡ್ರೆಯವರು ಪ್ರಚಾರ ಕೊಟ್ಟೇ ಕೊಟ್ಟರು. ಜೂನ್ 1ರ ನಂತರ ಕೈಲಾಸವೇ ಭೂಮಿಗೆ ಇಳಿದು ಬಂದು ಬಿಡಬಹುದೇನೋ ಎಂದು ನಾವೂ ಕಾದಿದ್ದೆವು. ಆದರೆ ಬೆಟ್ಟ ಅಗೆದು ಇಲಿ ತೆಗೆದಂಥ ಪರಿಣಾಮ ಅದೂ ಬಸವ ನಿಂದೆ ಎಂಬ ಸತ್ತ ಇಲಿ.

ಬಸವ ಭಕ್ತರಿಗೆ ಕೋಪ

ಆ ಸಮಾವೇಶದ ಫಲಶ್ರುತಿ ಕಂಡು ಬಸವಾಭಿಮಾನಿಗಳೆಲ್ಲರೂ ಕಾಯ್ದ ಕಲ್ಲಿದ್ದಿಲಿನಂತೆ ತಪ್ತರಾದರು. ಅಂತೂ ಆಗ ಉಂಟಾದ ಕಾವಿನಿಂದ ವಿಶ್ವ ಬಸವ ಧರ್ಮ ಮಹಾಸಭಾ ಹುಟ್ಟಿತು. ಮುಂದೆ ಅದು ಏನನ್ನಾದರೂ ಸಾಧಿಸಲಿ ಬಿಡಲಿ ಕೆಲವು ಬಸವಾಭಿಮಾನಿಗಳನ್ನಾದರೂ ಎಚ್ಚರಿಸಿತು. ಆ ಸಮಾವೇಶದ ಕಹಿ ಒಂದು ಚೂರು ಮರೆಯುವಷ್ಟರಲ್ಲಿ ಮತ್ತೆ ಧಾರವಾಡದಲ್ಲಿ ಕಾಶಿ ಶ್ರೀಗಳಿಂದ ವಿರಕ್ತರಿಗೆ ಪ್ರೇಮದ ಆಹ್ವಾನ!

ಪತ್ರಿಕೆಯಲ್ಲಿ ಓದಿ ನನಗೂ ತಳಮಳವೆನ್ನಿಸಿ ನೇರವಾಗಿ ಪತ್ರಿಕಾ ಹೇಳಿಕೆಗಳನ್ನು ಬಾಗಲಕೋಟೆ, ಹುಬ್ಬಳ್ಳಿಯಲ್ಲಿ ಪತ್ರಿಕಾ ಗೋಷ್ಠಿ ಕರೆದು, "ಗುರು-ವಿರಕ್ತ ಒಗ್ಗೂಡುವುದು ಸೂಕ್ತವಲ್ಲ" ಎಂಬ ಹೇಳಿಕೆ ಕೊಟ್ಟೆ. ದಾವಣಗೆರೆಯಲ್ಲಿ ನಡೆದ ರಾಷ್ಟ್ರೀಯ ಬಸವ ದಳದ ವಾರ್ಷಿಕೋತ್ಸವದಲ್ಲೂ ಹೇಳಿದೆ. ಪತ್ರಿಕೆಗಳವರು ಚೆನ್ನಾಗಿ ಪ್ರಕಟಿಸಿದರು.

ಗುರು-ವಿರಕ್ತರ ಒಗ್ಗೂಡುವಿಕೆ ಅಗತ್ಯವಿಲ್ಲ ಮತ್ತು ಸೂಕ್ತವಲ್ಲ

ಕೂಡುವುದರಿಂದ ಹಾನಿ ಏನು? ಲಾಭವೇನು? ಎಂಬುದರ ಲೆಕ್ಕಾಚಾರ ಅವಶ್ಯ ಮತ್ತು ಒಂದುಗೂಡುವಿಕೆಯ ಫಲಶ್ರುತಿ ಏನು ಎಂಬುದರ ವಿಶ್ಲೇಷಣೆಯೂ ಅಗತ್ಯ.

ಲಿಂಗಾಯತ ಸಮಾಜದ ಮಠಗಳಲ್ಲಿ ಪ್ರಮುಖವಾಗಿ 3 ಸಂಪ್ರದಾಯಗಳಿವೆ 1. ವಿರಕ್ತವರ್ಗ

2. ಗುರುವರ್ಗ 3. ಶರಣ ಸಂಪ್ರದಾಯ. ತತ್ತ್ವ ದೃಷ್ಟಿಯಿಂದ ಅವುಗಳನ್ನು ಹೀಗೆ ವಿಶ್ಲೇಷಿಸಬಹುದು.

1. ಧರ್ಮಪಿತ ಬಸವಣ್ಣನವರೇ ಆದಿ ಗುರುವಾಗಿ ಲಿಂಗಾಯತ ಧರ್ಮವು ಸಂಸ್ಥಾಪನೆಯಾಯಿತು. ಧರ್ಮಪಿತರು ಅನುಭವ ಮಂಟಪ ಕಟ್ಟಿ, ಶೂನ್ಯ ಪೀಠವನ್ನು ಸ್ಥಾಪಿಸಿ ಅಲ್ಲಮಪ್ರಭುದೇವರನ್ನು ಅದಕ್ಕೆ ಪ್ರಥಮ ಅಧಿಕಾರಿಯನ್ನಾಗಿ ಮಾಡಿದರು. ಆ ಪರಂಪರೆ ಹಿಡಿದು ಒಂದು ಸಂಪ್ರದಾಯವು ಬೆಳೆಯಿತು. ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮೇಶ್ವರರ ನಂತರ ಆ ಪರಂಪರೆ ಅಖಂಡವಾದ ಪೀಠ ಪರಂಪರೆಯಾಗಿ ಬರಲಿಲ್ಲವಾದರೂ ಬಸವ ಮಾರ್ಗದಲ್ಲಿ ನಡೆದ ವೈರಾಗ್ಯ ಪಥಿಕರಾದ ಮಲೆಯ ಮಾದೇಶ್ವರ, ಎಡೆಯೂರು ಸಿದ್ಧಲಿಂಗೇಶ್ವರ, ಘನ ಲಿಂಗದೇವರು, ಷಣ್ಮುಖಸ್ವಾಮಿ, ಮುಪ್ಪಿನ ಷಡಕ್ಷರಿ, ಅಥಣಿ ಶಿವಯೋಗಿಗಳು, ಬಾಲಲೀಲಾ ಮಹಾಂತ ಶಿವಯೋಗಿ, ಮುಂತಾದವರನ್ನೆಲ್ಲ ಈ ವಿರಕ್ತ ಪರಂಪರೆಯ ಅಡಿಯಲ್ಲೇ ಗುರುತಿಸಿ, ಗೌರವಿಸಲಾಗುತ್ತಿದೆ. ಶ್ರೀಗುರು ಬಸವ ಲಿಂಗಾಯ ನಮಃ ಮಂತ್ರವನ್ನು ಪಠಿಸುತ್ತ ಬಸವಣ್ಣನವರನ್ನು ಆದಿ ಪ್ರಮಥರೆಂದು ನಂಬಿದ ಧಾರವಾಡದ ಮುರುಘಾ ಮಠ, ಅರಭಾವಿ ದುರದುಂಡೀಶ್ವರ ಮಠ, ನಿಡುಸೋಸಿ ಮಠ, ಚಿತ್ರದುರ್ಗದ ಮುರುಘಾ ಮಠ, ಸಿದ್ಧಗಂಗಾದ ಶ್ರೀಮಠ, ಮುಧೋಳದ ಮೃತ್ಯುಂಜಯ ಮಠ, ಇಳಕಲ್ ವಿಜಯ ಮಹಾಂತೇಶ್ವರ ಮಠ, ಬೆಂಗಳೂರಿನ ಬೇಲಿ ಮಠ, ಘನ ಮಠದಾರ್ಯರ ಸಂತೆ, ಕೇಲೂರು ಮಠ, ಕೊಟ್ಟೂರು ಮಠ ಇತ್ಯಾದಿ ಇತ್ಯಾದಿಗಳನ್ನು ಈ ವಿರಕ್ತ ಪರಂಪರೆಯ ಬಳ್ಳಿಗೆ ಸಂಬಂಧಿಸಲಾಗುವುದು.

2. ಇನ್ನು ಗುರುವರ್ಗದ ಮಠಗಳೆಂದು ಹೆಸರಿಟ್ಟುಕೊಂಡ ಪಂಚಾಚಾರ್ಯರ ಮಠಗಳು. ಇವು ಆರಂಭದಲ್ಲಿ ಬಸವ ತತ್ತ್ವ ವಿರೋಧಿ ಮಠಗಳೇನಲ್ಲ

ಅ. ಬಾಳೇಹೊನ್ನೂರಿನ ಮಠದ ಪ್ರಥಮ ಪೀಠಾಧಿಕಾರಿ ರೇವಣಸಿದ್ಧರ ಮಗ ರುದ್ರಮುನಿದೇವರು. ಈ ಮಠದ ಕರ್ತೃ ವೀರ ಮಾತೆ ಅಕ್ಕನಾಗಲಾಂಬಿಕೆ.

ಆ. ಉಜ್ಜನಿಯ ಮಠದ ಕರ್ತೃ ದಲಿತ ಸಮೂಹದಲ್ಲಿ ಹುಟ್ಟಿದ ಮರುಳಸಿದ್ಧರು.

ಇ. ಶ್ರೀಶೈಲ ಪೀಠದ ಕರ್ತೃ ಆರಾಧ್ಯ ಬ್ರಾಹ್ಮಣ ಮೂಲದಿಂದ ಬಂದ ಮಲ್ಲಿಕಾರ್ಜುನ ಪಂಡಿತಾರಾಧ್ಯ

ಮೇಲ್ಕಂಡ ಮೂವರು 12ನೇ ಶತಮಾನದ ಶರಣರ ಸಮಕಾಲೀನರು.

ಈ. ಕಾಶಿಯ ಜಂಗಮವಾಡಿ ಮಠ ರೂಪುಗೊಂಡಿದ್ದು ಕೆಳದಿ ಸಂಸ್ಥಾನದ ದೊರೆ ದೊಡ್ಡ ವೆಂಕಟಪ್ಪನಾಯಕನಿಂದ

ಉ. ಹಿಮವತ್ ಕೇದಾರದ ಪೀಠದ ಕಲ್ಪನೆ ಹುಟ್ಟಿದ್ದು 20ನೆಯ ಶತಮಾನದಲ್ಲಿ.

18ನೆಯ ಶತಮಾನದವರೆಗೂ ರಚನೆಯಾಗಿದ್ದುದು ಚತುರಾಚಾರ್ಯ ಪುರಾಣ ಮಾತ್ರ. ಸುಳ್ಳನ್ನು ಸೃಷ್ಟಿಸಲೆಂದೇ ಅವತರಿಸಿದ ಮೈಸೂರಿನ ಪಂಚಗ್ರಹ ಹಿರೇಮಠದ ಕಾಶೀನಾಥ ಶಾಸ್ತ್ರಿಗಳು ಪಂಚಾಚಾರ್ಯರು ಯುಗಯುಗಗಳಲ್ಲಿ ಅವತರಿಸಿದರು, ರೇಣುಕಾಚಾರ್ಯರೇ ಆದಿ ಆಚಾರ್ಯ ಎಂಬ ಸುಳ್ಳನ್ನು ಹೆಣೆದು ಅವರಿಂದ ಪ್ರಕಟವಾದ ಸಿದ್ಧಾಂತ ಶಿಖಾಮಣಿ ಗ್ರಂಥದ ಆರಂಭದಲ್ಲಿ ಸೇರಿಸಿ ಇಡೀ ಸಮಾಜವನ್ನೇ ಹೋಳು ಮಾಡಿ, ಗೊಂದಲಕ್ಕೆ ಕೆಡವಿದರು. ಧರ್ಮಪಿತ ಬಸವಣ್ಣನವರಿಗೂ

ಪೂರ್ವದಲ್ಲಿ ಸಪ್ತಶೈವಗಳ ಒಂದು ಶಾಖೆಯಾಗಿ ವೀರಶೈವವಿದ್ದರೂ ಅದಕ್ಕೂ ಪಂಚಾಚಾರ್ಯರಿಗೂ ಏನೇನೂ ಸಂಬಂಧವಿಲ್ಲ. ಪಂಚ ಪೀಠಗಳೊಡನೆ ಯಾವುದೇ ಸಂಬಂಧವಿಲ್ಲದ ವೀರಶೈವರ ಗುಂಪುಗಳು ಇಂದಿಗೂ ಆಂಧ್ರ, ತಮಿಳು ನಾಡು, ಕೇರಳ ರಾಜ್ಯಗಳ ಕೆಲವು ಭಾಗಗಳಲ್ಲಿ ಇದ್ದಾರೆ. ಆದ್ದರಿಂದ ಪಂಚಾಚಾರ್ಯರು ವೀರಶೈವ ಸ್ಥಾಪಕರೂ ಅಲ್ಲ. ಈ ದೌರ್ಬಲ್ಯವನ್ನರಿತೇ ಚಿ.ಮೂರಂತಹ ವಿದ್ವಾಂಸರು ವೀರಶೈವಕ್ಕೂ ಯಾರೂ ಸ್ಥಾಪಕರಿಲ್ಲ, ಲಿಂಗಾಯತಕ್ಕೂ ಯಾರೂ ಸ್ಥಾಪಕರಿಲ್ಲ ಎಂದು ಬಡಬಡಿಸುವುದು. ಪಂಚಪೀಠಾಧೀಶರಿಗೆ ಯಾವ ಐತಿಹಾಸಿಕ ಆಧಾರವಿಲ್ಲದಿದ್ದರೂ ಅವರ (ಮೂಢ) ಅನುಯಾಯಿಗಳು ಗುರುವಾಣಿಯಲ್ಲೇ ಅಚಲ ವಿಶ್ವಾಸವಿಟ್ಟು ನಂಬುವವರಾದ್ದರಿಂದ ಬ್ರೇಕ್ ಇಲ್ಲದೆ ಗಾಡಿ ನಡೆಸುವವರಂತೆ ಪಂಚಾಚಾರ್ಯರು ಯುಗಯುಗಗಳಲ್ಲಿದ್ದರು ಎಂದು ಹೇಳುವರು.

ಯಾವುದಕ್ಕೇ ಆಗಲಿ ಒಬ್ಬ ಕರ್ತೃ ಇರುವನು. ವೀರಶೈವಕ್ಕೆ ಕೈಲಾಸಪತಿ 'ಶಿವ'ನಾಗಲಿ ಇಲ್ಲವೇ ಕಟ್ಟಾ 'ಶಿವ'ಭಕ್ತನಾದ ವೀರಭದ್ರನಾಗಲಿ ಮೂಲಪುರುಷನಾಗಿರಬಹುದು. ಅದು ಸಂದಿಗ್ಧವಾಗಿದ್ದರೂ ಪಂಚಾಚಾರ್ಯರಂತೂ ಮೂಲಸ್ಥಾಪಕರಲ್ಲ; ಆದಿ ಪಂಚಾಚಾರ್ಯರು ಕಾಶೀನಾಥ ಶಾಸ್ತ್ರಿಗಳ ಕಲ್ಪನೆಯ ಕೂಸುಗಳೇ ವಿನಾ ಐತಿಹಾಸಿಕ ಪುರುಷರಲ್ಲ. ಐತಿಹಾಸಿಕ ಎಳೆ ಸಿಗುವುದೇ ರೇವಣಸಿದ್ಧ ಮರುಳ ಸಿದ್ಧ ಮಲ್ಲಿಕಾರ್ಜುನ ಪಂಡಿತಾರಾಧ್ಯ, ವಿಶ್ವಾರಾಧ್ಯರಿಂದ.

ಈ ಮಧ್ಯೆ ಡಾ|| ಎಂ.ಎಂ. ಕಲಬುರ್ಗಿ ರೇವಣಸಿದ್ಧ, ಮರುಳ ಸಿದ್ಧರನ್ನು ಅವಧೂತ ಮಾರ್ಗಿಗಳೆಂದು ಕರೆದಿದ್ದಾರೆ. ಸಾಹಿತಿಗಳಿಗೆ ಧಾರ್ಮಿಕ ಒಳಪಂಥಗಳಲ್ಲಿರುವ ವ್ಯತ್ಯಾಸವೇ ಗೊತ್ತಿರದು. ರೇವಣಸಿದ್ಧ ಮರುಳಸಿದ್ಧರು ಅವಧೂತ ಮಾರ್ಗಿಗಳಲ್ಲ, ಸಿದ್ಧ ಮಾರ್ಗಿಗಳು. ಬಸವ ಪೂರ್ವದ ಈ ಶೈವ ಪಂಥಿಗಳು ಅನಾಚಾರದವರಾಗಿರುವುದಿಲ್ಲ ವಿಭೂತಿ, ರುದ್ರಾಕ್ಷಿ ಧಾರಕರೂ ನೇಮವ್ರತ ನಿಷ್ಠರೂ ಆಗಿರುತ್ತಾರೆ. ಅವಧೂತ ಮಾರ್ಗಿಗಳು ಸಾಮಾನ್ಯವಾಗಿ ಸದಾಚಾರ ಪೂರ್ಣ ನಿತ್ಯನೇಮ ತೊರೆದು ತಾವು ಕ್ರಿಯಾತೀತರೆಂದು ಹೇಳಿಕೊಳ್ಳುತ್ತ ಕೆಲವೊಮ್ಮೆ ಮದ್ಯಪಾನದಂತಹ ಅತಿರೇಕಕ್ಕೂ ಹೋಗುತ್ತಾರೆ. ಹುಟ್ಟಿನಿಂದ ಕುರುಬರಾಗಿದ್ದ ರೇವಣರು ನಂತರ ಸಿದ್ಧಮಾರ್ಗಾನುಯಾಯಿಗಳಾಗಿದ್ದು, ಅವರು ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದು ಚೆನ್ನಬಸವಣ್ಣನವರಿಂದ ದೀಕ್ಷೆ ಪಡೆದ ನಿರ್ಲಜ್ಜ ಶಾಂತಿಮಯ್ಯನೆಂಬ ವಿರಕ್ತರಿಂದ. ಹುಟ್ಟಿನಿಂದ ಮಾದಾರರಾಗಿದ್ದ ಮರುಳುಸಿದ್ಧರು ಲಿಂಗಾಯತ ದೀಕ್ಷೆ ಪಡೆದುದು ರೇವಣಸಿದ್ಧರಿಂದ. ಇವರೆಲ್ಲ ನಮ್ಮ ಶರಣಪರಂಪರೆಯ ಅವಿಭಾಜ್ಯ ಅಂಗವಾಗಿದ್ದರು. ಸದಾ ಸಂಚಾರಿಯಾಗಿದ್ದ ರೇವಣಸಿದ್ಧರು, ಮಗ ರುದ್ರಮುನಿದೇವರನ್ನು ಮಹಾಮನೆಯಲ್ಲೇ ಬಿಟ್ಟು ಹೋದಾಗ ಚನ್ನಬಸವಣ್ಣನವರೊಡನೆ ಸಾಕಿ ಬೆಳೆಸಿದಳು ಮಹಾಮಾತೆ ಅಕ್ಕನಾಗಮ್ಮ. ಹೀಗಾಗಿ ಉಳಿವೆಗೆ ಸಾಹಿತ್ಯದೊಡನೆ ಅಕ್ಕನಾಗಮ್ಮ ಹೋದಾಗ ಆ ತಾಯಿಯೊಡನೆ ರುದ್ರಮುನಿದೇವರೂ ಇದ್ದರು. ಚನ್ನಬಸವಣ್ಣನವರು ಯುದ್ಧದಲ್ಲಿ ಆದ ಪೆಟ್ಟಿನಿಂದ ಚೇತರಿಸಿಕೊಳ್ಳದೆ ಲಿಂಗೈಕ್ಯರಾದಾಗ, ಅಕ್ಕನಾಗಮ್ಮನೊಡನೆ ಸಂಚರಿಸಿ ಧರ್ಮ ಪ್ರಚಾರ ಮಾಡಿದ ತ್ಯಾಗ ಮೂರ್ತಿ ರುದ್ರಮುನಿದೇವರು. ಹೀಗಾಗಿ ಬಾಳೇಹಳ್ಳಿ ಮಠವನ್ನು ಸ್ಥಾಪಿಸಿ ಅಕ್ಕನಾಗಮ್ಮ ರುದ್ರಮುನಿದೇವರನ್ನು ಪ್ರಥಮ ಪೀಠಾಧಿಕಾರಿಯನ್ನಾಗಿ ನಿಯೋಜಿಸಿದಳು. ಹೀಗೆ ರೇವಣಸಿದ್ಧ

ಮರುಳುಸಿದ್ಧ, ರುದ್ರಮುನಿದೇವರು ಶರಣ ಧರ್ಮದ ಅವಿಭಾಜ್ಯ ಅಂಗ.

ಮಲ್ಲಿಕಾರ್ಜುನ ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರು ಆರಾಧ್ಯ ಬ್ರಾಹ್ಮಣರು; ನಂತರ ಲಿಂಗಾಯತ ಧರ್ಮೀಯರಾದರು. ಇಂಥ ಇತಿಹಾಸವನ್ನು ಮುಚ್ಚಿಹಾಕಿ ಬಸವ ಪಥಿಕರಲ್ಲೇ ವಿರಕ್ತ ವರ್ಗ-ಗುರು ವರ್ಗ ಎಂಬೆರಡು ಪಂಥಗಳನ್ನು ಹುಟ್ಟುಹಾಕಿದವರು ಪಂಚಪೀಠಗಳವರು.

3. ಗುರುವರ್ಗ-ವಿರಕ್ತ ವರ್ಗ ಸಂಪ್ರದಾಯಿಗಳಿಂದ ಬೇರೆಯೇ ಆದವು. ಶರಣ ಸಂಪ್ರದಾಯದ ಮಠಗಳು ಭಾಲ್ಕಿಯ ಹಿರೇಮಠ, ಸಿರಿಗೆರೆ ಮಠ, ಸುತ್ತೂರು ಮಠ, ನೊಳಂಬ ಸಂಪ್ರದಾಯದ ಮಠಗಳು ಇವು ಭಕ್ತವರ್ಗದ ಮಠಗಳಾಗಿದ್ದು ಮರುಳಸಿದ್ಧ, ಘನಲಿಂಗದೇವರು, ಸಿದ್ಧರಾಮೇಶ್ವರರ ಆದೇಶಾನುಸಾರ ನಡೆಯಬೇಕಾದವರು.

ಸೂಕ್ಷ್ಮವಾಗಿ ಗಮನಿಸಿದರೆ ವಿರಕ್ತ ಮತ್ತು ಶರಣ ಪರಂಪರೆಯ ಮಠಗಳು ನೇರವಾಗಿ ಬಸವಣ್ಣನವರ ವಿರೋಧಿಗಳಲ್ಲ ಮತ್ತು ಸ್ಪಷ್ಟವಾಗಿ ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪುವ ಪ್ರಾಮಾಣಿಕ ಶರಣ ಮಾರ್ಗಿಗಳೂ ಆಗಿಲ್ಲ. ಧರ್ಮಗುರು ಬಸವಣ್ಣನವರಲ್ಲಿ ರಕ್ಷಣೆ ಪಡೆದರೆ ಮಾತ್ರ ತಮಗೆ ಪೂರ್ಣ ರಕ್ಷಣೆ ಸಿಗುವುದು ಎಂಬ ವಿಶೇಷ ಪರಿಜ್ಞಾನವೂ ಇವರಲ್ಲಿಲ್ಲ. ಇನ್ನು ಪಂಚಪೀಠಾಧೀಶರಂತೂ ಸ್ಪಷ್ಟವಾಗಿ ಬಸವ ವಿರೋಧಿಗಳು. ಶ್ರೀ ಉತ್ತಂಗಿ ಚನ್ನಪ್ಪನವರು ಈ ಬಗ್ಗೆ ಹೇಳಿಬಿಟ್ಟಿದ್ದಾರೆ. ಪಂಚಪೀಠಾಧೀಶರು ಬಸವಣ್ಣನವರ ಬಹಿರಂಗ ವಿರೋಧಿಗಳು, ವಿರಕ್ತರು ಅಂತರಂಗ ವಿರೋಧಿಗಳು ಎಂದು. ಅಂಥಿನ ಕಾಲಕ್ಕೆ ಅದು ಪರಮ ಸತ್ಯದ ಹೇಳಿಕೆ.

ಆದರೆ ಇಂದು ಸ್ವಲ್ಪ ಮೃದುಧೋರಣೆ ತಳೆಯಬೇಕಾಗಿದೆ-ವಿರಕ್ತರನ್ನು ಕುರಿತು. ಆದರೆ ಪಂಚಪೀಠಾಧೀಶರ ಬಗ್ಗೆ ತೀವ್ರವಾದ ಎಚ್ಚರಿಕೆಯನ್ನು ವಹಿಸಬೇಕಾಗಿದೆ. ದಾವಣಗೆರೆಯಲ್ಲಿ ನನ್ನ ಭಾಷಣದ ನಂತರ ಉಪನ್ಯಾಸ ಮಾಡಿದ ಶರಣ. ಎ.ಜಿ. ವಿರುಪಾಕ್ಷಪ್ಪನವರು, 'ಮಾತಾಜಿಯವರು ವಿರಕ್ತರ ಪಕ್ಷಪಾತಿಯಾಗಿ ಮಾತನಾಡುತ್ತಿದ್ದಾರೆ ಎಂದು ಭಾವಿಸಬೇಡಿರಿ. ವಿರಕ್ತರ ಬಗ್ಗೆ ಮೃದುಧೋರಣೆ ಹೊಂದಿದ್ದಾರೆ ಅನ್ನಿಸಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ ಅವೆರಡೂ ವರ್ಗಗಳು ಸಮಾಜದ ಎರಡು ಕಣ್ಣು ಎಂದು ಕೆಲವರು ಹೇಳುತ್ತಾರೆ. ಕಣ್ಣಲ್ಲ, ಹುಣ್ಣುಗಳು. ಇವರಿಬ್ಬರನ್ನು ಬಿಟ್ಟು ನೇರವಾಗಿ ಬಸವ ಮಾರ್ಗಿಗಳಾಗಬೇಕಾಗಿದೆ ' ಎಂದರು. ಅವರು ಮತ್ತು ಅವರಂತೆಯೇ ಆಲೋಚಿಸುತ್ತಿರುವ ಅನೇಕ ಭಕ್ತರು ನೊಂದು ಈ ಮಾತನ್ನಾಡಿದರೆ ನಾವೇನೂ ತಪ್ಪು ಭಾವಿಸಬೇಕಾಗಿಲ್ಲ.

ನಾನು ವಿರಕ್ತರ ಪರವಾಗಿ ಮಾತನಾಡುತ್ತಿದ್ದರೆ ಅವರ ಮೇಲಿನ ವಿಶೇಷ ಅಭಿಮಾನದಿಂದೇನಲ್ಲ, ದೂರದೃಷ್ಟಿಯಿಂದ. ಅವರು ನಿಜವಾಗಿಯೂ ಬಸವ ತತ್ತ್ವದ ಪಾಲಕರಾಗದೆ ಪುನಃ ವೈದಿಕ-ಶೈವದ ಅನುಸಾರಿಗಳಾದ್ದರಿಂದಲೇ ಲಿಂಗಾಯತ ಸಮಾಜ ಅಜ್ಞಾನಭರಿತವಾಗಿರುವುದು. ಆದರೂ ಅವರ ಬಗ್ಗೆ ಪರೋಕ್ಷ ಅಭಿಮಾನ ಹೊಂದಿರುವುದು ಕೆಲವು ಕಾರಣಗಳಿಗಾಗಿ

1. ತತ್ತ್ವದಲ್ಲಿ ಆಚರಣೆ ಇಲ್ಲದಿದ್ದರೂ ಶ್ರೀ ಗುರು ಬಸವ ಲಿಂಗಾಯ ನಮಃ ಎಂಬುದನ್ನು ಬರೆದುಕೊಳ್ಳುತ್ತಾ ಬಂದುದು.

2. ಕ್ರಾಂತಿಪುರುಷ ಬಸವಣ್ಣನವರನ್ನು ಎತ್ತಿನ ಅವತಾರವಾಗಿ ಮಾಡಿ ಜಡಗೊಳಿಸಿದರೂ ಚಿಂತೆಯಿಲ್ಲ ಬಸವ ಪುರಾಣಗಳನ್ನು ಓದುತ್ತ ಬಂದುದು.

3. ತಾವು ಬಸವ ಪರಂಪರೆಯವರು, ಅಲ್ಲಮಪ್ರಭು-ಚನ್ನಬಸವಣ್ಣ-ಸಿದ್ಧರಾಮೇಶ್ವರರ ಸಂಪ್ರದಾಯದವರು ಎಂದು ಹೇಳಿಕೊಳ್ಳುತ್ತ ಬಂದುದು.

ಧಾರವಾಡದ ಮುರುಘಾಮಠ ಎಷ್ಟೊಂದು ಸಾಹಿತ್ಯವನ್ನು ಹೊರತಂದಿತು: ಅರಭಾವಿ ದುರದುಂಡೀಶ್ವರ ಮಠದ ಶ್ರೀಗಳ ಶತಮಾನೋತ್ಸವದ ನಿಮಿತ್ತ ಬಸವ ಅಧ್ಯಯನ ಪೀಠವಾಯಿತು. ಈ ಎಲ್ಲ ಕಾರ್ಯಗಳು ಆಗದೆ ಇದ್ದರೆ ಬಸವ ಧರ್ಮವು ಇನ್ನಷ್ಟು ನಿರ್ಜೀವಗೊಳ್ಳುತ್ತಿತ್ತಲ್ಲವೆ ?

ಇದರಿಂದಾಗಿ ವಿರಕ್ತಸ್ವಾಮಿಗಳು ವೇದಾಗಮ, ರುದ್ರಾಭಿಷೇಕಗಳ ಮೊರೆ ಹೊಕ್ಕಾಗ 'ನೀವು ಬಸವ ಸಂಪ್ರದಾಯದವರು, ಈ ತಪ್ಪು ಮಾಡಬೇಡಿ' ಎಂದು ಹೇಳಲು ಸಾಧ್ಯವಾಯಿತು. ಹೀಗಾಗಿ ಗದಗಿನ ತೋಂಟದಾರ್ಯಮಠ, ಇಳಕಲ್ಲಿನ ವಿಜಯ ಮಹಾಂತೇಶ ಮಠ ಮುಂತಾದವು ಪುನಃ ಬಸವ ಪಥಕ್ಕೆ ಬಂದವು. ಚಿತ್ರದುರ್ಗದ ಮುರುಘರಾಜೇಂದ್ರ ಬಹನ್ಮಠದ ಲಿಂ|| ಜಯದೇವ ಮತ್ತು ಜಯವಿಭವ ಸ್ವಾಮಿಗಳು ಸಾತ್ವಿಕರು, ತಪಸ್ವಿಗಳು ಇದ್ದರೂ ಬಸವ ತತ್ತ್ವಕ್ಕೆ ಪೂರ್ಣವಾಗಿ ಬದ್ಧರಾಗಿರಲಿಲ್ಲ. ನಂತರ ಬಂದ ಲಿಂ || ಮಲ್ಲಿಕಾರ್ಜುನ ಸ್ವಾಮಿಗಳು ಪಂಚಾಂಗ ಪ್ರೇಮಿಗಳಾಗಿ ವೈದಿಕಶೈವದ ಅನುಯಾಯಿಗಳಾಗಿದ್ದರು. ಈಗಿನ ಶ್ರೀಗಳು ಪುನಃ ಬಸವ ತತ್ತ್ವಕ್ಕೆ ಬದ್ಧರಾಗುತ್ತಿದ್ದಾರೆ. ಹೀಗೆ ವಿರಕ್ತಮಠಗಳು ಒಮ್ಮೊಮ್ಮೆ ಹಳಿ ತಪ್ಪಿದ್ದರೂ ಪುನಃ ಹಳಿಗಳ ಮೇಲೆ ಕೂಡ್ರಿಸಬಹುದಾದ ರೇಲ್ವೆ ಗಾಡಿಗಳಂತಿವೆ.

ಸಂಪ್ರದಾಯ ಮಠಗಳಿಗೆ ಬದ್ಧರಾದ (Committed) ಭಕ್ತರು ಇದ್ದಾರೆ. ಅವರುಗಳನ್ನು ಪರಿವರ್ತಿಸುವುದು ಕಷ್ಟದ ಕೆಲಸ. ಅವರು ಅನುಸರಿಸುವ ಮಠಗಳ ಗುರುಗಳು ಬಸವ ಪಥಿಕರಾದರೆ ಆರಂಭದಲ್ಲಿ ತುಸುಗೊಣಗಿಕೊಂಡರು ನಂತರ ಒಬ್ಬೊಬ್ಬರೇ ಸರಿಯಾದ ದಾರಿಗೆ ಬರುವರು. ಈ ದೂರಾಲೋಚನೆಯಿಂದಲೇ (ದುರಾಲೋಚನೆಯಿಂದಲ್ಲ) ನಾನು ವಿರಕ್ತ ಸಂಪ್ರದಾಯದ ಬಗ್ಗೆ ಮೃದುಧೋರಣೆ, ಆಂತರಿಕ ಅಭಿಮಾನ ತಾಳುವುದು.

ಆದರೆ ಪಂಚಪೀಠಾಧೀಶರು ಹಾಗಲ್ಲ; ಅವರು ನಿರ್ಭಯವಾಗಿಯೇ ಬಸವ ಧರ್ಮಕ್ಕೆ ವಿರುದ್ಧವಾದ ಆಚರಣೆಗಳಲ್ಲಿ ತೊಡಗಿದ್ದಾರೆ. ಕೆಲವು ವಿರಕ್ತರು ಕೆಲವು ಕಾಲ ಬಂಗಾರದ ಕಿರೀಟ ಮತ್ತು ಅಡ್ಡಪಲ್ಲಕ್ಕಿಯ ಮೋಹಿಗಳಾಗಿದ್ದರು. ಆದರೆ ಒಬ್ಬೊಬ್ಬರೇ ಬಿಡುತ್ತಾ ಬಂದಿದ್ದಾರೆ. ಎಲ್ಲವೂ ಮಾಯೆ ಎಂದು ವೇದಾಂತ ಬೋಧಿಸುವ ಅಧ್ಯಾತ್ಮ ಜೀವಿ ಸ್ವಾಮಿಗಳು ಬೆಳ್ಳಿಯ ಸಿಂಹಾಸನ, ಬಂಗಾರದ ಕಿರೀಟದ ಮೋಹ ತಾಳುತ್ತಿರುವಾಗ ವಿರಕ್ತ ಮಠಾಧೀಶರು ಸಂಪ್ರದಾಯಿಕವಾಗಿ ಬಂದ ಅಡ್ಡಪಲ್ಲಕ್ಕಿ ಬಂಗಾರದ ಕಿರೀಟ, ವಜ್ರದುಂಗುರಗಳ ಮೋಹ ಬಿಡುವುದು ಅಭಿನಂದನಾರ್ಹ.

ಪಂಚಪೀಠಗಳಲ್ಲೊಂದಾದ ರಂಭಾಪುರಿಯ ಶ್ರೀಗಳು ವೈಭೋಗ-ವಿರಾಗ ಎರಡೂ ಬಹಳ ಸಮೀಪದವು ಎಂದು ಹೊಸ ವ್ಯಾಖ್ಯೆ ನೀಡಿದ್ದಾರೆ.

ಪಾಪ ! ಬುದ್ಧನಿಗೆ ತಿಳಿಯಲಿಲ್ಲ ಅವೆರಡೂ ಸಮೀಪದವು ಎಂದು ಅದಕ್ಕಾಗಿ ಬುದ್ಧ ವೈಭವವನ್ನು ತೊರೆದು ವಿರಾಗವನ್ನು ಆಶ್ರಯಿಸಿದನು. ಅಕ್ಕಮಹಾದೇವಿಗೆ ತಿಳಿಯಲಿಲ್ಲ ಅರಸೊತ್ತಿಗೆ

ನಿರಾಕರಿಸಿ ವಿರತಿಗೆ ಎಳಸಿದಳು. ಮೋಳಿಗೆ ಮಾರಯ್ಯನಿಗೆ ತಿಳಿಯಲಿಲ್ಲ ರಾಜ್ಯದ ಅಧಿಕಾರ ತೊರೆದು ಅನುಭವ ಮಂಟಪಕ್ಕೆ ನಡೆದನು.

ಹಿಂದಿನ ಪಂಚಪೀಠಾಧೀಶರು ಬಸವಣ್ಣನವರನ್ನು ಬಹಿರಂಗವಾಗಿ ನಿಂದಿಸುತ್ತ, ಅವರ ಫೋಟೋ ಇದ್ದರೆ ತಾವು ಅಲ್ಲಿಗೆ ಬರುವುದಿಲ್ಲ ಎಂದು ಹಠ ಮಾಡುತ್ತಿದ್ದರು. ಈಗ ಇದು ಸಾಧ್ಯವಿಲ್ಲ ಎಂದರಿತು "ನಮಗೆ ಬಸವಣ್ಣನವರು ಬಹಳ ಹತ್ತಿರದವರು. ಅವರು ಜಾತವೇದ ಮುನಿಗಳಿಂದ ದೀಕ್ಷೆ ಪಡೆದರು" ಎಂದು ಹೇಳಲು ಆರಂಭಿಸಿದ್ದಾರೆ. ಬಸವಣ್ಣನವರು ಆಚರಿಸಿದ್ದು ವೀರಶೈವ ತತ್ತ್ವವಂತೆ; ಬಸವ ತತ್ತ್ವ ಎಂಬುದು ಇಲ್ಲವೇ ಇಲ್ಲವಂತೆ!

ಇದೇ ನಿರ್ಧಾರಕ್ಕೆ ಬರುವುದಾದರೆ, ಪಂಚಪೀಠದವರು ಬಸವಣ್ಣನವರು ಆಚರಿಸಿದ್ದನ್ನು ತಾವು ಆಚರಿಸಬೇಕು. ಏಕದೇವೋಪಾಸನೆ, ಸಮಾನತೆ, ಜಾತ್ಯತೀತತೆ, ಸರಳತೆ, ನಿರಾಡಂಬರ ಮುಂತಾದ ಸದ್ಗುಣಗಳನ್ನು ಅಳವಡಿಸಿಕೊಳ್ಳಬೇಕು. ಅದು ಇವರಿಗೆ ಸಾಧ್ಯವೆ ? ಸಾಮಾಜಿಕವಾಗಿ, ಆರ್ಥಿಕವಾಗಿ, ಪ್ರಭಾವದ ದೃಷ್ಟಿಯಿಂದ ವಿರಕ್ತರೇ ಬಲಿಷ್ಠರಾಗಿದ್ದಾರೆ. ಹೀಗಿರುವಾಗ ಇವರು ತಮ್ಮ ವೈಯಕ್ತಿಕ ಸ್ವಾಭಿಮಾನ ಮಾತ್ರವಲ್ಲ ಬಸವ ತತ್ತ್ವವನ್ನು ಬಲಿಗೊಟ್ಟು ಪಂಚಪೀಠಾಧೀಶರ ಜೊತೆ ಸೇರುವ ಅಗತ್ಯವೇನಿದೆ ?

ಇಬ್ಬರೂ ಕೂಡಬೇಕೆಂಬ ಆಶಯದ ಕೂಗು ಏಳುತ್ತಿರುವುದು ವೀರಶೈವ ಮಹಾಸಭೆಯಿಂದ ಮತ್ತು ಪಂಚಪೀಠಾಧೀಶರಿಂದ. ಕಾರಣವೇನಿರಬಹುದು ? ವೀರಶೈವ ಮಹಾಸಭೆ ಮೇಲ್ಜಾತಿಯ ಲಿಂಗಾಯತರ ಕೈಯಲ್ಲಿದೆ. ಇವರಿಗೆ ಪಂಚಪೀಠಗಳನ್ನು ಬಲಪಡಿಸುವ ಹಂಬಲ ಆಂತರಿಕವಾಗಿದೆ. ಲಿಂಗಾಯತರ ಒಳಪಂಗಡಗಳಲ್ಲಿ ಅಯ್ಯನವರು, ಬಣಜಿಗರು, ಪಂಚಮಶಾಲೆಯವರು ಸಂಪ್ರದಾಯಿಕ ವಿರಕ್ತ ಮಠಗಳ ಶಿಷ್ಯರಾಗಿ ಉಳಿದ ಲಿಂಗಾಯತ ಒಳಪಂಗಡಗಳವರನ್ನು ಕೀಳಾಗಿ ಕಂಡದ್ದಿದೆ. ಅದಕ್ಕೆ ಪ್ರತೀಕಾರವಾಗಿಯೇ ಲಿಂಗಾಯತರಲ್ಲಿ ಇತರ ಒಳಪಂಗಡಗಳವರಾದ ಸಾದರು, ನೊಳಂಬರು, ಸಜ್ಜನರು, ಕುರುಹಿನ ಶೆಟ್ಟಿ, ರೆಡ್ಡಿ, ಪಟ್ಟಸಾಲಿ, ನಗರ್ತರು ಇತ್ಯಾದಿ ಇತ್ಯಾದಿಗಳವರು ಬೇರೆ ಬೇರೆ ಸಂಘ-ಸಂಸ್ಥೆಗಳನ್ನು ಮಾತ್ರವಲ್ಲದೆ ತಮ್ಮದೇ ಆದ ಮಠ, ಗುರು ಮತ್ತು ಪುರೋಹಿತ ಪರಂಪರೆಯನ್ನು ಸೃಷ್ಟಿಸಿಕೊಂಡರು. ಈ ವಿಭಜನೆಯ ಅನಾಹುತಕ್ಕೆ ಕಾರಣರಾದ ಅಯ್ಯನವರು (ಮಹೇಶ್ವರರು), ಬಣಜಿಗರನ್ನು ಮತ್ತು ಪಂಚಮಸಾಲೆಯವರು ತಾವೂ ಪ್ರತ್ಯೇಕ ಸಂಘಟನೆಗಳನ್ನು ಸೃಷ್ಟಿಸಿಕೊಂಡುದು ಒಂದು ವಿಲಕ್ಷಣ ಕ್ರಿಯೆ.

ಲಿಂಗಾಯತ ಸಮಾಜವು ಒಂದು ಕಡೆ ವಿರಕ್ತರು, ಇನ್ನೊಂದು ಕಡೆ ತಮ್ಮವೇ ಗುರುಮಠಗಳನ್ನು ಸ್ಥಾಪಿಸಿದಾಗ ಪಂಚಚಾರ್ಯರಿಗೆ ಮೇವಿನ ಭೂಮಿಯೇ ಇಲ್ಲವಾಯಿತು. ಆಗ ನಿಜಕ್ಕೂ ಅವರು ಗಾಬರಿಗೊಂಡರು. Cream-ಕೆನೆಯನ್ನೇ ಮೆಲ್ಲಲು ಹೊಸ ಸೂತ್ರ ಕಂಡು ಹಿಡಿದರು. ಪಂಚಮಸಾಲೆ ಮತ್ತು ಪಂಚಪೀಠಗಳ ಮಧ್ಯೆ common ಆಗಿರುವ ಪಂಚದ ಮೇಲೆ ಕಣ್ಣಿಟ್ಟರು. "ಸದಾಚಾರದವರು ಅಂದರೆ ಸಾದರು, ಸಿರಿಗೆರೆ ಮಠಕ್ಕೆ ನಡೆದುಕೊಳ್ಳುವಂತೆ ಪಂಚಾಚಾರದವರು (ಅಂದರೆ ಪಂಚಮಸಾಲೆಯವರು) ಪಂಚಪೀಠಗಳಿಗೆ ನಡೆದುಕೊಳ್ಳಬೇಕು". ಈ ನಂಬಿಕೆಯನ್ನು ಬಿತ್ತ ತೊಡಗಿದರು. ಪಂಚಾಚಾರದವರು ಎಂಬುದು ಪಂಚ ಆಚಾರ ಅಳವಡಿಸಿಕೊಂಡವರು ಎಂಬ

ಗುಣವಾಚಕ ಪದ ಹಾಗೆ ಅಳವಡಿಸಿಕೊಂಡವರು ಶುದ್ಧ ಬಸವ ಭಕ್ತರು. ಆದರೂ ಕೆಲವು ಮುಗ್ಧರು ನಂಬಿದರು. ಮೊದಲಿನಿಂದಲೂ ಪ್ರಭಾವ ಶಾಲಿಯಾದ ವಿರಕ್ತ ಮಠಗಳ ಸುತ್ತಲೂ ಇದ್ದ ಕೆಲವು ಗಣ್ಯ ಪಂಚಮಸಾಲೆಯವರಿಗೆ ಮನಸ್ಸು ಪಂಚಪೀಠಗಳವರ ಕಡೆ ದೇಹ ಮಾತ್ರ ವಿರಕ್ತಮಠಗಳಲ್ಲಿ ಎಂಬಂತೆ ಆಗಿ, ಈ ಗಣ್ಯರುಗಳೇ ವಿರಕ್ತರನ್ನು ಅತ್ತ ಕಡೆಗೆ ಒಯ್ಯಬೇಕೆಂಬ ಉತ್ಕಟ ಹಂಬಲ ಉಳ್ಳವರಾಗಿದ್ದಾರೆ. ಈ ತಂತ್ರ ಫಲಿಸಿದರೆ ಆಗ ಪಂಚಪೀಠಾಧೀಶರ ಶಕ್ತಿ ಬಲಗೊಂಡು ವಿರಕ್ತಮಠದವರು ತುಸು ದುರ್ಬಲರಾದರೆ ಲಿಂಗಾಯತರಲ್ಲೇ ಹೆಚ್ಚು ಶ್ರೀಮಂತರು, ರಾಜಕೀಯ ಮುಂದಾಳುಗಳು ಪಂಚಪೀಠಾಧೀಶರ ಕಡೆಗೆ ಸರಿಯಲು ಸುಸಂಧಿ ದೊರೆಯುವುದು. ಇದಕ್ಕಾಗಿ ಗುರುವರ್ಗದವರು ಮತ್ತು ವಿರಕ್ತರು ಒಂದುಗೂಡಬೇಕು ಎಂದು ಈ ಗಣ್ಯರು ಆಗಾಗ ಹೇಳಿಕೆ ನೀಡುತ್ತಲೇ ಇರುತ್ತಾರೆ.

ಒಂದುಗೂಡುವುದು ಎಂದರೇನು?

ಗುರುವರ್ಗದವರ ವಿಚಾರಧಾರೆ-ಆಚರಣೆ ಮತ್ತು ವಿರಕ್ತರ ವಿಚಾರ ಧಾರೆ - ಆಚರಣೆ ಸಂಪೂರ್ಣ ಭಿನ್ನ. ಯಾರು ತಮ್ಮ ವಿಚಾರ-ಆಚಾರಗಳಲ್ಲಿ ಬದಲಾವಣೆ ತಂದುಕೊಳ್ಳಬೇಕೆಂಬುದು ಈಗಿನ ಮುಖ್ಯ ಪ್ರಶ್ನೆ. ವಿರಕ್ತರು ಗುರುವರ್ಗದವರೊಡನೆ ಒಂದಾಗುವುದಾದರೆ ಬಸವ ತತ್ತ್ವಕ್ಕೆ ಅವರು ತಿಲಾಂಜಲಿ ಕೊಡಲೇ ಬೇಕು. ಇದು ಅಗತ್ಯವಿದೆಯೆ ? ಪಂಚ ಪೀಠಾಧೀಶರಂತೂ ಪ್ರಳಯ ಎರಗಿದರೂ ಅಡ್ಡಪಲ್ಲಕ್ಕಿ, ಕಿರೀಟ, ಉಂಗುರ, ನೆಕ್‌ಲೇಸ್ ಬಿಡುವವರಲ್ಲ. ಅಂದಾಗ ಈ ಗತಮೌಲ್ಯಗಳ ಆರಾಧಕರ ಜೊತೆ ಸೇರಲೋಸುಗ ವಿರಕ್ತರು ಇಂದಿನ ಜಗತ್ತಿಗೆ ಬೇಕಾಗುವ ಬಸವ ತತ್ತ್ವವನ್ನು ಬಲಿಗೊಡುವುದು ಉಚಿತವಾದೀತೆ ? ಸೈದ್ಧಾಂತಿಕ ಹೊಂದಾಣಿಕೆ ಇಲ್ಲದೆ ಒಂದು ವೇದಿಕೆ ಮೇಲೆ ಬಂದರೆ ಬರೀ ವಾದವಿವಾದವಲ್ಲದೇ ಇನ್ನೇನೂ ಸಾಧ್ಯವಾಗದು. ಅವರು ಸೇರಿದಲ್ಲೆಲ್ಲ ಬರೀ ಸ್ಥಾಪಕರ ಬಗ್ಗೆಯೇ ವಿವಾದ. ಬರೀ ಬೆರಣಿಯನ್ನು ಆಯುವುದರಲ್ಲೇ ಹೊತ್ತುಗಳೆದರೆ ಅಟ್ಟುಂಬುದು ಯಾವಾಗ ?

ಲಿಂಗಾಯತ ಸಮಾಜದ ಕೆಲವು ಗಣ್ಯರು ಮತ್ತು ವ್ಯಾಪಾರಸ್ಥರು ಇದ್ದಾರೆ. ಇವರಲ್ಲಿ ಯಾವ ತತ್ತ್ವನಿಷ್ಠೆಯೂ ಇಲ್ಲ. ಯಾರೇ ಬಂದರೂ ಹಣ ಸಂಗ್ರಹ ಮಾಡಿ, ಕಾರ್ಯಕ್ರಮ ಮಾಡುವುದರಲ್ಲಿ ಅವರು ಮುಂದು, ಮಳೆ-ಬೆಳೆ ಇಲ್ಲದಿದ್ದರೂ ನಮ್ಮ ದೇಶದಲ್ಲಿ ಮೂಢನಂಬಿಕೆಗೆ ಏನೂ ಕೊರತೆ ಇಲ್ಲವಷ್ಟೆ ಅದನ್ನೇ ಬಳಸಿಕೊಂಡು ಈ ಗಣ್ಯರು, ವ್ಯಾಪಾರಸ್ಥರು ಅಡ್ಡಪಲ್ಲಕ್ಕಿ ಉತ್ಸವ, ಲಕ್ಷ ದೀಪೋತ್ಸವ ಮುಂತಾದ ವೈಭವಪೂರ್ಣ ಸಮಾರಂಭ ಏರ್ಪಡಿಸುವರು. ಅವರಿಗೆ ಹಣ ಸಂಗ್ರಹ ಮಾಡಲು ಒಂದು ಅವಕಾಶ ಬೇಕು ಅಷ್ಟೆ

ಈ ಎಲ್ಲ ಹಿನ್ನೆಲೆಯಲ್ಲಿ ವಿರಕ್ತವರ್ಗದವರು ಆಲೋಚಿಸಿ, ಪಂಚಪೀಠಾಧೀಶರ ಸಾಂಗತ್ಯಕ್ಕೆ ಹಾತೊರೆದು ಅವಮಾನಿತರಾಗುವ ಬದಲು ಈಗ ಬಸವ ತತ್ತ್ವ ಪ್ರಚಾರಕ್ಕೆ ಹೆಚ್ಚಿನ ಗಮನ ನೀಡಿ, ಅಖಂಡ ಸಮಾಜ ಸಂಘಟನೆಗೆ ಒತ್ತು ಕೊಟ್ಟು ಜನರ ಮನ್ನಣೆಗಳಿಸಿಕೊಳ್ಳುವುದು ಅತ್ಯಂತ ವಿವೇಕಯುಕ್ತವಾದುದು ಎಂದು ಒತ್ತಿ ಒತ್ತಿ ಹೇಳಬಯಸುತ್ತೇನೆ.

ಹೊರಗಿನಿಂದ ಬೆಂಬಲ

ಎನ್.ಡಿ.ಎ ಸರ್ಕಾರ ಒಂದು ಮಾದರಿಯುನ್ನು ಹಾಕಿಕೊಟ್ಟಿದೆ; ವಿಚಾರ ಭಿನ್ನಾಭಿಪ್ರಾಯ,

ಸೈದ್ಧಾಂತಿಕ ವ್ಯತ್ಯಾಸವಿದ್ದರೂ ಕೂಡಿ ಕೆಲಸ ಮಾಡಲು ಬರುತ್ತದೆ ಎಂಬುದನ್ನು ಅದು ಮನದಟ್ಟು ಮಾಡಿದೆ. ಈ ಮಾತನ್ನು ನಾನು ಹೇಳಲು ಕಾರಣವಿದೆ.

ನಾನು ಅಮೆರಿಕಾದಲ್ಲಿ ಇರುವಾಗಲೇ ಶರಣ. ರಾಜಶೇಖರ ಚಂದನಗೌಡರು ತಾವೂ ತಮ್ಮ ಮಗನ ಮನೆಗೆ ಬಂದು ಅಲ್ಲಿಂದ ಆಸ್ಟಿನ್‌ಗೆ ಫೋನ್ ಮಾಡಿದರು. ನಾನು ಸತತವಾದ ಪ್ರವಾಸದಲ್ಲಿದ್ದುದರಿಂದ ಫೋನ್‌ದಲ್ಲಿ ಸಿಕ್ಕಿರಲಿಲ್ಲವಂತೆ. ವಿಶ್ವ ಬಸವ ಧರ್ಮ ಮಹಾಸಭಾ ಸ್ಥಾಪನೆಯ ವಿವರಗಳನ್ನೆಲ್ಲ ತಿಳಿಸಿದರು. ಅದರ ಸಂಘಟನೆಯಲ್ಲಿ ನಾನು ತೊಡಗಿಸಿಕೊಳ್ಳಬೇಕೆಂದು ವಿನಂತಿಸಿ, 'ಲಿಂಗದೇವಾ' ವಚನಾಂಕಿತವನ್ನು ವಾಪಸ್ಸು ಪಡೆಯಬೇಕು ಅಷ್ಟೆ. ಅನೇಕ ವಿರಕ್ತ ಮಠಾಧೀಶರು, ಗಣ್ಯರು ನಮ್ಮೊಡನೆ ಕೂಡಿ ಕಾರ್ಯಮಾಡಲು ಉತ್ಸುಕರಾಗಿದ್ದಾರೆ. ಪ್ರತಿಷ್ಠೆಗೆ ಕಟ್ಟುಬೀಳದೆ ಸಮಾಜದ ಹಿತದೃಷ್ಟಿಯಿಂದ 'ಲಿಂಗದೇವ' ನನ್ನು ಕೈಬಿಡಿರಿ ಎಂದರು. ಸಂಕೇಶ್ವರದ ಡಾ॥ ಶಿವಗೌಡ ಪಾಟೀಲರು, "ಕೆಲವು ಮಠಾಧೀಶರು ನಿಮ್ಮೊಡನೆ ಹೊಂದಿಕೊಂಡು ಸಂಘಟನೆ ಮಾಡಲು ಉತ್ಸುಕರಾಗಿದ್ದಾರೆ. ಮಾತನಾಡಲು ಬಯಸಿದ್ದಾರೆ " ಎಂದು ಫೋನ್ ಮಾಡಿದರು. ದಿ. 29-11-03 ರಂದು ಧಾರವಾಡದಿಂದ ಶರಣ. ಸಿದ್ಧಲಿಂಗದೇಸಾಯಿಯವರು ಫೋನ್ ಮಾಡಿ, "ಕೆಲವರು ನಿಮ್ಮೊಡನೆ ಮಾತನಾಡಲು ಇಷ್ಟಪಟ್ಟಿದ್ದಾರೆ. ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡರೆ ನಿಮ್ಮಿಂದ ಬಹಳಷ್ಟು ಸಾಧನೆಯಾಗುತ್ತದೆ. ಮಾತನಾಡಲು ನಾವು ಬರುತ್ತೇವೆ. ಟೈಂ ಕೊಡಿರಿ" ಎಂದರು. ಊಟಿಯ ಶರಣೆ. ಪುಷ್ಪಾರಿಗೆ "ನೀವು ಮಾತಾಜಿಯವರಿಗೆ ಬಹಳ ಆತ್ಮೀಯರು. ನಮ್ಮನ್ನು ಜೊತೆಗೆ ಕರೆದುಕೊಂಡರೆ ಎಲ್ಲರೂ ಕೂಡಿ ಕೆಲಸ ಮಾಡಬಹುದು ಎಂದು ಹೇಳಿರಿ" ಎಂದು ಅವರಿಗೆ ಕೆಲವರು ಹೇಳಿದರಂತೆ. ಶರಣೆ. ಪಾರ್ವತಿ ಶಿರೋಳ ಅವರಿಗೂ ಕೆಲವರು ಹೀಗೆ ಹೇಳಿದರಂತೆ. ಬಸವ ಸಮಿತಿಯ ಅಧ್ಯಕ್ಷ ಶರಣ. ಅರವಿಂದ ಜತ್ತಿಯವರು ಸಹ ಒಂದು ಕಳಕಳಿಯ ಪತ್ರ ಬರೆದಿದ್ದಾರೆ. ಇವರೆಲ್ಲರೂ ಇಟ್ಟಿರುವ ಅಭಿಮಾನಕ್ಕೆ ಸಂತೋಷವೆನಿಸುತ್ತದೆ.

ಆದರೆ ಈ ಎಲ್ಲರ ಅಪೇಕ್ಷೆಯೂ ಲಿಂಗದೇವ ವಚನಾಂಕಿತ ವಾಪಸ್ಸು ಪಡೆಯಬೇಕೆಂಬುದು. ಈಗ ನನಗೆ ಮಾತ್ರವಲ್ಲ ತೀವ್ರವಾಗಿ ವಚನಾಭ್ಯಾಸ ಮಾಡುತ್ತಿರುವ ಸಹಸ್ರಾರು ಶರಣ-ಶರಣೆಯರಿಗೆ 'ಲಿಂಗದೇವ 'ನೇ ಬಸವ ವಚನಗಳ ಆತ್ಮ; ಅದಿಲ್ಲದ ವಚನವು ಆತ್ಮವಿಲ್ಲದ ದೇಹದಂತೆ ಎಂಬುದು ಮನದಟ್ಟಾಗಿದೆ. ಹಿಂದಕ್ಕೆ ಬರಲಾರದಷ್ಟು ದಾರಿಯನ್ನು ಈಗ ಕ್ರಮಿಸಿಯಾಗಿದೆ. ಲಿಂಗದೇವನನ್ನು ವಾಪಸ್ಸು ಪಡೆಯಲು ನನ್ನನ್ನು ಮನವೊಲಿಸಿದರೂ ನಿಷ್ಠಾವಂತ ಶರಣರ ಮನವೊಲಿಸಲು ಸಾಧ್ಯವಾಗದಂತಾಗಿದೆ.

ಅದಲ್ಲದೆ ಮಠಾಧೀಶರ ಜೊತೆಗೆ ಕೆಲಸ ಮಾಡುವುದು ನಮಗೆ ಬಹಳ ಕಷ್ಟಸಾಧ್ಯದ ಕೆಲಸ. ಏಕೆಂದರೆ ಅವರಿಗೆ ಧೃಢವಾದ ಮನಸ್ಸು ಇರದು; ಹಿಡಿದ ಗುರಿಯನ್ನು ಮುಟ್ಟುವ ತನಕ ಸಾಗಬೇಕೆಂಬ ಛಲವು ಮೊದಲೇ ಇರದು. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರಿಡಬೇಕೆಂಬ ಹೋರಾಟ ಸ್ಥಗಿತಗೊಂಡುದು ಮಠಾಧೀಶರ ಒಳಪಿತೂರಿಯಿಂದಲೇ ! ಇವರ ಒಲುಮೆ, ಸಹಕಾರ ಪಡೆಯಲು 'ಲಿಂಗದೇವ' ಎಂಬ ಸೈದ್ಧಾಂತಿಕ ಸತ್ಯವನ್ನು ನಾನು ಬಲಿಗೊಡಬೇಕೆ ? 1966 ರಿಂದಲೂ ನಾವು ಇಟ್ಟ ಪ್ರತಿ ಹೆಜ್ಜೆಯನ್ನು ವಿರೋಧಿಸಿ, ನಂತರ ಅದನ್ನು ಸರಿ ಎಂದು ಮೆಚ್ಚಿಕೊಳ್ಳುತ್ತ ಬಂದ ಅನೇಕರು

ಇದ್ದಾರೆ. ತಾಯಿಯ ಗರ್ಭದಲ್ಲಿ ಇರುವ ಮಗು ಗಂಡೋ ಹೆಣ್ಣೋ? ಪೂರ್ಣವೋ ಅಂಗವಿಕಲವೋ ಎಂಬುದನ್ನು ಸ್ಕ್ಯಾನಿಂಗ್ ಮಾಡಿದ ವೈದ್ಯರು ಹೇಳಬಲ್ಲರು. ಆದರೆ ಜನ ಸಾಮಾನ್ಯರಿಗೆ ಹೆರಿಗೆ ಆದ ಬಳಿಕ ಮಾತ್ರ ತಿಳಿಯುತ್ತದೆ. ತೀರಾ ಮುಗ್ಧ(ಅಜ್ಞಾನಿ)ರಿಗೆ ಆಗಲೂ ತಿಳಿಯುವುದಿಲ್ಲ. ಒಮ್ಮೆ ಒಂದು ಪುಟ್ಟ ಬಾಲಕಿಯ ತಾಯಿಗೆ ಇನ್ನೊಂದು ಹೆರಿಗೆಯಾಗಿತ್ತು. ಹೆರಿಗೆಯ ನಂತರ ಮನೆಗೆ ಬಂದರು. ಪಕ್ಕದ ಮನೆಯವರು ಬಾಲಕಿಯನ್ನು ಕೇಳಿದರು, 'ಹುಟ್ಟಿರುವುದು ತಮ್ಮನೋ ತಂಗಿಯೊ?' ಅದು ಹೇಳಿತು, 'ಗೊತ್ತಿಲ್ಲ, ಇನ್ನೂ ಫ್ರಾಕ್ ಅಥವಾ ನಿಕ್ಕರ್ ಏನೂ ಹಾಕಿಲ್ಲ' ಎಂದು. ಹಾಗೆ 'ಲಿಂಗದೇವ' ಪದದ ಮಹತಿ, ಉಜ್ವಲ ಭವಿಷ್ಯವನ್ನು ನಾನು ಮೊದಲೇ ಅರಿತಿದ್ದು ಬಳಕೆಗೆ ತಂದೆ. ಕೆಲವರಿಗೆ ಈಗೀಗ ಅರ್ಥವಾಗಿದೆ. ಇನ್ನು ಕೆಲವರಿಗೆ ಇನ್ನೂ ಅರ್ಥವಾಗಿಲ್ಲ; ಅರ್ಥ ಮಾಡಿಕೊಳ್ಳುವ ಮನಸ್ಸು ಇರಲಿಕ್ಕಿಲ್ಲ ಅಥವಾ ಶಕ್ತಿ ಇರಲಿಕ್ಕಿಲ್ಲ. ಇವರನ್ನು ಮೆಚ್ಚಿಸಲು ನಾನು ಒಂದು ತತ್ತ್ವವನ್ನು ಬಲಿಗೊಡಬೇಕೆ?

ತತ್ತ್ವನಿಷ್ಠೆ ಇಲ್ಲದವರೊಡನೆ ಅನುಕೂಲ ಸಿಂಧು ಸಂಬಂಧ ಮಾಡಿದರೆ ಅವರು ಪುನಃ ಯಾವಾಗ ಭಿನ್ನಾಭಿಪ್ರಾಯ ತಳೆಯುವರೋ ತಿಳಿಯದು. ನಮಗೇನೂ ಅಗತ್ಯವಿರದಿದ್ದರೂ 'ಲಿಂಗದೇವ ವಚನಾಂಕಿತ ಬಿಟ್ಟು ನಮ್ಮೊಡನೆ ಸೇರಿರಿ ಒಟ್ಟಾಗಿ ಕೆಲಸ ಮಾಡೋಣ' ಎಂಬ ಆಹ್ವಾನದ ವಿಚಾರವನ್ನು ದಿ. 30-11-03 ರಂದು ಶರಣ ಸಂಗಮದಲ್ಲಿ ಪ್ರಸ್ತಾಪಿಸಿದಾಗ, ಎಲ್ಲ ಶರಣರ ಅಭಿಪ್ರಾಯ, 'ನೀವು ಲಿಂಗದೇವನನ್ನು ಒಪ್ಪಿಕೊಂಡು ಬರುವುದಾದರೆ ಬನ್ನಿ' ಎಂಬ ಕರಾರು ನೀವು ಹಾಕಿರಿ ಎಂಬುದಾಗಿತ್ತು. ಕೆಲವು ಕಾಲದ ನಂತರ ಲಿಂಗದೇವನನ್ನು ಒಪ್ಪಿಕೊಂಡು ಬಂದರೂ, ಅವರೊಡನೆ ಸೇರಿ ಕೆಲಸ ಮಾಡುವುದು ಕಷ್ಟಸಾಧ್ಯ ಎನ್ನಿಸುತ್ತದೆ. ಏಕೆಂದರೆ ಏನಾದರೂ ಹೊರಗಿನ ಒತ್ತಡ ಬಂದರೆ ಹಿಡಿದ ಕೆಲಸವನ್ನು ಕೆಲವರು ಪುಸಕ್ಕನೆ ಕೈಬಿಡುತ್ತಾರೆ. ಇಂಥವರೊಡನೆ ಕೂಡುವುದು ಪುನಃ ದೂರವಾಗುವುದು, ಜನತಾದಳದ ಕೂಡುವಿಕೆಯ ಪರಿಯಂತೆ ನಗೆಪಾಟಲಿಗೆ ಕಾರಣವಾಗುತ್ತದೆ. ಸಂಘಟನೆಗೆ ಕೆಲವು ಸೂತ್ರಗಳು ಬೇಕಾಗುತ್ತವೆ. ಆ ಸೂತ್ರಗಳಿಗೆ ಬದ್ಧರಾಗದವರ ಜೊತೆ ಹೊಂದಾಣಿಕೆ ಮಾಡಿಕೊಳ್ಳುವುದು ಬಹಳ ಕಷ್ಟಕರ. ಇದರಿಂದಾಗಿ ವಿಶ್ವಬಸವ ಧರ್ಮ ಮಹಾಸಭಾ ಅಥವಾ ಯಾವುದೇ ಬಸವ ತತ್ತ್ವಕ್ಕೆ ಬದ್ಧವಾದ ಸಂಸ್ಥೆಯವರ ಕಾರ್ಯಯೋಜನೆಗಳಿಗೆ ಹೊರಗಿನಿಂದಲೇ ಬೆಂಬಲಿಸುತ್ತೇವೆಂಬ ಭರವಸೆ ನೀಡಬಯಸುತ್ತೇನೆ.

★★★

ಲಿಂಗ ನುಡಿಯ ವಚನಗಳು

- ಪೂಜ್ಯ ಶ್ರೀ ಚನ್ನಬಸವಾರಾಜ ಸ್ವಾಮೀಜಿ

- ಶರಣರ ವಚನಗಳು ಜ್ಞಾನ ಭಂಡಾರ, ಅನುಭಾವದ ಮೇರು ಪರ್ವತಗಳು. ನಮಗೆ ತಿಳಿದಿರುವಂತೆ ಇಂದಿನವರೆಗೆ ಶರಣರ ವಚನಗಳ ಸಾರ ಸಂದೇಶವನ್ನು ಸಂಪೂರ್ಣವಾಗಿ ತಿಳಿದವರು ಬಸವಾದಿ ಶರಣರನ್ನು ಬಿಟ್ಟರೆ ಮತ್ತಾರೂ ಇಲ್ಲವೆಂದರೆ ತಪ್ಪಾಗಲಾರದು.

- ಸಾವಿರ ಸಾವಿರ ಲಕ್ಷ ವರ್ಷಗಳಿಂದ ಒಂದು ಸಮಾಜದಲ್ಲಿದ್ದ ವಿಚಾರ, ಭಾವನೆಗಳು ಸುಧಾರಣೆಯಾಗದೆ, ಪರಿವರ್ತನೆಯಾಗದೆ ಕೊಳೆತು ನಾರುತ್ತಿದ್ದುದನ್ನು, ಆ ವ್ಯವಸ್ಥೆಯನ್ನು ಶರಣರು ಗುರುತಿಸಿದರು. ತಮ್ಮದೊಂದು ಅತ್ಯುತ್ತಮ ನೂತನ ಪರಿಪೂರ್ಣ ವ್ಯವಸ್ಥೆಯನ್ನು ನಿರ್ಮಿಸಿ, ಸಾಧಿಸಿ, ಸಿದ್ಧಿಸಿ ಕೊಟ್ಟು ಹೋದರು. ಇದೆಲ್ಲ ಕೇವಲ 36 ವರ್ಷಗಳಲ್ಲಿ ಆದದ್ದು ಎಂಬುದು ಅಕ್ಷರಶಃ ಸತ್ಯ ಸತ್ಯ ಸತ್ಯ. ಇದನ್ನು ನಾವು ಆಮೂಲಾಗ್ರವಾಗಿ ತಿಳಿಯಬೇಕಾದರೆ ವಚನ ಸಾಹಿತ್ಯವನ್ನು ತಪ್ಪದೆ ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕಾಗುತ್ತದೆ.

- ವಚನಗಳಲ್ಲಿ ಬಾಹ್ಯತಃ ಅವ್ಯವಸ್ಥಿತವಾಗಿ ಕಂಡರೂ, ಅವುಗಳಲ್ಲಿ ಒಂದು ವ್ಯವಸ್ಥೆಯೂ, ಏಕರೂಪತೆಯೂ, ಏಕವಿಚಾರಸರಣಿಯೂ ಇದೆ. (ಫ. ಗು. ಹಳಕಟ್ಟಿ)

- ಶರಣರು ಅನುಭವ ಮಂಟಪದಲ್ಲಿ ಹಾಗೂ ಇನ್ನಿತರೆ ಕಡೆಗಳಲ್ಲಿ ನಿರಂತರ ಅನುಭಾವ ಗೋಷ್ಠಿ(ಚರ್ಚೆ) ನಡೆಸುತ್ತಿದ್ದರು. ಆಗ ಅವರ ಚರ್ಚೆಯು ವಚನಗಳ ಮೂಲಕ ನಡೆಯುತ್ತಿತ್ತು. ಈ ಹಿನ್ನೆಲೆಯಲ್ಲಿ ನೋಡಿದಾಗ ಅನೇಕ ವಚನಗಳು ಚರ್ಚಾವಿಷಯದ ಆದಿ, ಮಧ್ಯ, ಅಂತ್ಯದ ಸ್ಥಿತಿಗಳನ್ನು ತಿಳಿಸುತ್ತವೆ. ಕೊನೆಗೆ ಬಂದ ನಿರ್ಣಯದ ವಚನಗಳು ಕೆಲವು ಇವೆ. ಆದ್ದರಿಂದ ವಚನಗಳ ಅಧ್ಯಯನವು ಎಚ್ಚರಿಕೆಯಿಂದ ಮಾಡಬೇಕು. ವಚನಗಳಲ್ಲಿ ಪ್ರತಿಪಾದಿತವಾಗಿರುವ ಶರಣ ಸಿದ್ಧಾಂತವನ್ನು ಆಧರಿಸಿ ನಮ್ಮ ಬದುಕಿರಬೇಕು.

- ಭಾಷೆ ತನಗೆ ತಾನೆ ಒಳ್ಳೆಯದೂ ಅಲ್ಲ ಕೆಟ್ಟದ್ದು ಅಲ್ಲ. ಅದನ್ನು ಬಳಸುವವರನ್ನು ಅದು ಅವಲಂಭಿಸಿರುತ್ತದೆ. ಬಳಸುವವರು ಕೆಟ್ಟದ್ದಾಗಿ ಬಳಸಿದರೆ ಅದು ತನ್ನ ಗೌರವವನ್ನು ಕಳೆದುಕೊಳ್ಳುತ್ತದೆ. ಒಳ್ಳೆಯದಕ್ಕೆ ಬಳಸಿದರೆ ಉತ್ತಮ ಸ್ಥಾನ ಪಡೆದುಕೊಳ್ಳುತ್ತದೆ.

- ಶರಣರು ಬಳಸಿದ ಭಾಷೆಯೆ ಬಹಳ ಅದ್ಭುತವಾದುದು. ಅವು ಕೇವಲ ಶಬ್ದಗಳಾಗಿರದೆ, ಸದ್ ಭಾವನೆಗಳಿಂದ ತುಂಬಿರುವವು. ಗೌರವಪೂರ್ಣವಾಗಿ ಹೊರಹೊಮ್ಮುವವು. ದೇವತ್ವದ ನೆಲೆಗಳಾಗಿರುವವು.

- ಸಾಮಾನ್ಯ ಜನರ ಭಾಷೆಯನ್ನು ಶರಣರು ಮಾತನಾಡಲೇ ಇಲ್ಲ. ಲಿಂಗನುಡಿ, ಲಿಂಗದರಿವು, ಲಿಂಗದಿರವು, ಲಿಂಗದಾನಂದ, ಲಿಂಗದನುಭಾವ, ಲಿಂಗಪರಿಣಾಮ, ಲಿಂಗ ಲೀಲೆಗಳನ್ನು ನುಡಿದರು. ಅವೇ ವಚನಗಳು.

- ಶರಣರ ನುಡಿಯಲ್ಲಿ, ಅವರು ಬಳಸುವ ಭಾಷೆಯಿಂದ, ಮೈ ಮನ, ಭಾವಗಳು ಪುಳಕಗೊಂಡು ಜಾಗೃತವಾಗುತ್ತವೆ. ಅಂತರಂಗವನ್ನು ಬಡಿದೆಬ್ಬಿಸುತ್ತವೆ. ಜಡತ್ವ ಓಡಿಸಿ ಚೈತನ್ಯ

ತುಂಬುತ್ತದೆ. ಆತ್ಮೀಯತೆಯಿಂದ ಬೆನ್ನು ಚಪ್ಪರಿಸುತ್ತವೆ. ನಿಧಾನವಾಗಿ ಅಂತರಂಗವನ್ನಾಕ್ರಮಿಸಿ ಮಧುರ ಭಾವನೆಗಳನ್ನುಂಟು ಮಾಡುತ್ತವೆ.

– ಮಾನವನು ತನ್ನ ಭಾವನೆಗಳನ್ನು ವ್ಯಕ್ತ ಪಡಿಸಲು, ವಿಚಾರಗಳನ್ನು ಮಂಡಿಸಲು, ಬದುಕಿನ ರಸವನ್ನು ಅನುಭವಿಸಲು ಒಂದು ಭಾಷೆಯನ್ನು ನಿರ್ಮಿಸಿಕೊಂಡಿರುವನು. ತನ್ನ ಪರಿಸರ ಸಂಸ್ಕೃತಿ ಧರ್ಮಗಳಿಗೆ ತಕ್ಕಂತೆ ಭಾಷೆಯು ಹುಟ್ಟುತ್ತದೆ. ಒಂದು ಭಾಷೆಯನ್ನು ಅರಿಯುವುದೆಂದರೆ ಒಂದು ಸಂಸ್ಕೃತಿಯನ್ನು, ಒಂದು ಜನಾಂಗವನ್ನೇ ಅರಿತಂತೆ. ಇದೇ ರೀತಿಯಲ್ಲಿ ಪ್ರತಿಯೊಂದು ಧರ್ಮಗಳೂ ಸಹ ತಮ್ಮಲ್ಲಿರುವ ತತ್ತ್ವಜ್ಞಾನದ ಪ್ರತಿಪಾದನೆಗಾಗಿ, ನಿಜ ಮುಕ್ತಿಯನ್ನು ಪಡೆಯಲು, ಪರಾತ್ಪರವಸ್ತು ಪರಮಚೈತನ್ಯ ಲಿಂಗದೇವನ ಸಾಕ್ಷಾತ್ಕಾರಕ್ಕಾಗಿ ತಮ್ಮದೇ ಆದ ಪದಪುಂಜವನ್ನು ಬಳಸಿರುವುದು ಬಹಳ ವಿಶೇಷವಾಗಿದೆ.

– ಶರಣರು ಕೊಟ್ಟಂತಹ ಧರ್ಮ ಸಂಹಿತೆ ವಚನ ಸಾಹಿತ್ಯದಲ್ಲಿ ಗಮನಹರಿಸಿದಾಗ ಬಹಳ ವಿಶೇಷವಾದ, ಶಕ್ತಿ ಹಾಗೂ ಸತ್ವಯುತವಾದ ಪ್ರಕ್ರಿಯಾತ್ಮಕ ಪದಪುಂಜವನ್ನು ಬಳಸಲಾಗಿದೆ.

– ಶರಣ ಬಳಗವು ವೈದಿಕ, ಜೈನ, ಬೌದ್ಧ, ಶೈವ ಸಂಸ್ಕೃತಿಗಳಿಂದ ಭಿನ್ನವಾದ ತನ್ನದೇ ಆದ ಧರ್ಮ ಮತ್ತು ಸಂಸ್ಕೃತಿಯನ್ನು ಸ್ಥಾಪಿಸಿತು. ಈ ಶರಣ ಸಂಸ್ಕೃತಿಯು ಅಂದಿನವರೆಗೆ ಇದ್ದ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ತತ್ತ್ವ ಸಿದ್ಧಾಂತಗಳ ಮೂಲವನ್ನೇ ಪ್ರಶ್ನಿಸಿತು ಹಾಗೂ ಅದರ ಮೂಲವನ್ನೇ ಬುಡಮೇಲು ಮಾಡಿತು. ವಿಭಿನ್ನ ಮತ್ತು ಸತ್ಯವಾದ ಜೀವನ ಮೌಲ್ಯಗಳನ್ನು ಜೀವನ ಸಿದ್ಧಾಂತವನ್ನು, ಅನುಭವ ಮತ್ತು ಅನುಭಾವ ಪ್ರಮಾಣಗಳನ್ನಾಧರಿಸಿ ವಚನ ಸಾಹಿತ್ಯದ ಮೂಲಕ ಜಗತ್ತಿಗೆ ಕಾಣಿಕೆಯಾಗಿ ನೀಡಿತು. ಆದ್ದರಿಂದ ಶರಣರನ್ನು, ಅವರ ಸಾಧನೆ, ಸಿದ್ಧಿ, ಸಂಸ್ಕೃತಿ, ಪರಂಪರೆ, ನಡೆದು ಬಂದ ದಾರಿಯ ಸತ್ಯದರ್ಶನವಾಗಬೇಕಾದರೆ ಅವರ ಹೃದಯಾಂತರಾಳದಿಂದ ಹೊರಹೊಮ್ಮಿ ಉಪಮಾತೀತವಾಗಿ ರಚಿತವಾಗಿರುವ ವಚನ ಸಾಹಿತ್ಯವನ್ನು ಅಭ್ಯಸಿಸಬೇಕಾಗುತ್ತದೆ.

– ವಚನ ಸಾಹಿತ್ಯವನ್ನು ಅಭ್ಯಸಿಸಬೇಕಾಗಿರುವುದು ಎಷ್ಟು ಸತ್ಯವೋ, ಅದರ ಸಾರವನ್ನು ವಿಚಾರಗಳಿಂದ ಅರಿಯಲಾಗದೆ ಅದನ್ನು ಆಚರಣೆಗೆ ತಂದಾಗ ಮಾತ್ರ ಅದರ ಪೂರ್ಣಜ್ಞಾನವಾಗುವುದೆಂಬುದು ಅಷ್ಟೇ ಸತ್ಯ.

– ವಚನ ಸಾಹಿತ್ಯವು ಒಂದು ಅನುಭಾವ ಸಾಹಿತ್ಯವಾಗಿದೆ. ವಚನ ಸಾಹಿತ್ಯವನ್ನು ಸಾಮಾನ್ಯ ಗ್ರಂಥ, ಪುರಾಣ, ಕಥೆ, ಕಾದಂಬರಿಗಳನ್ನು ಓದಿದಂತೆ ಓದಲು ಸಾಧ್ಯವಿಲ್ಲ. ಅದನ್ನು ಓದುವುದೇ ಒಂದು ವಿಶೇಷ. ಅಂತರಂಗದಲ್ಲಿ ವಿವಿಧ ವಿಚಾರ ಮತ್ತು ಭಾವನೆಗಳನ್ನಿರಿಸಿಕೊಂಡು ವಚನ ಸಾಹಿತ್ಯ ಓದಿದರೆ ಅದರಲ್ಲಿನ ಒಂದಕ್ಷರವೂ ಅರ್ಥವಾಗದು. ತೆರೆದ ಹೃದಯ, ಬುದ್ಧಿಗಳಿಂದ, ಭಕ್ತಿ ವಿಶ್ವಾಸಗಳನ್ನಿರಿಸಿ, ಏಕಾಗ್ರ ಚಿತ್ತರಾಗಿ ಪ್ರಯತ್ನಿಸಿದಾಗ ವಚನ ಸಾಹಿತ್ಯದ ವಿರಾಟ್ ಸ್ವರೂಪದ ದರ್ಶನವಾಗುತ್ತದೆ. ಅದನ್ನು ಎಷ್ಟುಸಾರಿ ಮತ್ತೆ ಮತ್ತೆ ಓದಿದಂತೆಲ್ಲ ಅದು ತನ್ನ ಒಡಲಿನ ಆಳಕ್ಕೆ ಆಳಕ್ಕೆ ಕರೆದೊಯ್ಯುತ್ತದೆ.

– ಶರಣರ ಪ್ರತಿಯೊಂದು ವಚನವೂ ಒಂದು ಶರೀರವನ್ನು ಹೊಂದಿದೆ. ಅವಕ್ಕೆ ಒಂದು ಮನಸ್ಸಿದೆ. ಅಲ್ಲಿ ಒಂದು ವಿಚಾರವಿದೆ. ಅದರಲ್ಲಿ ಭಾವವಿದೆ. ಅದು ಅನುಭಾವವನ್ನೊಳಗೊಂಡಿದೆ. ಎಲ್ಲದರ ಹಿಂದೊಂದು ಆತ್ಮವಿದೆ.

– ಋಣಾತ್ಮಕ ಬದುಕಿನ ಹಾದಿಯಿಂದ ಧನಾತ್ಮಕ ಅರಿವಿನ ಬದುಕಿಗೆ ಬರಬೇಕಾಗಿದೆ. ಧನಾತ್ಮಕ ಬದುಕಿನ ಮಹತ್ವ, ಅನುಭವ, ಆನಂದಗಳನ್ನು ಅರಿಯುವಂತಾಗಲು ಶರಣರ ಕೊಡುಗೆಯಾದ ವಚನ ಸಾಹಿತ್ಯವನ್ನು ಅಧ್ಯಯನಿಸಿ, ಆಚರಿಸಿ, ಅನುಭವಿಸಬೇಕಾಗಿದೆ.

– ಶರಣರು ರಚಿಸಿದ ವಚನ ಸಾಹಿತ್ಯವು ಅಗಾಧವಾದುದು. ಪ್ರತಿಯೊಂದು ವಚನವೂ ತನ್ನದೇ ಆದ ವಿಶೇಷತೆಯನ್ನು ಒಳಗೊಂಡಿದೆ. ವಚನಗಳ ಅಧ್ಯಯನಕ್ಕಾಗಿ 'ವಚನಾಧ್ಯಯನ ವಿಧಾನ' ಕ್ಯಾಟಲಾಗ್ ತಯಾರಿಸಲಾಗಿದೆ. ಇದೇ ಅಂತಿಮವೆಂದು ಹೇಳಲಾರೆ. ಇದು ಒಂದು ಸಣ್ಣ ಪ್ರಯತ್ನವಷ್ಟೆ. ಈ ಕ್ಯಾಟಲಾಗ್‌ನ ಬಳಕೆಯಿಂದ ಆದಷ್ಟು ಶರಣರ ಹತ್ತಿರಕ್ಕೆ ಹೋಗಲು ಸಾಧ್ಯವೆಂದು ತಿಳಿದಿರುವೆವು.

– ಬೇರೆ ಅನೇಕ ಸಂಶೋಧಕರು, ಸಾಧಕರು ಇನ್ನೂ ಅನೇಕ ಪದ್ಧತಿ ಬಳಸಿರಬಹುದು. ಸಾಧಕರು, ಅಧ್ಯಯನಾಪೇಕ್ಷಿಗಳು, ಅವುಗಳನ್ನು ಸಹ ಸಂಗ್ರಹಿಸಿ ಬಳಸಿಕೊಳ್ಳಬಹುದು.

– ಸೂಚನೆ :

1. ಇಂದಿನವರೆಗೆ ವಚನಗಳನ್ನು ವಿಷಯಕ್ಕನುಸಾರವಾಗಿ ಹೊಂದಿಸಲ್ಪಟ್ಟಿಲ್ಲ. ಗ್ರಂಥಗಳಲ್ಲಿ ಸಂಗ್ರಹಕಾರರು ತಮಗೆ ಸಿಕ್ಕ ವಚನಗಳನ್ನು ತಮಗೆ ಬೇಕಾದ ರೀತಿಯಲ್ಲಿ ಕೂಡಿಸುತ್ತಾ ಹೋಗಿದ್ದಾರೆ. (ಫ. ಗು. ಹಳಕಟ್ಟಿ)

2. ವಚನಗಳಲ್ಲಿ ಈ 850 ವರ್ಷಗಳಲ್ಲಿ ಶರಣ ಸಿದ್ಧಾಂತಗಳ ಜೊತೆಗೆ ವೈದಿಕ ಸಿದ್ಧಾಂತ ಹಾಗೂ ಶೈವ (ವೀರಶೈವ) ಸಿದ್ಧಾಂತಗಳು ಮಿಶ್ರಗೊಂಡಿವೆ. ಆದ್ದರಿಂದ ವಚನಗಳನ್ನು ಅವುಗಳಲ್ಲಿರುವ ಬೇರೆ ಸಿದ್ಧಾಂತಗಳನ್ನು ಹೊರತು ಪಡಿಸಿ ಶರಣ ಸಿದ್ಧಾಂತದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕು.

ವಚನಾಧ್ಯಯನ ವಿಧಾನ

1. ಬಸವಾದಿ ಪ್ರಮಥ ಶರಣರ ವಚನಗಳು :
   - ಅ. ವಿಶ್ವಗುರು ಬಸವಣ್ಣನವರ ವಚನಗಳು,
   - ಆ. ಅಲ್ಲಮಪ್ರಭುದೇವರ ವಚನಗಳು
   - ಇ. ಚನ್ನಬಸವಣ್ಣನವರ ವಚನಗಳು,
   - ಈ. ಸಿದ್ಧರಾಮೇಶ್ವರರ ವಚನಗಳು
   - ಉ. ಅಕ್ಕಮಹಾದೇವಿ ವಚನಗಳು,
   - ಊ. ಮಡಿವಾಳ ಮಾಚಿದೇವರ ವಚನಗಳು
   - ಋ. ಇನ್ನಿತರ ಶರಣರ ವಚನಗಳು

2. (ವಚನದ ವಿವಿಧ ಹಂತಗಳು) ವಿವಿಧ ಹಂತದ ವಚನಗಳು :
   - ಅ. ಬೆಡಗಿನ ವಚನ, ಆ. ಸ್ವರವಚನ, ಇ. ಕಾಲಜ್ಞಾನ ವಚನ, ಈ. ತಾತ್ತ್ವಿಕ ವಚನ
   - ಉ. ಆತ್ಮ ನಿರೀಕ್ಷಣೆಯ ವಚನ, ಊ. ಅನುಭಾವದ ವಚನ
   - ಋ. ತಾತ್ತ್ವಿಕ ಶಬ್ದ ಬಳಕೆಯ ವಚನ, ೠ. ಪೌರಾಣಿಕ ಶಬ್ದ ಬಳಕೆಯ ವಚನ

3. ವಚನ ಸ್ವರೂಪ :
   - ಅ. ಪ್ರಶ್ನಾತ್ಮಕ ರೂಪ, ಆ. ಉತ್ತರ ರೂಪ, ಇ. ಪ್ರಶ್ನೆ ಮತ್ತು ಉತ್ತರ ರೂಪ
   - ಈ. ಪ್ರಾರ್ಥನೆಯ ವಚನ, ಉ. ಚರ್ಚೆಯ ರೂಪ, ಊ. ಉಪದೇಶದ ರೂಪ
   - ಋ. ಸಂದೇಶ ರೂಪ, ೠ. ಸಂಭಾಷಣೆಯ ರೂಪ, ಎ. ಆಶ್ಚರ್ಯ ರೂಪ

4. ವಚನಾಂಶಗಳು :

ಅ. ಪ್ರತಿಯೊಂದು ವಾಕ್ಯಕ್ಕೆ ಸಂಖ್ಯೆ ನಮೂದಿಸುವುದು

ಆ. ವಚನ ಬರೆದ ಸಂದರ್ಭ ಸನ್ನಿವೇಶಗಳ ವಿವೇಚನೆ

ಇ. ಬರೆದ ಉದ್ದೇಶ, ಈ. ಶಬ್ದಾರ್ಥ

ಉ. ವಾಚ್ಯಾರ್ಥ (ವಚನದ ಬಹಿರಂಗ ರೂಪ : ಸ್ಥೂಲ ರೂಪ)

ಊ. ಭಾವಾರ್ಥ (ವಚನದ ಅಂತರಂಗ ರೂಪ : ಸೂಕ್ಷ್ಮ ರೂಪ)

ಋ. ಸ್ಥಲ ಕಟ್ಟಿನ ವಿಭಜನೆಯನ್ನು ಗುರುತಿಸುವುದು

ೠ. ವಚನದಿಂದಾಗುವ ಪರಿಣಾಮಗಳು (ಅಂದು-ಇಂದು)

ಎ. ಅಭಿಪ್ರಾಯ, ಐ. ಪ್ರಮುಖ ಸೂತ್ರಗಳು

ವಚನಾಧ್ಯಯನ ವಿಧಾನ

- ಶರಣರ ವಚನಗಳನ್ನು ಸ್ಥೂಲವಾಗಿ ಮತ್ತು ಸೂಕ್ಷ್ಮವಾಗಿ ಅಧ್ಯಯನ ಮಾಡುವ ಸಲುವಾಗಿ ಈ ಕ್ಯಾಟಲಾಗ್ ತಯಾರಿಸಲಾಗಿದೆ. ಈ ಕ್ಯಾಟಲಾಗ್‌ನಲ್ಲಿ ಮುಖ್ಯವಾಗಿ

1. ಬಸವಾದಿ ಪ್ರಮಥ ಶರಣರ ವಚನಗಳು
2. (ವಚನದ ವಿವಿಧ ಹಂತಗಳು) ವಿವಿಧ ಹಂತದ ವಚನಗಳು
3. ವಚನ ಸ್ವರೂಪ ಮತ್ತು
4. ವಚನಾಂಶಗಳು ಎಂಬ ನಾಲ್ಕು ವಿಭಾಗಗಳಿವೆ.

1. ಬಸವಾದಿ ಪ್ರಮಥ ಶರಣರ ವಚನಗಳು :

- ಈ ವಿಭಾಗದಲ್ಲಿ ಷಡ್‌ಗಣಾಧೀಶರು (ಆರುಜನ ಪ್ರಮುಖ ಶರಣರ) ಹೆಸರನ್ನು ನಮೂದಿಸಲಾಗಿದೆ. (2)ದಲ್ಲಿ ಇನ್ನಿತರೆ ಶರಣರ ವಚನಗಳು ಎಂದು ನಮೂದಿಸಲಾಗಿದೆ. ಶರಣರ ಸಂಖ್ಯೆ ಲಕ್ಷದ ಮೇಲೆ ತೊಂಭತ್ತಾರು ಸಾವಿರ (1,96,000) ಎಂದು ಕೆಲವರು ಹೇಳಿದರೆ ಮಡಿವಾಳ ಮಾಚಿದೇವರ ವಚನದಲ್ಲಿ ಎರಡುಲಕ್ಷ ಹದಿನಾರು ಸಾವಿರವೆಂದು ದಾಖಲಾಗಿದೆ. ಶರಣರ ಸಂಖ್ಯೆ ವಿಪರೀತವಾಗಿದೆ. ಅದರಲ್ಲೂ ವಚನಕಾರರನ್ನು 360 ಜನರನ್ನು ಇಲ್ಲಿನವರೆಗೆ ಗುರುತಿಸಲಾಗಿದೆ. ಇನ್ನು ಅನೇಕರಿದ್ದಾರೆ. ಈ ದಿಶೆಯಲ್ಲಿ ಸಂಶೋಧನೆಗಳು ನಡೆಯುತ್ತಲಿವೆ. ಎಲ್ಲರ ಹೆಸರನ್ನು ಬರೆಯುತ್ತಾ ಹೋದರೆ ಕ್ಯಾಟಲಾಗ್‌ಗೆ ರೂಪಕೊಡುವುದು ಕಷ್ಟಸಾಧ್ಯವಾದ ಕಾರಣ ಈ ರೀತಿ ವಿಭಾಗಿಸಲಾಗಿದೆ.

- ಒಂದು ವಚನ ಕೈಗೆತ್ತಿಕೊಂಡಾಗ ಅಧ್ಯಯನಕ್ಕೆ ತೊಂದರೆಗಳು ಬಹಳವಿರುತ್ತವೆ. ಈಗ ಕೈಯಲ್ಲಿನ ವಚನ ಯಾವ ಶರಣರದೆಂದು ಮೊದಲಿಗೆ ಗುರುತಿಸಿಕೊಂಡರೆ ಕೆಲಸ ಸುಲಭವಾಗುತ್ತದೆ. ಇಂಥ ಶರಣರದೆಂದು ತಿಳಿದಾಗ ನಮ್ಮ ಕಣ್ಣ ಮುಂದೆ ಅವರ ಜೀವನ ಚರಿತ್ರೆ, ಸಂದರ್ಭಗಳು, ಘಟನೆಗಳು, ಅವರ ಸಾಧನೆ, ಸೇವೆಯ ಕ್ಷೇತ್ರ, ಕಾಯಕ ದಾಸೋಹ ನಿಷ್ಠೆ ಅವರ ಯೋಗದ ಆಳ ಅರಹುಗಳು ಬಂದು ನಿಲ್ಲುತ್ತವೆ. ಇದರಿಂದ ನಮ್ಮ ವಿಚಾರಧಾರೆಗೆ, ಆಲೋಚನೆಗಳಿಗೆ ಒಂದು ಚೌಕಟ್ಟನ್ನು ನಿರ್ಮಿಸಿದಂತಾಗುತ್ತದೆ.

- ವಚನಗಳಲ್ಲಿರುವ ವಚನಾಂಕಿತಗಳನ್ನಾಧರಿಸಿ ಶರಣರನ್ನು ಹೆಸರಿಸಬಹುದು. ಉದಾ:

ಕೂಡಲಸಂಗಮದೇವಾ ಮತ್ತು ಲಿಂಗದೇವ ಎಂಬ ವಚನಾಂಕಿತಗಳಿದ್ದರೆ ಅವು ಗುರು ಬಸವಣ್ಣನವರ ವಚನಗಳು.

- ಊರಿಗೆ ದಾರಿಯನ್ನು ಆರು ತೋರಿದರೇನು ಎಂಬುದು ಕೆಲವರ ಅಭಿಮತ : ಊರು ಸೇರುವುದು ನಮಗೆ ಬಹಳ ಮುಖ್ಯ ಆದರೆ ಈಗಾಗಲೇ ಊರು ಸೇರಿರುವ, ಸಾಧಿಸಿರುವವರ ಬಗ್ಗೆಯೂ ತಿಳಿದು ಅವರಿಗೆ ಗೌರವ ಸಲ್ಲಿಸುವುದೂ ಸಹ ಅಷ್ಟೇ ಮುಖ್ಯ. ಆದ್ದರಿಂದ ವಚನಗಳ ಅಧ್ಯಯನದ ಜೊತೆ ಜೊತೆಯಲ್ಲೇ ಶರಣರನ್ನು ಅವರ ಬದುಕನ್ನು ಅರಿಯುವುದು ಅವಶ್ಯಕ.

2. ವಚನದ ವಿವಿಧ ಹಂತಗಳು/ ವಿವಿಧ ಹಂತದ ವಚನಗಳು ಎಂದು ಎರಡನೆ ವಿಭಾಗದಲ್ಲಿ ತೋರಿಸಲಾಗಿದೆ.

- ವಚನಗಳನ್ನು ಇದರಲ್ಲಿರುವಂತೆ ವಿವಿಧ ಹಂತಗಳಲ್ಲಿ ವಿಂಗಡಿಸಬಹುದು. ಈ ರೀತಿ ವಿಂಗಡಿಸಿದ ಪ್ರತಿಯೊಂದು ವಚನದಲ್ಲಿಯೂ ಈ ಎಲ್ಲಾ ಅಂಶಗಳು ಕಂಡುಬರುತ್ತವೆ. ಕೆಲವೊಮ್ಮೆ ಇವುಗಳಲ್ಲಿನ ಕೆಲವು ಮಾತ್ರ ಕಂಡುಬರುತ್ತವೆ.

3. ಮೂರನೆ ವಿಭಾಗ ವಚನ ಸ್ವರೂಪ :

- ಶರಣರು ಗೋಷ್ಠಿಯಲ್ಲಿ ಭಾಗಿಯಾದಾಗ, ಕಾಯಕದ ವೇಳೆಯಲ್ಲಿ, ಬದುಕಿನ ಅನೇಕ ಪ್ರಸಂಗಗಳಲ್ಲಿ ವಚನಗಳನ್ನು ರಚಿಸಿದರು. ಇದು ಕೇವಲ ಸಾಹಿತ್ಯ ರಚನೆಯಾಗಿರದೆ ಇವು ಅನುಭಾವದ ನುಡಿಗಳಾದವು. ಆದ್ದರಿಂದ ಈ ವಿಭಾಗದಲ್ಲಿ ಸಂದರ್ಭಗಳಿಗೆ ತಕ್ಕಂತೆ ಪ್ರತಿಪಾದಿತವಾದ ವಚನಗಳ ಸ್ವರೂಪವನ್ನು ಚಿಂತನೆಗೈಯಬಹುದು.

4. ನಾಲ್ಕನೆಯದಾದ ವಚನಾಂಶಗಳು ವಿಭಾಗದಲ್ಲಿ :

- ಈ ವಿಭಾಗದಂತೆ ಈಗಾಗಲೇ ಅನೇಕ ಶರಣರು ವಚನ ಚಿಂತನೆಯಲ್ಲಿ ತೊಡಗಿರುವರು. ಇದರಲ್ಲಿನ ಅಂಶಗಳಂತೆ ಚಿಂತನೆ ಗೈದರೇನೆ ವಚನದ ಆಳವಾದ ಜ್ಞಾನವುಂಟಾಗುತ್ತದೆ. ಮೊದಮೊದಲು ಪ್ರಾರಂಭದಲ್ಲಿ ಈ ಒಂದು ವಿಭಾಗವನ್ನು ಅಳವಡಿಸಿಕೊಂಡರೆ ಸಾಕು. ಇಲ್ಲಿ 4 ನೇ ವಿಭಾಗದಿಂದ ಒಂದನೆ ವಿಭಾಗಕ್ಕೆ ಅಥವಾ 1 ರಿಂದ 4 ಹೀಗೆ ಹೇಗೆ ಬೇಕಾದರೂ ಅಧ್ಯಯನ ಕೈಗೊಳ್ಳಬಹುದು. ಪ್ರತಿಯೊಬ್ಬ ಸಾಧಕರಿಗೂ ಗುರುಬಸವಣ್ಣ ಸೃಷ್ಟಿಕರ್ತ ಲಿಂಗದೇವನ ಅನುಗ್ರಹವಿರಲೆಂದು ಹಾರೈಸುತ್ತಾ.

★★★

ಭಕ್ತಿ ಯೋಗ

- ಶರಣೆ. ಸರೋಜಮ್ಮ ನಾಗರಾಜು

ಹಾಡಿದಡೆ ಎನ್ನೊಡೆಯನ ಹಾಡುವೆ
ಬೇಡಿದಡೆ ಎನ್ನೊಡೆಯನ ಬೇಡುವೆ
ಒಡೆಯಂಗೊಡಲ ತೋರಿ ಎನ್ನ ಬಡತನವ ಬಿನ್ನೈಸುವೆ
ಒಡೆಯ ಮಹಾದಾನಿ ಲಿಂಗದೇವನಿಗೆ ಸೆರಗೊಡ್ಡಿ ಬೇಡುವೆ - ಅಪ್ಪ ಬಸವಣ್ಣನವರು

ಈ ವಚನದಲ್ಲಿ ಧರ್ಮಪಿತ ಬಸವಣ್ಣನವರು ಬೇಡಿದರೆ, ಸ್ತುತಿಸಿದರೆ ಸೃಷ್ಟಿಕರ್ತನಾದ

ಪರಮಾತ್ಮನನ್ನೇ ಬೇಡಬೇಕು, ಸ್ತುತಿಸಬೇಕೆಂದು ಸಂದೇಶಕೊಟ್ಟಿದ್ದಾರೆ. ಆದರೆ ನಾವಿಂದು ಸೃಷ್ಟಿಕರ್ತ ಪರಮಾತ್ಮನನ್ನು , ಧರ್ಮಕರ್ತ ಗುರು ಬಸವಣ್ಣನವರನ್ನು ಪ್ರಾರ್ಥಿಸುತ್ತೇವೆ, ಸ್ತುತಿಸುತ್ತೇವೆ ಮತ್ತು ಇತರರಿಗೂ ಹಾಗೆ ಮಾಡಿರೆಂದು ಹೇಳುತ್ತೇವೆ. ಹೀಗೆ ಹೇಳಿದಾಗ ಒಮ್ಮೆ ಯಾರೋ ಕೇಳಿದರು- ಗುರು ಬಸವಣ್ಣನವರು ಪರಮಾತ್ಮನನ್ನು ಮಾತ್ರ ಪ್ರಾರ್ಥಿಸಲು, ಸ್ತುತಿಸಲು ಹೇಳಿದ್ದಾರೆ. ಗುರುವನ್ನು ಪ್ರಾರ್ಥಿಸಿ, ಸ್ತುತಿಸಿ ಎಂದು ಹೇಳಿಲ್ಲ, ನೀವು ಹೇಳುತ್ತಿದ್ದೀರಲ್ಲ ಎಂದು. ಆಗ ನನಗೆ ವೀರ ಮಹಾಂತೇಶ್ವರರ ಈ ಪ್ರಾರ್ಥನಾ ಗೀತೆ ನೆನಪಿಗೆ ಬಂದು ಅದನ್ನು ಹೇಳಿ, ನಂತರ ನನಗೆ ತಿಳಿದಂತೆ ಉತ್ತರ ಕೊಟ್ಟೆ. ವೀರ ಮಹಾಂತೇಶ್ವರರ ಪ್ರಾರ್ಥನಾ ಗೀತೆಯ ಕೆಲವು ಸಾಲುಗಳು ಹೀಗಿವೆ.

ಎನ್ನೊಡೆಯ ಬಸವಣ್ಣ ಕಾಪಾಡು ಜಗದಣ್ಣ
ನಿನ್ನಡಿಗಳೆರಡನ್ನು ಹಿಡಿದು ಬೇಡುವೆ ನಾನು ||ಪ||
ನಿನ್ನೊಬ್ಬನನೆ ಪೊರೆದಂತ ಸಂಗಮನು ಗುರು ನಿನಗೆ
ಎಲ್ಲರನೂ ಪೊರೆದಂತ ಬಸವಣ್ಣ ಗುರು ಎನಗೆ
ಎನ್ನ ನುಡಿಯನು ಕೇಳಿ ಏನಾದರೂ ನೀನನ್ನು
ವೀರ ಮಹಂತನ ಭಾಗ್ಯ ನಿನಗಿಂತ ಚೆನ್ನು.

ವೀರ ಮಹಾಂತೇಶ್ವರ ಶರಣರಷ್ಟೇ ಅಲ್ಲ, ಬಸವಗುರುವಿನ ಸಮಕಾಲೀನ ಶರಣರು, ನಂತರದ ಶರಣರು ''ಬಸವಣ್ಣ ನಿನಗೆ ನೀನೇ ಗುರು'', '' ನಿನಗೆ ಪರಮಾತ್ಮನೇ ಗುರು'' ಎಂದು ತಮ್ಮ ವಚನಗಳಲ್ಲಿ ಬಸವ ಗುರುದೇವನನ್ನು ಸ್ತುತಿಸಿದ್ದಾರೆ. ಅಂದಮೇಲೆ ಗುರು ಬಸವಣ್ಣನವರಿಗೆ, ಗುರು, ತಂದೆ-ತಾಯಿ, ಬಂಧು-ಬಳಗ, ಪತಿ ಸರ್ವಸ್ವವೂ ಲಿಂಗದೇವನೇ ಆಗಿದ್ದರಿಂದ, ಅವನನ್ನೇ ಸ್ತುತಿಸುತ್ತಿದ್ದರು, ಹಾಡುತ್ತಿದ್ದರು, ಬೇಡುತ್ತಿದ್ದರು.

ಆದರೆ ! ನಾವು ಭಾಗ್ಯವಂತರು, ಏಕೆಂದರೆ ನಮಗೆ ತಂದೆ-ತಾಯಿಯಾಗಿ, ಧರ್ಮಗುರು ಬಸವಣ್ಣನವರಿದ್ದಾರೆ. ಗುರುಬಸವಣ್ಣನವರು ತಾಯಿ-ತಂದೆ, ಗುರುವಾಗಿ, ಜೀವಾತ್ಮನನ್ನು ಶರಣ ವಧುವನ್ನಾಗಿ ಮಾಡಿ, ಲಿಂಗದೇವನಿಗೆ ಕೊಟ್ಟು ವಿವಾಹ ಮಾಡಿ, ಶರಣಸತಿಯನ್ನಾಗಿ ಮಾಡಿದ್ದಾರೆ. ಹೀಗಿರುವಾಗ ಲಿಂಗವಂತ ಧರ್ಮೀಯರು, ಬಸವ ಕಂದರು ಬೇಡಿದರೆ ಅಪ್ಪ ಬಸವ ಗುರುದೇವನನ್ನು ಪತಿ ಲಿಂಗದೇವನನ್ನು ಬೇಡಬೇಕು. ಹಾಡಿದರೆ ಗುರುಬಸವಣ್ಣನವರನ್ನು, ಲಿಂಗದೇವನನ್ನು ಹಾಡಿ, ಸ್ತುತಿಸಬೇಕು. ಅದುಬಿಟ್ಟು, ಬೇರೆ ಕಾಕುಪೋಕು ದೈವಂಗಳನ್ನು ಕ್ಷುದ್ರಶಕ್ತಿಗಳನ್ನು, ಅಸ್ತಿತ್ವದಲಿಲ್ಲದ ದೇವತೆಗಳನ್ನು ಬೇಡಿದರೆ ಮಾತಾ-ಪಿತೃ ದ್ರೋಹ, ಗುರುದ್ರೋಹ, ಪತಿದ್ರೋಹ, ಧರ್ಮ ದ್ರೋಹ ಮಾಡಿದ ಪಾಪಕ್ಕೆ ಗುರಿಯಾಗಬೇಕಾಗುತ್ತದೆ. ಅಪ್ಪ ಬಸವಣ್ಣನವರು ಹೇಳುವಂತೆ :

ದೇವನೊಬ್ಬ ನಾಮ ಹಲವು, ಪರಮ ಪತಿವ್ರತೆಗೆ ಗಂಡನೊಬ್ಬ
ಮತ್ತೊಂದಕ್ಕೆರಗಿದಡೆ ಕಿವಿ-ಮೂಗ ಕೊಯ್ಯುವನು।
ಹಲವು ದೈವದ ಎಂಜಲ ತಿಂಬುವರನೇನೆಂಬೆ ಲಿಂಗದೇವಾ? ಬ.ವ.ದೀ. 612

ಲಿಂಗಾಯತರು- ಬಸವಕಂದರು ಆದ ಕೆಲವರು, ಬಸವತಂದೆಯನ್ನೇ ಲಿಂಗಪತಿದೇವನನ್ನೇ ಬೇಡುತ್ತಾರೆ. ತಮ್ಮ ಬೇಡಿಕೆ ನೆರವೇರದಿದ್ದರೆ, ಮನವಿ ಈಡೇರದಿದ್ದರೆ, ಈ ಇಬ್ಬರನ್ನು ಬಿಟ್ಟು ಬೇರೆ

ಬೇರೆ ದೈವಂಗಳ ಬೆನ್ನು ಹತ್ತುತ್ತಾರೆ. ಹೀಗೆ ತಂದೆಯನ್ನು-ಪತಿಯನ್ನು ಬಿಟ್ಟು, ಬೇರೆ ಬೇರೆ ದೈವಂಗಳ ಬೆನ್ನು ಹತ್ತುವವರು ವಿವೇಚನೆಯನ್ನು ಮಾಡಬೇಕು. ಬೇಡಿದ್ದನ್ನು ತಂದೆ-ತಾಯಿ ಕೊಡದಿದ್ದರೆ ಬೇರೆ ತಂದೆ-ತಾಯಿಯನ್ನು, ಗಂಡ ಕೊಡದಿದ್ದರೆ ಬೇರೆ ಗಂಡನನ್ನು ಹುಡುಕಿಕೊಳ್ಳುತ್ತೇವೆಯೇ ? ಇಲ್ಲ. ಹಾಗೆ ಬೇರೆ ಗಂಡನನ್ನು ಗಂಡ ಎಂದು ಕೊಂಡವಳನ್ನು ಈ ಸಮಾಜ ಏನೆಂದು ಕರೆಯುತ್ತದೆ? ವೇಶ್ಯೆ, ಸೂಳೆ ಎಂದು. ಅಂತವರನ್ನು ಕಂಡು ಅಪ್ಪ ಬಸವಣ್ಣ ಈ ರೀತಿ ಬುದ್ಧಿ ಹೇಳುತ್ತಿದ್ದಾರೆ, ಎಚ್ಚರಿಸುತ್ತಿದ್ದಾರೆ :

ಕಂಡ ಕಂಡವರೆಲ್ಲರ ಗಂಡರೆಂದೆಂಬ
ದುಂಡನೆಯವಳ ಸಜ್ಜನೆ ಎಂದೆನ್ನಬಹುದೆ ?
ಲಿಂಗ ಪ್ರಸಾದವನುಂಡು ಅನ್ಯದೈವಂಗಳ ಕೊಂಡಾಡುವವರ
ನಮ್ಮ ಲಿಂಗದೇವನು ಆ ಭಂಡರಿಗೆ ಮಾಡಿದ ಹುಳುಗೊಂಡವನು ಬ.ವ.ದೀ-914

ಮದುಮಕ್ಕಳಿಗೆ ವಿವಾಹ ಮಾಡಿದ ನಂತರ ಪುರೋಹಿತರು ಇಬ್ಬರಿಂದಲೂ ಪ್ರತಿಜ್ಞೆಗಳನ್ನು ಈ ರೀತಿ ಮಾಡಿಸುತ್ತಾರೆ - ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕರಲ್ಲೂ ನಾವು ಸಹಚರಿಗಳಾಗಿರುತ್ತೇವೆ ಎಂದು. ಅದೇ ರೀತಿ ಲಿಂಗಾಯತ ಧರ್ಮದೀಕ್ಷೆಯನ್ನು ಹೊಂದುವ ಶರಣ/ಶರಣೆಗೂ ಧರ್ಮದ ಗುರುಗಳು ''ಲಿಂಗದೇವನನ್ನಲ್ಲದೆ ಅನ್ಯದೈವದ ಆರಾಧನೆ, ಭಜನೆ ಮಾಡುವುದಿಲ್ಲ'', ''ಇಷ್ಟಲಿಂಗದೇವನನ್ನು ಯಾವಾಗಲೂ ಎದೆ ಮೇಲೆ ಧರಿಸಿರುತ್ತೇನೆ '', 'ಲಿಂಗದೇವನನ್ನು, ಗುರುಬಸವ ತಂದೆಯನ್ನು ಬಿಟ್ಟು ಬೇರಾರನ್ನು ಬೇಡುವುದಿಲ್ಲ' ಅನ್ಯ ದೈವದ ತೀರ್ಥ ಪ್ರಸಾದ ತೆಗೆದುಕೊಳ್ಳುವುದಿಲ್ಲ. ಹೀಗೆ ಹಲವಾರು ಪ್ರತಿಜ್ಞೆಗಳನ್ನು ಮಾಡಿಸಿರುತ್ತಾರೆ. ಈ ಪ್ರತಿಜ್ಞೆಗೆ ಬದ್ಧರಾಗದ ಲಿಂಗವಂತ ಶರಣಸತಿಯರು, ಗಂಡನನ್ನು ಬಿಟ್ಟು ಬೇರೆ ಬೇರೆ ಗಂಡಸರ ಸಂಗಮಾಡುವ ಹೆಣ್ಣಿನಂತಾಗುತ್ತೇವೆ. ಪತಿದ್ರೋಹಿಗಳಾಗುತ್ತೇವೆ. ಪಿತೃ ದ್ರೋಹಿಗಳಾಗುತ್ತೇವೆ. ಧರ್ಮಪಿತರು ಹೇಳುವಂತೆ -

ನಂಬಿದ ಹೆಂಡತಿಗೆ ಗಂಡನೊಬ್ಬನೆ, ಕಾಣಿರೋ; ನಂಬಬಲ್ಲ ಭಕ್ತಂಗೆ ದೇವನೊಬ್ಬನೆ, ಕಾಣಿರೋ!
ಬೇಡ !ಬೇಡ ! ಅನ್ಯದೈವದ ಸಂಗಹೊಲ್ಲ! ಬೇಡ !ಬೇಡ ! ಪರದೈವದ ಸಂಗಹೊಲ್ಲ!
ಬೇಡ !ಬೇಡ ! ಅನ್ಯದೈವವೆಂಬುದು ಹಾದರ ಕಾಣಿರೊ !
ಲಿಂಗದೇವ ಕಂಡಡೆ ಮೂಗ ಕೊಯ್ಯುವ ಕಾಣಿರೊ! ಬ.ವ.ದೀ 615

ಲಿಂಗವಂತ ಧರ್ಮೀಯರಾದ ಬಸವಕಂದರು, ಬಹಳ ಭಾಗ್ಯವಂತರು. ಏಕೆಂದರೆ, ಸೃಷ್ಟಿಕರ್ತನು - ಸರ್ವಶಕ್ತನು - ಸರ್ವವ್ಯಾಪಿಯೂ - ಸರ್ವಜ್ಞನು ಹುಟ್ಟು-ಸಾವಿಗೆ ಅತೀತನಾದವನು. ಮಹಾದಾನಿಯೂ ಆದ ವಿಶ್ವಾತ್ಮನನ್ನು ಗುರು ಬಸವತಂದೆಯ ಕೃಪೆಯಿಂದ ಪತಿಯನ್ನಾಗಿ ಪಡೆದುಕೊಂಡಿದ್ದೇವೆ. ಬೇಡಿದ್ದನ್ನು ನೀಡುವ ಪತಿಯಿದ್ದೂ, ಆ ಪತಿಯ ಶರಣ ಸತಿಯರಾಗಿದ್ದೂ ಲಿಂಗಪತಿದೇವನ ಒಲುಮೆಯನ್ನು ಗಳಿಸಿಕೊಳ್ಳಲಾಗದೆ, ತಾವು ಬೇಡಿದ್ದು ತಕ್ಷಣ ಈಡೇರಲಿಲ್ಲವೆಂದು, ಅನ್ಯದೈವಂಗಳ ಬೆನ್ನಹತ್ತುತ್ತೇವೆ. ಅವೇನ ಕೊಡಬಲ್ಲವು? ಅವೂ ಸಹ ಲಿಂಗದೇವನನ್ನೇ ಆಶ್ರಯಿಸಿಕೊಂಡ ದೈವಂಗಳಾಗಿರುತ್ತವೆ. ಕೆಲವು ದೈವಂಗಳಿಗೆ ಅಸ್ತಿತ್ವವೇ ಇರುವುದಿಲ್ಲ. ಇಂತಹವನ್ನು ಬೇಡುವುದೆಂದರೆ ಚಕ್ರವರ್ತಿಯ ಸತಿಯಾಗಿಯೂ ಅರಮನೆಯ ಆಳನ್ನು ಆಶ್ರಯಿಸಿದಂತಾಗುತ್ತದೆ. ಉದಾ : ಜನ್ನನ -

ಯಶೋಧರ ಚರಿತ್ರೆಯಲ್ಲಿನ ಘಟನೆಯೊಂದು ಹೀಗಿದೆ : ಜೈನ ಧರ್ಮೀಯನಾದ ಯಶೋಧರ ಚಕ್ರವರ್ತಿಯು, ತರುಣನು, ಸುಂದರನು, ಬಲಾಢ್ಯನು ಆಗಿದ್ದರೂ ಆತನ ರಾಣಿಯು ತನ್ನ ಅರಮನೆಯ ಆಳಾದ, ಆನೆಯ ಮಾವುತ ಅಷ್ಟಾವಕ್ರನನ್ನು ವರಿಸಿದಳಂತೆ. ಇಂಥವರನ್ನು ಕಂಡೆ ಅಪ್ಪನವರು ಹೇಳುತ್ತಾರೆ :

ಊಡುವ ಉಡಿಸುವ ಗಂಡನಿದ್ದಂತೆ, ಮಿಂಡಂಗೆ ಕಣ್ಣ ಚೆಲ್ಲುವಳ
ಕೇಡಿಂಗೆ ಬೆರಗಾದೆ ನಾನು! ಲಿಂಗದೇವನು
ಸಿಂಗಾರದ ಮೂಗ ಬಣ್ಣಿಸಿ ಹಲುದೋರಿ ಕೊಯ್ವ! ಬ.ವ.ದೀ. 616

ನಾವು ಬೇಡಿದ್ದುದನ್ನು ಅಪ್ಪಬಸವಣ್ಣನವರು, ಪತಿಲಿಂಗದೇವರು ಈಡೇರಿಸಲಿಲ್ಲವೆಂದಾಗ ನಮ್ಮ ಬೇಡಿಕೆಯಲ್ಲೇ ಏನೋ ಲೋಪವಿದೆ ಎಂದು ಏಕೆ ತಿಳಿಯಬಾರದು ? ನಾವು ಲಿಂಗನಿಷ್ಠರು, ಬಸವ ತತ್ವ ನಿಷ್ಠರೂ ಆಗಿದ್ದರೂ ನಮ್ಮ ಬೇಡಿಕೆ ಸರಿಯಿರದಿದ್ದರೆ ಹೇಗೆ ನೆರವೇರುತ್ತದೆ ? ಉದಾ. ನಮಗೆ ಬೇಡವಾದವರಿಗೆ ಕೇಡನ್ನು ಬಯಸಿ ಲಿಂಗದೇವನನ್ನು, ಗುರು ಬಸವಣ್ಣನವರನ್ನು ಬೇಡಿದರೆ ಹೇಗೆ ಈಡೇರಿಸಬಲ್ಲರು? ಅಥವಾ ನಾವು ಒಳ್ಳೆಯದನ್ನೆ ಬೇಡಿದ್ದರೂ ನಾವು ಅದಕ್ಕೆ ಯೋಗ್ಯರಲ್ಲದಿದ್ದರೆ ಹೇಗೆ ನೀಡುತ್ತಾರೆ ?

ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ, ಬಂಧುಗಳು ಬಂದಾಗಳಿಲ್ಲೆನ್ನ
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ, ಬಂದ ಪುರಾತರಿಗೆ ಇಲ್ಲೆಂಬ
ಸಾವಾಗ ದೇಹವ ದೇಗುಲಕ್ಕೆ ಒಯ್ಯೆಂಬ, ದೇವರಿಗೆ ಹೆಣ ಬಿಟ್ಟಿ ಹೇಳಿತ್ತೆ ಲಿಂಗದೇವಾ ?

ಅಲ್ಲದೆ ಬಿ.ಇ.,ಎಂ.ಬಿ.ಬಿ.ಎಸ್. ಓದಬೇಕೆಂದಾಗ, ಉಪಾಧ್ಯಾಯರು, ದಾದಿ, ಸೈನಿಕ, ಆರಕ್ಷಕ ಇತ್ಯಾದಿ ಆಗಬೇಕೆಂದಿದ್ದರೂ, ಅವರಿಗೆ ಪರೀಕ್ಷೆ ಇಟ್ಟು ಅದರಲ್ಲಿ ತೇರ್ಗಡೆಯಾದಾಗ ಮಾತ್ರ ಆ ಸ್ಥಾನಗಳನ್ನು ಕೊಡುತ್ತಾರೆಂದ ಮೇಲೆ, ಲಿಂಗದೇವರು, ಗುರು ಬಸವ ತಂದೆ ನಮ್ಮನ್ನು ಪರೀಕ್ಷಿಸದೆ ಹೇಗೆ ವರವನ್ನು ಕೊಡುತ್ತಾರೆ ? ನಮ್ಮ ಭಕ್ತಿ, ನಿಷ್ಠೆ, ನಂಬಿಕೆ ಅಚಲವಾಗಿದ್ದರೆ ಕೊಟ್ಟೆ ಕೊಡುತ್ತಾರೆ. ಇಲ್ಲದೆ ಹೀಗಿದ್ದರೆ ?

ಬರಬರ ಭಕ್ತಿ ಆರೆಯಾಯಿತ್ತು ಕಾಣಿರಣ್ಣಾ, ಮೊದಲ ದಿನ ಹಣೆಮುಟ್ಟಿ, ಮರುದಿನ ಕೈಮುಟ್ಟಿ
ಮೂರೆಂಬ ದಿನಕೆ ತೂಕಡಿಕೆ ಕಾಣಿರಣ್ಣಾ! ಹಿಡಿದುದ ಬಿಡದಿದ್ದಡೆ, ಕಡೆಗೆ ಚಾಚುವ
ಅಲ್ಲದಿದ್ದಡೆ, ನಡುನೀರಲ್ಲದ್ದುವ ನಮ್ಮ ಲಿಂಗದೇವ · ಬ.ವ.ದೀ 222

ತಾಯಿ ತಪ್ಪು ಮಾಡಿದ ಮಗುವನ್ನು ಬೈಯುತ್ತಾಳೆ, ಗದರಿಸುತ್ತಾಳೆ, ಹೆದರಿಸುತ್ತಾಳೆ, ಹೊಡೆಯುತ್ತಾಳೆ. ಹಾಗೆಂದು ತಾಯಿಗೆ ಮಗುವಿನ ಮೇಲೆ ದ್ವೇಷವಿರುತ್ತದೆಯೆ? ಇಲ್ಲ, ಬುದ್ಧಿಕಲಿಯಲಿ, ದೇಶಕ್ಕೆ ಸತ್ಪ್ರಜೆಯಾಗಲಿ, ವಂಶಕ್ಕೆ ಕೀರ್ತಿ ತರುವ ಮಗುವಾಗಲಿ, ಧರ್ಮವಂತನಾಗಿ ಬಾಳಲಿ ಎಂದು ಬೈಯುತ್ತಾಳೆ. ಬೈಗಳಿಗೆ ಬಗ್ಗದಿದ್ದಾಗ ಹೊಡೆಯುತ್ತಾಳೆ. ತಾಯಿ ಬೈದಳು, ಹೊಡೆದಳೆಂದು ಮಗು ತಾಯಿಂದ ದೂರಹೋಗುತ್ತದೆಯೆ ? ಇಲ್ಲ, ಸ್ವಲ್ಪ ಕಾಲ ತಾಯಿ ಬಗ್ಗೆ ಮುನಿಸಿಕೊಂಡರೂ ನಂತರದಲ್ಲಿ ಮುನಿಸನ್ನು ಮರೆತು, ತಾಯಿಯನ್ನು ಅಪ್ಪಿಕೊಳ್ಳುತ್ತದೆ. ಉದಾ ನನ್ನ ತಂಗಿ ಮಗಳು ಪವಿತ್ರಾ ಚಿಕ್ಕವಳಿದ್ದಾಗ ಒಮ್ಮೆ ತಾಯಿಯೊಂದಿಗೆ ನಮ್ಮಲ್ಲಿಗೆ ಬಂದಿದ್ದಳು. ಆಗ ಒಂದು ದಿನ ನನ್ನ ತಂಗಿ ಮಗು ತಪ್ಪು ಮಾಡಿತೆಂದು ಅದಕ್ಕೆ ಹೊಡೆದಳು. ಏಟು ತಿಂದ ಮಗು ಅಳುತ್ತಾ

ನನ್ನ ಬಳಿ ಬಂತು. ಆಗ ನಾನಂದೆ - ಪವಿ ಅಮ್ಮ ಕೆಟ್ಟವಳು ಅವಳಿಗೆ ಟೂ ಬಿಟ್ಟು ಬಿಡು, ಅವಳ ಹತ್ರ ಹೋಗಬೇಡ, ನನ್ನೊಡನಿರು ಎಂದು ತಮಾಷೆಗೆ ಹೇಳಿದೆ. ಆಗ ಮಗು ಹೇಳಿತು - ಇಲ್ಲ ದೊಡ್ಡಮ್ಮ ಅಮ್ಮ ಒಳ್ಳೆಯವಳು, ಅಮ್ಮ ಅಂದರೆ ತಪ್ಪು ಮಾಡಿದಾಗ ಹೊಡಿಬೇಕಂತೆ, ಆಗ ನಾನು ಒಳ್ಳೆಯವಳಾಗುತ್ತೇನಂತೆ ಎಂದು. ನನಗೆ ಮಗುವಿನ ಮಾತು ಕೇಳಿ ಆಶ್ಚರ್ಯವಾಯಿತು. ಆಗ ನಾನು ಮಗುವನ್ನು ಪ್ರಶ್ನಿಸಿದೆ. ಇದನ್ನು ನಿನಗಾರು ಹೇಳಿದರು ಎಂದು? ಮಗು ಹೇಳಿತು ಅಮ್ಮ, ಎಂದೋ ಒಮ್ಮೆ ಮಗುವನ್ನು ಹೊಡೆದ ತಾಯಿ, ಅಳುವ ಮಗುವನ್ನು ತಬ್ಬಿಕೊಂಡು ಸಂತೈಸಿ-ಮುದ್ದು ಮಾಡುತ್ತ ಈ ಮಾತು ಹೇಳಿದ್ದಳಂತೆ. ಹಾಗೆ ಧರ್ಮ ಗುರು ಬಸವಣ್ಣನವರು, ಸೃಷ್ಟಿಕರ್ತ ಲಿಂಗಪತಿದೇವರು ನಾವು ಬೇಡಿದ್ದನ್ನ ಕೊಡಲಿಲ್ಲವೆಂದು ಅವರನ್ನು ತೊರೆದು ಬೇರೆಯವರನ್ನು ಆಶ್ರಯಿಸಲಾಗುವುದೇ? ಆಶ್ರಯಿಸಬಹುದೆ ? ಇಲ್ಲ ಇಲ್ಲ-ಭಕ್ತಂಗೆ ಛಲವಿರಬೇಕು. ಬೇಡಿದನ್ನ ಕೊಡಲಿ-ಬಿಡಲಿ ಲಿಂಗದೇವನನ್ನಲ್ಲದೆ ಇನ್ನಾರನ್ನೂ ಬೇಡೆನೆಂಬ ಛಲವಿರಬೇಕು. ಆಯಿತು, ಲಿಂಗದೇವನನ್ನಲ್ಲದೆ, ಗುರುಬಸವಣ್ಣನವರನ್ನಲ್ಲದೆ ಇನ್ನಾರನ್ನು ಬೇಡುವುದಿಲ್ಲ, ಹಾಡುವುದಿಲ್ಲ, ಗುರುವನ್ನು-ಲಿಂಗವನ್ನು ದೃಢವಾಗಿ ನಂಬಿದ್ದೇನೆ, ಅವರು ನನಗೆ ಒಳ್ಳೆಯದನ್ನೇ ಮಾಡಬೇಕು ಎನ್ನುವುದು ಸರಿಯೆ ? ಬರಿದೇ ಭಕ್ತಿಯನ್ನು ಮಾಡಿದರೆ, ದೃಢವಾಗಿ ನಂಬಿದರೆ ಸಾಕೆ ? ಎಂಬ ಪ್ರಶ್ನೆಗೆ ಧರ್ಮಪಿತರು ಉತ್ತರಿಸುತ್ತಾರೆ

ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು;
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರಕಠಿಣವಾಯಿತ್ತು; ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು;
ಕಡೆಯಲ್ಲಿ ಜಂಗಮಭಕ್ತಿ ಕಠಿಣವಾಯಿತ್ತು ಇದುಕಾರಣ
ಲಿಂಗದೇವನವರ ಬಲ್ಲನಾಗಿ ಒಲ್ಲನಯ್ಯಾ ಬ.ವ.ದೀ 221

ಗುರು ಬಸವಣ್ಣನವರಲ್ಲಿ - ಲಿಂಗದೇವನಲ್ಲಿ ಭಕ್ತಿಯನ್ನಿಡುವುದರೊಂದಿಗೆ, ನಿರಾಕಾರನಾದ ಲಿಂಗದೇವನ, ಸಾಕಾರ ರೂಪಾದ ಜಂಗಮಕ್ಕೆ(ಸಮಾಜಕ್ಕೆ), ಧರ್ಮಕ್ಕೆ, ತನು,ಮನ,ಧನ,ಸಮಯ, ಅಭಿಮಾನ, ಪ್ರಾಣ ಎನ್ನುವ ಷಡ್ವಿಧ ದಾಸೋಹವನ್ನು ಕಡೆ ಪಕ್ಷ ತನು,ಮನ,ಧನ ಎಂಬ ತ್ರಿವಿಧ ದಾಸೋಹವನ್ನು ಮಾಡಬೇಕು. ದಾಸೋಹ ಮಾಡುವಾಗ, ಶರಣಾಗತಿ, ಸಮರ್ಪಣಾ ಭಾವವಿರಬೇಕು. ಲಿಂಗವ ಪೂಜಿಸಿ, ಜಂಗಮವ ಮರೆದರೆ ಅಥವಾ ಜಂಗಮ ದಾಸೋಹವ ಮರೆದರೆ ನಮ್ಮ ಭಕ್ತಿ ಕೇವಲ ತೋರುಂಬ ಲಾಭವಾಗುತ್ತದೆ. ದೇವನೊಲುಮೆ, ಬಸವಣ್ಣನವರ ಕರುಣೆ ನಮಗೆ ಲಭಿಸುವುದಿಲ್ಲ ಏಕೆಂದರೆ;

ಗಂಡಭೇರುಂಡವೆಂಬ ಪಕ್ಷಿಗೆ ತಲೆ ಎರಡು ದೇಹವೊಂದು
ಒಂದು ತಲೆಯಲ್ಲಿ ಹಾಲನೆರೆದು, ಒಂದು ತಲೆಯಲ್ಲಿ ವಿಷವನೆರೆದಡೆ
ಆ ಪಕ್ಷಿಗೆ ಮರಣವಲ್ಲದೆ, ಜಯವಪ್ಪುದೇ ಅಯ್ಯಾ ಲಿಂಗವ ಪೂಜಿಸಿ ಜಂಗಮವ ಮರೆದಡೆ
ಕುಂಭಿನಿ ನರಕತಪ್ಪದು ಕಾಣಾ ಕೂಡಲಚೆನ್ನಸಂಗಮದೇವಯ್ಯ
ಪ್ರಣತೆಯೂ ಇದೆ, ಬತ್ತಿಯೂ ಇದೆ, ಜ್ಯೋತಿಯ
ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೂ?
ಗುರುವಿದೆ, ಲಿಂಗವಿದೆ, ಶಿಷ್ಯನ ಸುಜ್ಞಾನೋದಯವಾಗದನ್ನಕ್ಕರ
ಭಕ್ತಿ ಎಲ್ಲಿಯದೂ ? ಸೋಹಂ ಎಂಬುದ ಕೇಳಿ

ದಾಸೋಹವ ಮಾಡದಿದ್ದರೆ ಅತಿಗಳೆವ ಗುಹೇಶ್ವರ

ಕೂಲಿ ಮಾಡಿದವರಿಗೆ ಸಂಬಳ ಕೇಳುವ ಹಕ್ಕಿರುತ್ತದೆ. ಕೂಲಿ ಮಾಡದೆ ಸಂಬಳ ಕೇಳಿದರೆ ಮಾಲೀಕ ಹೇಗೆ ಸಂಬಳ ಕೊಡುತ್ತಾನೆ? ಹಾಗೆ ಷಡ್‌ವಿಧ, ತ್ರಿವಿಧ ದಾಸೋಹವನ್ನು ಮಾಡಬೇಕು. ನಂತರದಲ್ಲಿ ನಮ್ಮ ಬೇಡಿಕೆಯನ್ನು ಧರ್ಮಪಿತರಿಗೆ ಲಿಂಗದೇವನಿಗೆ ಸಲ್ಲಿಸಬೇಕು. ಅದುಬಿಟ್ಟು ಉಚಿತವಾಗಿ ಕೊಡೆಂದು ಬೇಡಿದರೆ ನಮ್ಮ ಬೇಡಿಕೆ ಹೇಗೆ ಈಡೇರುತ್ತದೆ ? ಅಲ್ಲದೆ ದಾಸೋಹಿಗಳಾದವರು ಬೇಡಬೇಕಾಗಿಯೇ ಇಲ್ಲ. ನಮಗೇನು ಬೇಕೆಂದು ಧರ್ಮಪಿತರಿಗೆ ಲಿಂಗದೇವನಿಗೆ ಗೊತ್ತು ಅದನ್ನು ನಾವು ಬೇಡದಿದ್ದರೂ ನಮಗೆ ಬೇಕಾದ್ದನ್ನು ಕಾಲಕಾಲಕ್ಕೆ ನೀಡುತ್ತಾರೆ. ಏಕೆಂದರೆ

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವ ಶೆಟ್ಟಿ
ಒಮ್ಮನವಾದಡೆ ಒಡನೆ ನುಡಿವನು
ಇಮ್ಮನವಾದಡೆ ನುಡಿಯನು,
ಕಾಣಿಯ ಸೋಲ, ಅರ್ಧಕಾಣಿಯಗೆಲ್ಲ
ಜಾಣ ನೋಡವ್ವ ನಮ್ಮ ಲಿಂಗದೇವ ಬ.ವ.ದೀ 117

1988 ರಿಂದ ಪ್ರಾರಂಭವಾದ ಶರಣಮೇಳವು 17ನೇ ವರ್ಷಕ್ಕೆ ಕಾಲಿಟ್ಟಿದೆ. ಶರಣ ಮೇಳ ನಮ್ಮೆಲ್ಲರ ಶರಣ ಮೇಳ. ಲಿಂಗವಂತರ-ಬಸವ ಭಕ್ತರ, ಬಸವಾಭಿಮಾನಿಗಳ ಮೇಳ. ಈ ಶರಣ ಮೇಳಕ್ಕೆ ತನು, ಮನ, ಧನ, ಸಮಯ, ಅಭಿಮಾನಗಳೆಂಬ ಪಂಚ ವಿಧ ದಾಸೋಹವನ್ನು ಸಲ್ಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಧರ್ಮಪಿತ ಬಸವಣ್ಣನವರ ಋಣವನ್ನು ತೀರಿಸಲು ನಮಗೆ ಸಾಧ್ಯವಿಲ್ಲವಾದರೂ, ದಾಸೋಹವನ್ನು ಸಲ್ಲಿಸಿ, ನಮ್ಮ ಕೃತಜ್ಞತೆಯನ್ನಾದರೂ ಸಲ್ಲಿಸಲು ಪ್ರತಿಯೊಬ್ಬ 'ಬಸವ ಕಂದ'ರೂ ಪ್ರಯತ್ನಿಸಬೇಕು. ಪ್ರಯತ್ನ ಮಾಡಿ ಕಾರ್ಯೋನ್ಮುಖರಾಗಬೇಕು. ಆಗ ಪರಮದಯಾಳುವೂ ಶರಣಾಗತ ರಕ್ಷಕನೂ ಆದ ನಮ್ಮಪ್ಪ ಗುರು ಬಸವಣ್ಣನವರು -

ಎಮ್ಮ ವಾಮ-ಕ್ಷೇಮ, ಹಾನಿ-ವೃದ್ಧಿ, ಮಾನ-ಅಪಮಾನವನ್ನು ಅವರದನ್ನಾಗಿ ಮಾಡಿಕೊಂಡು ಬಳ್ಳಿ-ಕಾಯಿಯನ್ನು ರಕ್ಷಿಸುವಂತೆ, ತಾಯಿ-ಎಳೆಗಂದನನ್ನು ಸಲಹುವಂತೆ ನಮ್ಮನ್ನು ಸಲಹುತ್ತಾರೆ. ನಾವು ನಿಶ್ಚಿಂತರಾಗಿರಬಹುದು. ನಾವೆಲ್ಲರೂ ಹೀಗಾಗಿ, ಲಿಂಗದೇವನ ಒಲುಮೆಗೆ ಪಾತ್ರರಾಗಿ, ಗುರುಬಸವಣ್ಣನವರಿಗೆ ತಕ್ಕ ಮಕ್ಕಳಾಗೋಣವೆಂದು ವಿನಮ್ರತೆಯಿಂದ ಪ್ರಾರ್ಥಿಸುತ್ತೇನೆ.
ಶರಣು ಶರಣಾರ್ಥಿಗಳು

★★★

ಕಲ್ಯಾಣ ಕಿರಣದ ಓದುಗರಲ್ಲಿ ಮನವಿ

ಈ ತಿಂಗಳಿನ ಸಂಚಿಕೆ 80 ಪುಟಗಳಿಂದ ಕೂಡಿದೆ. ಡಿಸೆಂಬರ್ - ಜನವರಿ ಎರಡು ಪತ್ರಿಕೆಗಳ ಬದಲು ಇದನ್ನು ಕೊಡಲಾಗಿದೆ. ಮುಂದಿನ ಸಂಚಿಕೆ ಶರಣ ಮೇಳದ ವಿವರಗಳೊಡನೆ ಫೆಬ್ರವರಿ 3 ನೇ ರಂದು ಪೋಸ್ಟ್ ಆಗುತ್ತದೆ. ಸಹಕರಿಸಬೇಕಾಗಿ ವಿನಂತಿ



ಹೊಸ ವರ್ಷದ ಶುಭಾಶಯಗಳು

ಶಿಕ್ಷಣವೇ ಶಕ್ತಿ

2004ನೇ ಇಸವಿಯ ಸಂಕ್ಷಿಪ್ತ ಕ್ಯಾಲೆಂಡರ್

ತಿಂಗಳುಗಳು											
ಜನವರಿ ಏಪ್ರಿಲ್ ಜುಲೈ	ಫೆಬ್ರವರಿ (ಅಧಿಕಸಂವತ್ಸರ - 29 ದಿನಗಳು) ಆಗಸ್ಟ್	ಮಾರ್ಚ್ ನವೆಂಬರ್	ಮೇ	ಜೂನ್	ಅಕ್ಟೋಬರ್	ಸೆಪ್ಟಂಬರ್ ಡಿಸೆಂಬರ್	ತಾರೀಖು				
ವಾರಗಳು											
ಗುರು	ಭಾನು	ಸೋಮ	ಶನಿ	ಮಂಗಳ	ಶುಕ್ರ	ಬುಧ	1	8	15	22	29
ಶುಕ್ರ	ಸೋಮ	ಮಂಗಳ	ಭಾನು	ಬುಧ	ಶನಿ	ಗುರು	2	9	16	23	30
ಶನಿ	ಮಂಗಳ	ಬುಧ	ಸೋಮ	ಗುರು	ಭಾನು	ಶುಕ್ರ	3	10	17	24	31
ಭಾನು	ಬುಧ	ಗುರು	ಮಂಗಳ	ಶುಕ್ರ	ಸೋಮ	ಶನಿ	4	11	18	25	*
ಸೋಮ	ಗುರು	ಶುಕ್ರ	ಬುಧ	ಶನಿ	ಮಂಗಳ	ಭಾನು	5	12	19	26	*
ಮಂಗಳ	ಶುಕ್ರ	ಶನಿ	ಗುರು	ಭಾನು	ಬುಧ	ಸೋಮ	6	13	20	27	*
ಬುಧ	ಶನಿ	ಭಾನು	ಶುಕ್ರ	ಸೋಮ	ಗುರು	ಮಂಗಳ	7	14	21	28	*

ರಚಿಸಿದವರು : ಮ. ಯ. ದೊಡಮನಿ, ಸದಸ್ಯರು, ಕರ್ನಾಟಕ ರಾಜ ಭಾಷಾ (ವಿಧಾಯೀ) ಆಯೋಗ, ಬೆಂಗಳೂರು - 9

ಎಲ್ಲಾದರೂ ಇರು, ಎಂತಾದರೂ ಇರು
ಎಂದೆಂದಿಗೂ ನೀ ಕನ್ನಡವಾಗಿರು

ಕಾಯಕವೇ ಕೈಲಾಸ
ದಯವೇ ಧರ್ಮದ ಮೂಲವಯ್ಯ

ಸಕಲ ಜೀವಾತ್ಮರಿಗೆ ಲೇಸನೆ
ಬಯಸುವವ ಕುಲಜನು

2004 ರ ಜನವರಿ 11 ರಿಂದ 15ರವರೆಗೆ ನಡೆಯುವ 17ನೆಯ ಶರಣ ಮೇಳದ ಕಾರ್ಯಕ್ರಮ ವಿವರ

ದಿ. 11-1-2004 — ದೇವ (ಭಾನು) ವಾರ

ಬೆಳಿಗ್ಗೆ 10-30	ಚಿಂತನಗೋಷ್ಠಿ -1 ಉದ್ಘಾಟನೆ
ಮಧ್ಯಾಹ್ನ 3-30	ಧಾರ್ಮಿಕ ರಸ ಪ್ರಶ್ನೆ - ಸ್ಪರ್ಧೆ
ಸಂಜೆ 6-30	ನೆನಹು ಮತ್ತು ಅನುಭವ ಗೋಷ್ಠಿ

ದಿ. 12-1-2004 — ಶಿವ (ಸೋಮ) ವಾರ

ಸುಪ್ರಭಾತ 7-00	ಸಾಮೂಹಿಕ ಇಷ್ಟಲಿಂಗಾರ್ಚನೆ ಬ.ಧ.ಪೀ.ದ ಜಂಗಮ ಮೂರ್ತಿಗಳಿಂದ ಪ್ರಾತ್ಯಕ್ಷಿಕೆ
ಬೆಳಿಗ್ಗೆ 10-30	ಶರಣ ಮೇಳ ಉದ್ಘಾಟನಾ ಸಮಾರಂಭ
ಮಧ್ಯಾಹ್ನ 3-30	ಧಾರ್ಮಿಕ ರಸ ಪ್ರಶ್ನೆ - ಸ್ಪರ್ಧೆ
ಸಂಜೆ 6-30	ನೆನಹು ಮತ್ತು ಅನುಭವ ಗೋಷ್ಠಿ

ದಿ. 13-1-2004 — ಬಸವ (ಮಂಗಳ) ವಾರ

ಸುಪ್ರಭಾತ 7-00	ಸಾಮೂಹಿಕ ಇಷ್ಟಲಿಂಗಾರ್ಚನೆ
ಬೆಳಿಗ್ಗೆ 10-30	ಬಸವ ಧರ್ಮದ ಮಹಾಜಗದ್ಗುರು ಪೀಠದ ಹದಿಮೂರನೆಯ ಪೀಠಾರೋಹಣೋತ್ಸವ
ಸಂಜೆ 5-30	ರಾಷ್ಟ್ರೀಯ ಬಸವ ದಳಗಳ 17ನೆಯ ಮಹಾಧಿವೇಶನ

ದಿ. 14-1-2004 — ಚನ್ನ (ಬುಧ) ವಾರ

ಸುಪ್ರಭಾತ 7-00	ಸಾಮೂಹಿಕ ಬಸವೇಶ್ವರ ಪೂಜಾವ್ರತ (ವಿವರಕ್ಕಾಗಿ ಮುಂದಿನ ಪುಟ ನೋಡಿರಿ)
ಬೆಳಿಗ್ಗೆ 9-30	ಗಣಲಿಂಗ ದರ್ಶನ
10-30	ಬಸವ ಧರ್ಮ ಸಂಸ್ಥಾಪನಾ ದಿನಾಚರಣೆ ಸಮುದಾಯ ಪ್ರಾರ್ಥನೆ ವಚನ ಪಠಣ
ಮಧ್ಯಾಹ್ನ 4-00	ಮೆರವಣಿಗೆ - ಪಥ ಸಂಚಲನ, ಬಸವೇಶ್ವರ ಐಕ್ಯ ಮಂಟಪದಿಂದ
ರಾತ್ರಿ 7-30	ಇಷ್ಟಲಿಂಗ ವಿಜ್ಞಾನದ ಬಗ್ಗೆ ಉಪನ್ಯಾಸ ಮತ್ತು ಇಷ್ಟಲಿಂಗಾರ್ಚನೆಯ ಪ್ರಾತ್ಯಕ್ಷಿಕೆ
ರಾತ್ರಿ 10-00	ಸಾಂಸ್ಕೃತಿಕ ಕಾರ್ಯಕ್ರಮ 'ಕಲ್ಯಾಣ ಕ್ರಾಂತಿ'ಯ ನೃತ್ಯ ರೂಪಕ

ದಿ. 15-1-2004 — ಪ್ರಭು (ಗುರು) ವಾರ

ಬೆಳಿಗ್ಗೆ 10-30	ಶ್ರೀ ಸಿದ್ಧರಾಮೇಶ್ವರ ಜಯಂತಿ ಆಚರಣೆ ಮತ್ತು ಮಹಾಮನೆಯಲ್ಲಿ ಗುರುದರ್ಶನ

ಕೆಲವು ವಿಶೇಷ ವಿವರಗಳು

1. ದಿನ ನಿತ್ಯ ರಾತ್ರಿ 10 ರಿಂದ ವಿವಿಧ ರಾಷ್ಟ್ರೀಯ ಬಸವ ದಳಗಳವರಿಂದ ಸಾಂಸ್ಕೃತಿಕ ಕಾರ್ಯಕ್ರಮ. ಮೊದಲೇ ತಯಾರಾಗಿ ಬರಬೇಕು. ಭಕ್ತಿಗೀತೆ, ವಚನಗಳ ನೃತ್ಯಾಭಿನಯಕ್ಕೆ ಅವಕಾಶ ನೀಡಲಾಗುವುದು.

2. ರಾಷ್ಟ್ರೀಯ ಬಸವ ದಳಗಳ ಮಹಾಧಿವೇಶನವನ್ನು ದಿ. 13-1-2004 ರಂದು ಸಂಜೆ 5-30ರಿಂದ ಏರ್ಪಡಿಸಲಾಗಿದೆ. ಎಲ್ಲ ರಾಷ್ಟ್ರೀಯ ಬಸವ ದಳಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಜರಿರಬೇಕು. ರಾಷ್ಟ್ರೀಯ ಬಸವ ದಳಗಳವರು ರೂ. 15 ಕೊಟ್ಟು ಅರ್ಜಿ ಪಡೆದು ನವೀಕರಿಸಬೇಕು ಮತ್ತು ಒಂದು ಪೋಸ್ಟರ್ ಪಡೆದು ಪಥ ಸಂಚಲನದಲ್ಲಿ ಬರುವಾಗ ಹಿಡಿದುಕೊಂಡು ಬರಬೇಕು.

3. ಸಾಮೂಹಿಕ ಬಸವಾರ್ಚನೆಯಲ್ಲಿ ದಿ. 14-1-2004 ರಂದು ಭಾಗವಹಿಸಬೇಕು. ಒಂದು ತಟ್ಟೆಯಲ್ಲಿ ಧರ್ಮಪಿತರ ಭಾವಚಿತ್ರ ಅಥವಾ ಬೆಳ್ಳಿಯ ನಾಣ್ಯ (ಬೆಲೆ ರೂ. 140) ಅಥವಾ ವೈಟ್ ಮೆಟಲ್‌ದ ಬಸವ ಲಿಂಗ ಮುದ್ರೆ (ಬೆಲೆ ರೂ. 60) ಇಟ್ಟುಕೊಂಡು ಪೂಜೆ ಸಲ್ಲಿಬೇಕು. 108 ಮಂತ್ರಾವಳಿಗಾಗಿ (ಒದಗಿದರೆ) ಹೂವನ್ನು ಅಥವಾ ಅಕ್ಕಿ ಕಾಳನ್ನು ಕೊಡಲಾಗುವುದು. ತಮಗೆ ಐಹಿಕ ಅಥವಾ ಪಾರಮಾರ್ಥಿಕ ಆಸೆಗಳಿದ್ದರೆ ಅದರ ಪೂರೈಕೆಗಾಗಿ ಸಂಕಲ್ಪ ಮಾಡಬೇಕು.

4. ದಿ. 15-1-2004 ರಂದು ಬಸವ ಯೋಗಿ ಶ್ರೀ ಸಿದ್ಧರಾಮೇಶ್ವರರ ಜಯಂತಿ ಆಚರಣೆ ಇರುತ್ತದೆ. ಬಸವ ಧರ್ಮ ಪೀಠದ ಧರ್ಮ ಬೋಧಕ ಜಂಗಮ ಮೂರ್ತಿಗಳು ಶ್ರೀ ಸಿದ್ಧರಾಮೇಶ್ವರರನ್ನು ಕುರಿತು ಉಪನ್ಯಾಸ ಮಾಡಲಿರುವರು.

ಗುರು ದರ್ಶನ : ಬಸವ ಧರ್ಮ ಪೀಠಾಧೀಶರ ದರ್ಶನ ಮತ್ತು ನೇರವಾದ ಆಶೀರ್ವಾದ ಲಭ್ಯವಾಗುವುದಿಲ್ಲ ಎಂಬ ಕೊರಗು ಬಹಳ ಜನರದ್ದು. ಅದಕ್ಕಾಗಿ ಈ ವರ್ಷ ಮಹಾಮನೆ ಮಹಾಮಠದಲ್ಲಿ ಪೂಜ್ಯರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ವಿಶೇಷ ಆಶೀರ್ವಾದ ಬಯಸುವವರಿಗೆ, ತಮ್ಮ ಸಂಕಲ್ಪ ಪೂರೈಸಿದ್ದಕ್ಕಾಗಿ ಕಾಣಿಕೆ (ಹರಕೆ) ಸಲ್ಲಿಸುವವರಿಗೆ, ವಿಶೇಷ ಸಂಕಲ್ಪ ಮಾಡಿಕೊಳ್ಳುವವರಿಗೆ ಸದವಕಾಶ ದೊರೆಯುತ್ತದೆ.

5. ಮಂತ್ರ ದೀಕ್ಷೆ, ಇಷ್ಟಲಿಂಗ ದೀಕ್ಷೆ, ಕ್ರಿಯಾಮೂರ್ತಿ ದೀಕ್ಷೆ ಪಡೆಯುವವರಿಗೆ ಅವಕಾಶ ಒದಗಿಸಲಾಗುವುದು. ಅವರು ಮೊದಲೇ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳನ್ನು ಸಂಪರ್ಕಿಸಬೇಕು.

6. ಕಲ್ಯಾಣ ಕಿರಣ ಪತ್ರಿಕೆ ದಾನಿಗಳಿಗೆ ಬರದಿರುವ ಬಗ್ಗೆ ಚಂದಾದಾರರಿಗೆ ತಲುಪದಿರುವ ಬಗ್ಗೆ ಬಹಳ ದೂರುಗಳು ಬರುತ್ತಲಿವೆ. ಆದ್ದರಿಂದ ಕಲ್ಯಾಣ ಕಿರಣಕ್ಕೆ ಸಂಬಂಧಿಸಿ ವಿಶೇಷ ಕಾರ್ಯಾಲಯ ತೆರೆದಿರಲಾಗುವುದು. ಸಾಧಕಿ ಸರ್ವ ಮಂಗಳಾ ಅವರನ್ನು ಈ ಬಗ್ಗೆ ಸಂಪರ್ಕಿಸಬೇಕೆಂದು ಕೋರಿ, ಚಂದಾದಾರರು ಲಭ್ಯವಿರುವ ಹಿಂದಿನ ಪ್ರತಿಗಳನ್ನು ಪಡೆಯಬೇಕೆಂದು ಕೋರುತ್ತೇವೆ.

ಬಸವ ಧರ್ಮ ಪೀಠದ ಯೋಜನೆಗಳಿಗೆ ಧನ ದಾಸೋಹ ಮಾಡಿದ ಶರಣ ಬಂಧುಗಳು

ಕಟ್ಟಡ ನಿಧಿಗಾಗಿ: ಶರಣರುಗಳಾದ:

ಕಮಲಾ ಸಿದ್ರಾಮ ಚೌಧರಿ, ಗೋಕಾಕ್ 71,000
ಗುಪ್ತದಾನಿ, ಗುಬ್ಬಿ 61,000-00
ಸಿ.ಆರ್. ವೀರಭದ್ರಯ್ಯ, ಚಳ್ಳಕೆರೆ 51,000-00
ಶಿವಕುಮಾರ್ ರಾಜಪ್ಪ ಅಂಗಡಿ, ಗೋಕಾಕ್ 11,111-00
ಪಿ. ಎಂ. ಬೆಲ್ಲದ, ಬೈಲಹೊಂಗಲ 10,001-00
ಎಚ್. ವಿ. ಸತ್ಯನಾರಾಯಣ, ಗುಬ್ಬಿ 10,000-00
ಶಾಂತಾ ಮಲ್ಲಿಕಾರ್ಜುನ ಶಿರಗಾಂವ್, ಗೋಕಾಕ್ 5,001-00
ರಾಜೇಶ್ವರಿ ದುಂಡಪ್ಪ ಬೆಟ್ಟದ ಗೌಡ್ರು, ಗೋಕಾಕ್ "
ನೀಲಮ್ಮ ಪಡವಯ್ಯ ಕರ್ಜಗಿ ಮಠ, " "
ಮಲ್ಲಿಕಾರ್ಜುನ ಹನಗಂಡಿ, " "
ಚಂಪಾ ಭೀಮಪ್ಪ ಕೊತ್ತಂಬರಿ, " "
ತಿಪ್ಪೇಸ್ವಾಮಿ, ಚಳ್ಳಕೆರೆ 3,001-00

ಬಸವ ಕಲ್ಯಾಣದಲ್ಲಿ 63 ಅಡಿ ಬಸವ ಮೂರ್ತಿಗಾಗಿ

ಸರಸ್ವತಮ್ಮ ಗರಗದ, ಧಾರವಾಡ 61,000-00
ಪ್ರೇಮ ಚಂದ್ರಯ್ಯಾ ಬಿ., ದಾವಣಗೆರೆ 12,000-00
ಬಾಳಪ್ಪ ಮಹಾಲಿಂಗಪ್ಪ ಇಂಗಳೆ, ಗೋಕಾಕ್ 11,111-00
ಪ್ರಭಾವತಿ ಸತ್ಯನಾರಾಯಣ ಖಡಕಬಾವಿ, -"-
ಅಶೋಕ ಈರಯ್ಯ ಹಿರೇಮಠ, -"-
ಸುನಂದ ಚೆನ್ನಪ್ಪ ಕುಬಸದ, -"-
ರೂಪಾ ರಾಜಶೇಖರ ಬೆಳೊಂಕೆ, -"-
ಬಸವರಾಜ್ ವೀರಭದ್ರಪ್ಪ ಜೇಲರ್, -"-
ವಿಶಾಬಾಯಿ ಮಾರುತಿ ಉತ್ತೂರ, -"-
ಮಹಾನಂದ ಮಹದೇವಪ್ಪ ಚಿಕ್ಕೋಡಿ, -"-
ಅಶೋಕ ಶಿವಶಂಕರ ತಡಕೋಡ, -"-
ಬಸವರಾಜ ಹನುಮಪ್ಪ ಶ್ಯಾಲಿ, -"-
ಚಂದ್ರಶೇಖರ ಗುರುಸಿದ್ದಪ್ಪ ಮಿರ್ಜಿ, -"-
ಎಂ.ಎಲ್. ಗದಾಡಿ, -"-
ಕಾಶಪ್ಪ ಸಾಬಣ್ಣಾ ಕಲಾ ಮತ್ತು ಮಕ್ಕಳು, -"-
ಸಿ.ಎಂ. ನಾಗರಾಜು, ಚೆನ್ನಪಟ್ಟಣ, 11,111-00
ಸಂಗಪ್ಪ ದುದ್ದಾಳೆ, ಗೋಕಾಕ್ 1011
ಡಾ|| ಬಸವಣ್ಣೆಪ್ಪ
ಎನ್. ಮಾಸ್ತ್ರಮರಡಿ, ಟಿಟಿ 1001-00

ಪುಸ್ತಕ ಪ್ರಕಟಣೆಗಾಗಿ ಶರಣರುಗಳಾದ:

ಡಾ|| ಎಂ.ಜಿ. ಉಮಾರಾಣಿ, ಗೋಕಾಕ್ 11,001-00
ಸರೋಜಮ್ಮ ಸಣ್ಣೇಗೌಡ, ಚೆನ್ನಪಟ್ಟಣ 11,000-00
ಚನ್ನಬಸವ ಅಡಿವೆಪ್ಪಾ ಬಿಜಲಿ, ಗೋಕಾಕ್ 5001-00
ಸುಶೀಲ ಶಿವಲಿಂಗಪ್ಪ ಶಿರಸಂಗಿ, -"-
ಸುಮಂಗಲ ಶ್ರೀಶೈಲ ಪಾಶ್ಚಾಪೂರ, -"-
ಡಿ. ಮಾದಯ್ಯ ಜಯಮ್ಮ ಚನ್ನಪಟ್ಟಣ, -"-

ಕೂಡಲಸಂಗಮ ದಾಸೋಹ ನಿಧಿಗಾಗಿ ರೂ. 5001-00 (ಮತ್ತು ಮೇಲ್ಪಟ್ಟು) ಪುದುವಟ್ಟು ಇಟ್ಟ ಶರಣ ಬಂಧುಗಳು:

ಕುಮಾರಸ್ವಾಮಿ ಎಚ್.ಎಸ್, ತುಮಕೂರು 11,111-00
ರಾಮಪ್ಪನವರು, ದಾಳಿಂಬ . 11,000-00
ಕೆಂಪಮ್ಮ ರುದ್ರಾಚಾರಿ, ಕನಕಪುರ 11,000-00
ಅನಸೂಯ ಮುದುಕಪ್ಪಾ ಹೊಸಮನಿ, ಗೋಕಾಕ್ 5,001-00
ಕುಬೇಂದ್ರಪ್ಪ ಶಂಕ್ರಪ್ಪ ಭೂತಿ, ಗೋಕಾಕ್ "
ಕಮಲಾಬಾಯಿ ಮಸೂರಕರ್, ಗೋಕಾಕ್ "
ಜಿ.ಎಚ್. ಹನುಮಂತಪ್ಪ ಚಳ್ಳಕೆರೆ "
ಗುಪ್ತದಾನಿ, ಗುಬ್ಬಿ "
ಎನ್.ಎಲ್. ಕೆಂಪಣ್ಣ ಚನ್ನಪಟ್ಟಣ "
ಸಿ.ವಿ. ಜಗದೀಶ್, ಚನ್ನಪಟ್ಟಣ "
ಕರಿಗೌಡ್ರು ತಂದೆ ಕೆಂಪೇಗೌಡ್ರು, ದಾಳಿಂಬ"
ಎಂ. ಶಿವಕುಮಾರ್, ಚನ್ನಪಟ್ಟಣ 5,000-00
ಶಿವಪ್ರಸಾದ, ಚನ್ನಪಟ್ಟಣ "
ಈರಣ್ಣಯ್ಯ, ಚನ್ನಪಟ್ಟಣ "
ಎಂ. ಮಹದೇವಸ್ವಾಮಿ, ಸಾತನೂರು "
ವಿಜಯ ನಂಜುಂಡಪ್ಪ ದಾವಣಗೆರೆ "

ಶಾರದಾ ಚಂದ್ರಕಾಂತ ಬಿರಾದರ್, ಗುಲ್ಬರ್ಗ

ಬಸವ ಕಲ್ಯಾಣ (1,201-00) ಮತ್ತು ಕೂಡಲ ಸಂಗಮ(1,101-00) ನಿತ್ಯ ದಾಸೋಹ ನಿಧಿಗಾಗಿ ಕಾಣಿಕೆ ನೀಡಿದವರು, ಶರಣರುಗಳಾದ :

ಬಿ. ಎಂ. ಮರಿಯಪ್ಪ, ಬಿಡದಿ 1,200-00
ತಿಮ್ಮಯ್ಯ ತಂದೆ ವೆಂಕಟೇಗೌಡ, ದಾಳಿಂಬ
ಶಿವಣ್ಣ ತಂದೆ ಬೈರೇಗೌಡ, ದಾಳಿಂಬ
ರಾಜಶೇಖರ ಲಿಂಗಾಯತ, ಬೆಳಗಾಂ
ವಿ.ಸಿ. ಬಸಪ್ಪ, ಕನಕಪುರ
ಕೆ.ಜಿ. ಶಿವನಂಜಪ್ಪ, ಕನಕಪುರ
ರಾಧಮ್ಮ ಪುಟ್ಟಸ್ವಾಮಿಗೌಡರು, ಚನ್ನಪಟ್ಟಣ
ಕೆ.ಆರ್. ಶಿವಪ್ಪ, ಕನಕಪುರ
ಅಶ್ವಥಪ್ಪನವರು, ಕನಕಪುರ
ಶಿವಣ್ಣ ತಂದೆ ಮಹಾಲಿಂಗಪ್ಪ, ಕನಕಪುರ
ನಾಗರತ್ನಮ್ಮ ನಾಗರಾಜು, ಕನಕಪುರ
ಮರಸಯ್ಯ ಮತ್ತು ರಂಗಸ್ವಾಮಿ, ಕನಕಪುರ
ಡಿ. ಶಿವಣ್ಣ, ಕನಕಪುರ
ರತ್ನಮ್ಮ ಬಸವರಾಜ, ಚನ್ನಪಟ್ಟಣ
ಕೆ.ಆರ್. ಸರ್ಪಭೂಷಣ, ಚನ್ನಪಟ್ಟಣ
ಗಿರಿಜಮ್ಮ ನಂಜಪ್ಪ, ಚನ್ನಪಟ್ಟಣ
ಎಚ್.ಜಿ. ಕಾಂತರಾಜಮ್ಮಣ್ಣಿ, ಚನ್ನಪಟ್ಟಣ
ಅಶೋಕ ನಿರಂಜಪ್ಪ ಪಾಟೀಲ, ಚನ್ನಪಟ್ಟಣ
ಶಿವಸ್ವಾಮಿ, ಚನ್ನಪಟ್ಟಣ
ಪುಟ್ಟಣ ತಂದೆ ಶಿವಬಸಪ್ಪ, ಸಾತನೂರು
ಎಂ.ಎನ್. ಚಿಕ್ಕಣ್ಣಯ್ಯ, ಸಾತನೂರು
ಎಸ್.ಎಸ್. ಪರಶಿವಯ್ಯ ತಮ್ಮೀಶೆಟ್ಟರು, ಸಾತನೂರು
ಎಲ್. ಶಿವಲಿಂಗಯ್ಯ, ಸಾತನೂರು
ಎಚ್.ಎಸ್. ಪುಟ್ಟವೀರಮ್ಮ, ಸಾತನೂರು
ವಿ. ಗುರುಸ್ವಾಮಿ ಮತ್ತು ಮಕ್ಕಳು, ಸಾತನೂರು
ಎಸ್.ಡಿ. ಶಿವಣ್ಣ ಮತ್ತು ಮಕ್ಕಳು, ಸಾತನೂರು
ಎಸ್.ವಿ. ಮಹದೇವ ಸ್ವಾಮಿ, ಸಾತನೂರು
ಶಿವರುದ್ರಪ್ಪ, ಸಾತನೂರು
ಮರಿದೇವರು, ಸಾತನೂರು
ಪುರಷೋತ್ತಮ ತಂದೆ ಚಿಕ್ಕಣ್ಣ, ಸಾತನೂರು
ಎಸ್.ಬಿ. ಚನ್ನಬಸಪ್ಪ, ಸಾತನೂರು
ಎಂ. ಪ್ರಕಾಶ್ ಪ್ರೇಮಾ, ಅಲಸೂರು
ಹರಿಹರ ಮಹದೇವಪ್ಪನವರು, ಸಾತನೂರು
ಎ.ಸಿ. ದೇವರಾಜ್ ಆಚಾರ್, ಸಾತನೂರು
ಪುಟ್ಟಗೌಡರು, ಸಾತನೂರು
ಚಿಕ್ಕರಾಮ ತಂದೆ ಕರಿಗೌಡರು, ಸಾತನೂರು
ಎಚ್.ಕೆ. ಶ್ರೀಕಂಠಪ್ಪ, ಹೊನಗನಹಳ್ಳಿ
ನಾಗರಾಜ ಆಚಾರ್, ಹಲಗೂರು
ಉಷಾ ಪುಟ್ಟೇಗೌಡ, ಸಾತನೂರು
ಅಂಬಿಕಾ ಮತ್ತು ಕುಟುಂಬ, ಚನ್ನಪಟ್ಟಣ
ಗೌರಿಶಂಕರ, ಸಾತನೂರು
ಶಿವಶಂಕರ ತಂದೆ ಬಸವ ಲಿಂಗಪ್ಪ, ಸಾತನೂರು
ಸವಿತ್ರಮ್ಮ ಜಯರಾಮೇಗೌಡರು, ಕಬ್ಬಾಳು
ತಾಯಮ್ಮ ಗುರುಲಿಂಗಪ್ಪ, ಕಬ್ಬಾಳು
ಪಾವನ ಎಸ್.ಎಚ್. ನಾಗರಾಜು, ಕಬ್ಬಾಳು
ಜಯರಾಮೇಗೌಡರು, ಸಾತನೂರು
ವೆಂಕಟರಾಜು ತಂದೆ ರಾಮಲಿಂಗೇಗೌಡ, ದಾಳಿಂಬ
ಎಸ್. ಕೆಂಪೇಗೌಡ, ದಾಳಿಂಬ
ಡಿ.ಎಲ್. ರಾಮಲಿಂಗಯ್ಯ, ದಾಳಿಂಬ
ತಾಯಮ್ಮ ಎಸ್.ವಿ. ಮಹದೇವಸ್ವಾಮಿ, ದಾಳಿಂಬ
ಅಹಲ್ಯ ಶಿವರಾಮಯ್ಯ, ಗುಬ್ಬಿ
ಶಕುಂತಲಾ ಜಿ.ಕೆ. ಬಸವರಾಜ್, ಗುಬ್ಬಿ
ಆರ್. ವೀರೇಶ ಪ್ರಸಾದ, ಗುಬ್ಬಿ
ಟಿ.ವಿ. ಹೇಮಲತಾ ಮತ್ತು ಅರ್ಜುನಯ್ಯಾ, ಗುಬ್ಬಿ
ಗುಬ್ಬಿಶೆಟ್ಟಪ್ಪ ಮತ್ತು ಮಕ್ಕಳು, ಗುಬ್ಬಿ
ಜಿ.ಸಿ. ಸಿದ್ಧಲಿಂಗಸ್ವಾಮಿ, ಗುಬ್ಬಿ
ಜಿ.ಎನ್. ಸೋಮಶೇಖರಪ್ಪ, ಗುಬ್ಬಿ
ಜಿ.ಆರ್. ಸ್ವಾಮಿ ಮತ್ತು ಮಕ್ಕಳು, ಗುಬ್ಬಿ
ಮಹೇಶ್ ತಂದೆ ಕೋಡಪ್ಪ, ಗುಬ್ಬಿ
ಬಿ. ಶಿವಕುಮಾರ್ ಸ್ವಾಮಿ, ಗುಬ್ಬಿ
ಎನ್.ಸಿ. ಚನ್ನಬಸಪ್ಪ, ಗುಬ್ಬಿ
ಜಿ.ಎಸ್. ಗುರುಲಿಂಗಪ್ಪ, ಗುಬ್ಬಿ
ಪರಿಮಳ ಮಹೇಶ್, ಗುಬ್ಬಿ
ರಾಜಮ್ಮ ಜಿ.ಬಿ. ರಾಜಶೇಖರಪ್ಪ, ಗುಬ್ಬಿ
ಗಟ್ಟಿ ನಿರ್ಮಲ, ಗುಬ್ಬಿ
ತ್ರಿವೇಣಿ ಮೈಲೇಶ್, ಗುಬ್ಬಿ
ಐ. ಸುಧ, ಚನ್ನಪಟ್ಟಣ,
ಕಲಾವತಿ ನಂಜುಂಡಸ್ವಾಮಿ, ಚನ್ನಪಟ್ಟಣ,

ಗಂಗಮ್ಮ ಕಲ್ಲಯ್ಯ ಮಠಪತಿ, ಚನ್ನಪಟ್ಟಣ,
ಲಿಂಗಮ್ಮ ಲಕ್ಷ್ಮಣ, ಚನ್ನಪಟ್ಟಣ,
ರುದ್ರಾಂಬಿಕ ರೇವಣಸಿದ್ಧಯ್ಯ, ಚನ್ನಪಟ್ಟಣ,
ಶಿವಮಾದಪ್ಪ ಚನ್ನಪಟ್ಟಣ,
ಪೊನ್ನಸ್ವಾಮಿ ತಂದೆ ಹೊನ್ನಯ್ಯ, ಚನ್ನಪಟ್ಟಣ,
ಜಯಮ್ಮ ಬಸಪ್ಪ, ಚನ್ನಪಟ್ಟಣ,
ಗೌರಮ್ಮ ರಾಮಸ್ವಾಮಿ, ಚನ್ನಪಟ್ಟಣ,
ಭ್ರಮರಾಂಬಿಕೆ ಮತ್ತು ಎಚ್.ಬಿ. ಷಡಕ್ಷರಿ, ಚನ್ನಪಟ್ಟಣ,
ಐ. ಕೈಲಾಸ, ಚನ್ನಪಟ್ಟಣ,
ಬಿ.ಬಿ. ಲಕ್ಷ್ಮೀಶ್ವರ, ಚನ್ನಪಟ್ಟಣ,
ಭಾರತಿ ಅಶ್ವಥ ನಾರಾಯಣ, ಕನಕಪುರ
ಸುಮಂಗಲ ಶಂಕರಗೌಡ ಪಾಟೀಲ್, ಗೋಕಾಕ್
ವಿನಯಗುರು ಯಲಿಗಾರ್, ಗೋಕಾಕ್
ಮಹದೇವ ರಾಮಪ್ಪ ನೇಗಿನಾಳ, ಗೋಕಾಕ್
ಜೆ.ಎಸ್. ಗುಂಡೇವಾಡಿ, ಗೋಕಾಕ್
ಶೈಲಾ ಮೋಹನ್ ಅಂಗಡಿ, ಗೋಕಾಕ್
ದೀಪಕ್ ಬಸವರಾಜ ಶೆಟ್ಟಿ ಗೋಕಾಕ್
ದ್ರಾಕ್ಷಾಯಿಣಿ ಅಪ್ಪಾಸಾಹೇಬ ಕತ್ತಿ, ಗೋಕಾಕ್
ನಿರ್ಮಲಾ ಬಸವರಾಜ್ ರಾಯರ್, ಗೋಕಾಕ್
ಕಸ್ತೂರಿ ಬಸವರಾಜ್ ಹಡಪದ, ಗೋಕಾಕ್
ಗೀತಾ ಮಹಲಿಂಗಪ್ಪ ನೇಗಿನಹಾಳ, ಗೋಕಾಕ್
ನಿಂಗಪ್ಪ ನಾಗಪ್ಪ ಕಾಡಗೌಡ್ರು, ಗೋಕಾಕ್
ಬಸವರಾಜ್ ಯರಗಟ್ಟಿ ಮರಡಿ ಶಿವಪುರ, ಗೋಕಾಕ್
ಗೀತಾಶಂಕರ್ ಅಮರಶೆಟ್ಟಿ ಗೋಕಾಕ್
ಡಾ|| ಮುತ್ತಣ್ಣ ಎಸ್. ಬಾಲವತ್ತಿ, ಗೋಕಾಕ್
ವಾಸಂತಿದೇವಿ ಚನ್ನಬಸಯ್ಯ ಹಿರೇಮಠ, ಗೋಕಾಕ್
ಡಾ|| ದಿನೇಶ್ ಕೌಶಿಕ್, ಗೋಕಾಕ್
ಬಸಲಿಂಗಪ್ಪ ನ್ಯಾಮಗೌಡ, ಗೋಕಾಕ್
ಪ್ರಕಾಶ್ ಮಲ್ಲಿಕಾರ್ಜುನ ಕೊಲ್ಹಾರ, ಗೋಕಾಕ್
ಅನುಸೂಯಾ ಜಯಪ್ರಕಾಶ್ ನಾವಲಗಿ, ಗೋಕಾಕ್
ಚಂದ್ರಕಲಾ ಸೋಮಣ್ಣ ದಳವಾಯಿ, ಗೋಕಾಕ್
ವಸಂತ ಸದಾಶಿವ ಕಾತಿ, ಗೋಕಾಕ್
ಅಶೋಕಗಂಗಮ್ಮ ಅಕ್ಕಿ, ಗೋಕಾಕ್
ಅಣ್ಣಪ್ಪ ಸಣ್ಣಬಸಪ್ಪ ಜಕಾತಿ, ಗೋಕಾಕ್
ಮಹಾದೇವಿ ಲಿಂಗನಗೌಡ ಪಾಟೀಲ್, ಗೋಕಾಕ್
ಶಿವಪ್ಪಾ ಅಮರಶೆಟ್ಟಿ ಗೋಕಾಕ್
ಜಗದೀಶ ಚೂನಮರಿ, ಗೋಕಾಕ್
ರಾಜಶೇಖರ ಎಸ್. ಲಿಂಗಾಯತ, ಗೋಕಾಕ್
ದುಂಡಪ್ಪ ಶಿವಲಿಂಗಪ್ಪ ಬಿಳ್ಳೂರ, ಗೋಕಾಕ್
ಮಹಾಲಿಂಗಪ್ಪ ಅಲ್ಲಪ್ಪಾ ಖೋತ, ಗೋಕಾಕ್
ನಾಗರಾಜ ಮ. ಪಟ್ಟಣಶೆಟ್ಟಿ ಗೋಕಾಕ್

ಕೂಡಲ ಸಂಗಮ ಪೂಜಾ ನಿಧಿಗಾಗಿ ರೂ. 501-00 ಕಾಣಿಕೆ ನೀಡಿದವರು

ಶರಣರುಗಳಾದ:
ಬಾಳಪ್ಪ ಮಹದೇವಪ್ಪ ಇಂಗಳೆ
ಸಂಗೀತಾ ಶಿವಾನಂದ ಬನ್ನೂರ
ಡಾ|| ಶಂಕರ ಮುರಿಗೆಪ್ಪಾ ಕಲ್ಯಾಣ ಶೆಟ್ಟಿ
ಡಿ. ಆರ್. ಪಾಟೀಲ್, ಗೋಕಾಕ್
ಶೀಖರ್ ಚನ್ನಬಸಪ್ಪ ಮಹಾಂತಶೆಟ್ಟಿ, ಗೋಕಾಕ್
ಸರೋಜಿನಿ ಹೊಳಪ್ಪ ಹಟ್ಟಿಹೊಳಿ, ಗೋಕಾಕ್
ಸಾವಿತ್ರಮ್ಮ ಹಡಪದ, ಗೋಕಾಕ್
ಶ್ರೀಗೌರೀಶಂಕರ ಆಯಿಲ್ ಮಿಲ್, ಗೋಕಾಕ್
ಡಾ|| ರಂಗಪ್ಪ ಕುರಿ, ಗೋಕಾಕ್
ಡಾ|| ಆರ್.ಜಿ. ಬಾಡಗಂಡಿ, ಗೋಕಾಕ್
ಸುಕುಮಾರ ಪತ್ರಾವಳಿ, ಗೋಕಾಕ್
ಜೆ.ಕೆ. ಜವರ್ ಮತ್ತು ಸಹೋದರರು, ಗೋಕಾಕ್
ಮಲ್ಲಿಕಾರ್ಜುನ ಕೆ. ಕಲ್ಲೊಳ್ಳಿ, ಗೋಕಾಕ್
ಆರ್.ಎಂ. ಹುನ್ನೂರ, ಗೋಕಾಕ್
ಎಚ್. ಹುಂಡೇಕರ, ಗೋಕಾಕ್
ಎಸ್.ಬಿ. ಅಂಗಡಿ, ಗೋಕಾಕ್
ಭೀಮರಾಯ, ಗೋಕಾಕ್
ರಾಜಶೇಖರ ಮಹಾಲಿಂಗಯ್ಯ ಹಿರೇಮಠ, ಗೋಕಾಕ್
ಬಸವರಾಜ್ ಚನ್ನಮಲ್ಲಪ್ಪ ಕರಿಶೆಟ್ಟಿ ಗೋಕಾಕ್
ಸದಾಶಿವಯ್ಯ ಎಚ್. ಹಾಲಭಾವಿ, ಗೋಕಾಕ್
ಡಾ|| ಕಾಮತ್, ಗೋಕಾಕ್
ಕೆಂಪಣ್ಣ ಗುರುಬಸಪ್ಪ ಹುರಕಡ್ಲಿ, ಗೋಕಾಕ್
ಎಸ್.ಎಂ. ಬಸವರಾಜು, ಚನ್ನಪಟ್ಟಣ
ರಾಜಶೇಖರ ಹನುಮಂತಯ್ಯ ಪೂಜಾರ್ ಶಿರಸಂಗಿ
ಕೆ.ಎಲ್. ಶಿವಲಿಂಗೇಗೌಡರು, ಸಾತನೂರು
ಮಹದೇವಯ್ಯ, ಹಲಸೂರು
ಎಸ್.ವಿ. ಮಹದೇವಸ್ವಾಮಿ, ಸಾತನೂರು
ಎಸ್. ಲಿಂಗೇಶ್ ಕುಮಾರ್, ಚನ್ನಪಟ್ಟಣ
ಶಿವಮಾದೇಗೌಡ ತಂದೇ ಮಾದೇಗೌಡರು, ಕಬ್ಬಾಳು

ಸಂಜೀವ ಸ್ವಾಮಿ, ಗಾದಗಿ
ಬಿ.ಡಿ. ರುದ್ರಪ್ಪ, ಬಿಜ್ಜನಹಳ್ಳಿ
ಸಿದ್ಧರಾಮ ತಂದೆ ಬಿ.ಎಲ್. ರಾಮು, ಕನಕಪುರ
ಆರ್. ನಾಗರಾಜು, ಕನಕಪುರ
ಲಕ್ಷ್ಮಮ್ಮ ಕೃಷ್ಣಪ್ಪ ಚನ್ನಪಟ್ಟಣ

ವಿದೇಶ ಪ್ರವಾಸದ ಸಮಯದಲ್ಲಿ ಬಸವ ಕಲ್ಯಾಣದ ಬಸವ ಮಹಾಮನೆಯ ಕಟ್ಟಡ ಕಾಮಗಾರಿ ನಿಲ್ಲದಂತೆ ನೆರವು ನೀಡಿದ ಶರಣ ಬಂಧುಗಳು :

ಶಂಕರಪ್ಪ ಪಾಟೀಲ್, ಜಹಿರಾಬಾದ್ 20,000-00
ಲಿಂಗದೇವ ಮಿತ್ರ ಮಂಡಳಿ,
ರಾಷ್ಟ್ರೀಯ ಬಸವ ದಳ, ಬೀದರ್
(ಸಾಮೂಹಿಕ ಸಂಗ್ರಹ) 15,000-00
ಬಿ. ಜಯದೇವ್, ಬೆಂಗಳೂರು 5,000-00
ಶೀತಲ್ ಕಾಶೀನಾಥ ಸೂರ್ಯವಂತಿ, ಬೀದರ್
5,000-00
ಸಿದ್ಧಯ್ಯ ಕವಡೀಮಠ, ಬೀದರ್ 5,000-00
ಬಾಗಣ್ಣ ಭೀಮಣ್ಣ ಹೊಸಮನಿ, ಹೊಸೂರು
5,000-00
ಭೀಮಣ್ಣ ಜಕಾತೆ, ಹೊಸೂರು 5,000-00
ಶಿವರಾಯ ಚಂದ್ರಕಂಠಿ, ಸಾಲೇಬೀರನಹಳ್ಳಿ
5,000-00
ಪಾರ್ವತಿ ಗಂಗಶೆಟ್ಟಿ ಪಾಟೀಲ್, ಬೀದರ್ 5,100-00
ಶಿವಶರಣಪ್ಪ ಪಾಟೀಲ್, ಬೀದರ್ 5000-00
ಸಂಗಮ್ಮ ಮಾಳಗಿ, ಧಾರವಾಡ 2001-00
ಸರೋಜಿನಿ ಗಂಗಾಧರ ಪಾಟೀಲ್, ಬೀದರ್
2050-00
ಯಕಲಾರ ರಾಷ್ಟ್ರೀಯ ಬಸವ ದಳ 2051-00
ಸವಿತಾ ಅನಿಲಕುಮಾರ್ ಪಾಟೀಲ 2001-00
ದೀಪಕ್ ಹಿರೇಮಠ, ಬಾರ್ಸಿ 1501-00
ಬಸವರಾಜ ಗಾಯತೊಂಡೆ, ಬೀದರ್ 1500-00
ನಾಗಶೆಟ್ಟೆಪ್ಪ ದಾಡಗೆ, ಬೀದರ್ 1100-00
ಚಂದ್ರಪ್ಪ ಗೌರಶೆಟ್ಟಿ, ಬೀದರ್ 1051-00
ಅಡಿವೆಪ್ಪ ತಂಬಾಕೆ, ತಾಳಮಡಗಿ 1100-00
ಮಲ್ಲಿಕಾರ್ಜುನ ಜೇಲರ್, ಬೀದರ್ 1100-00
ಮಲ್ಲಿಕಾರ್ಜುನ ಪುಲಾರೆ, ಗುಲಬರ್ಗಾ 1111-00
ಕುಶಲರಾವ್ ಪಾಟೀಲ್, ಬೀದರ್ 1000-00
ಗಂಗಮ್ಮ ಸಿದ್ಧಪ್ಪ ಸಾವಳೆ, ಬೀದರ್ 1000-00
ಮಹಾನಂದ ಪ್ರಕಾಶ್ ಧರಣಿ, ಬೀದರ್ 1000-00
ವಿಶ್ವನಾಥ ಪಾಟೀಲ್, ಬೀದರ್ 1000-00
ದೇವಮ್ಮ ಚಂದ್ರಾಮಪ್ಪ ಹಡಪದ, ಗುಲಬರ್ಗಾ
1111-00
ಚನ್ನಮ್ಮ ಸೂಗಣ್ಣ ಯಲಗಟ್ಟಿ, ಗುಲಬರ್ಗಾ 1111-00
ವಿಲಾಸಿನಿ ಸಿದ್ಧರಾಮಪ್ಪ ಲಖಿಮಣ, ಗುಲಬರ್ಗಾ
1111-00
ಗುರುಬಾಯಿ ಸಂಗನಬಸಪ್ಪ
ಮೂಲೀಮನಿ, ಗುಲಬರ್ಗಾ 1111-00
ಪಾರ್ವತಿ ಮಡಿವಾಳಪ್ಪ ಹುಡುಗಿ, ಗುಲಬರ್ಗಾ
1111-00
ಬಸವಣ್ಣೆಪ್ಪ ದೇವಣಗಾಂವ, ಗುಲಬರ್ಗಾ 1111-00

(....... ಮುಂದುವರಿಯುವುದು)


ಶರಣರುಗಳಾದ

ಮಲ್ಲಿಕಾರ್ಜುನ ಮೂಲಗೆ, ಬಸವ ಜ್ಯೋತಿ, ರಮೇಶ್ ಪಾಟೀಲ್, ನೀಲಮ್ಮ ವೀರಬಸಪ್ಪ ಪಾಟೀಲ್, ಶ್ರೀನಾಥ ವೈಜನಾಥ್‌ರಾವ್ ಕೋರೆ, ಶರಣಮ್ಮ ಪ್ರಭುಶೆಟ್ಟಿ ಚಟ್ನಳ್ಳಿ, ಶ್ಯಾಮಲಾ ಅಶೋಕ ಎಲಿ, ರಾಜೇಂದ್ರ ಕುಮಾರ್ ಜೊನ್ನಿಕೇರಿ, ಸರಸ್ವತಿ ಶೇಷಪ್ಪ ಬಿರಾದಾರ್, ಇಂದುಮತಿ ತಗಾರೆ, ಚಂದ್ರಕಲಾ ಅಪ್ಪಾರಾವ್ ಬೀದರ್, ಬಸಮ್ಮ ಬಸವಂತ ರಾವ್ ಬಿರಾದರ್, ರೂಪಾವತಿ ನೀಲಕಂಠಪ್ಪ ಪಾಟೀಲ್, ಗಿರಿಜಾ ಸಿದ್ಧರಾಮಪ್ಪ ಹಂಗರಗೀಕರ್, ಕಾಸಾರ ಸಿರ್ಸಿ ಇವರುಗಳು ರೂ. 501-00 ಕೊಟ್ಟಿದ್ದಾರೆ.

ಶರಣೆ. ಆರತಿ ರಾಜಕುಮಾರ್ ಗಾದಗಿ, ಬೀದರ್ ಇವರು ಒಂದು ಲೋಡ್ ಲಾರಿ ಮರಗಳನ್ನು ಕೊಟ್ಟಿದ್ದಾರೆ. ಉದಗೀರ್ ರಾಷ್ಟ್ರೀಯ ಬಸವ ದಳದವರು 102 ಊಟದ ತಟ್ಟೆಗಳನ್ನು ಕೊಟ್ಟಿದ್ದಾರೆ.

ಇವರೆಲ್ಲರಿಗೂ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮ ಗುರು ಬಸವಣ್ಣನವರು ಇನ್ನೂ ಹೆಚ್ಚಿನ ಆಯುಷ್ಯ, ಆರೋಗ್ಯ, ಸಂಪತ್ತನ್ನು ಕರುಣಿ ಕಾಪಾಡಲೆಂದು ಆಶೀಸುತ್ತೇವೆ.

- ಮಾತಾಜಿ



ಎಪ್‌ಕಾಟ್‌ನ ಅಂತರಿಕ್ಷಯಾನ ವಿಭಾಗ



ಎಪ್‌ಕಾಟ್‌ನ ಸಂಗೀತ ಕಾರಂಜಿ

CPMG/KA/BGW - 30/2003 - 2..
WPP (W) - 17 R.No. 19980/70



ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಲು ಬಂದ ಪೂಜ್ಯರುಗಳು ಪೂಜ್ಯ ಮಾತಾಜಿಯವರನ್ನು ಸ್ವಾಗತಿಸಿದ ಬಳಿಕ ಹರ್ಷದ ಹೊನಲಿನಲ್ಲಿ